ಕರ್ನಾಟಕ ವಿಧಾನ ಸಭೆ

ಶನಿವಾರ, 26ನೇ ಮಾರ್ಚಿ 1983. ಚೈತ್ರ 5, 1905

ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಒಂಭತ್ತು ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ವೀರಣ್ಣ) ಪೀಠವನ್ನು ಅಲಂಕರಿಸಿದರು.

ವಿತ್ತೀಯ ಕಾರ್ಯಕಲಾಪಗಳು

(1983-84 ನೇ ಸಾಲಿನ ಆಯವ್ಯಯ ಮುಂಗಡ ಪತ್ರದ. ಮೇಲಿನ ಚರ್ಚೆಗೆ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) --ಮಾನ್ಯ ಅಧ್ಯಕ್ಷರೆ ಕಳೆದ 6 ದಿನಗಳಿಂದ 1983-84 ನೇ ಸಾಲಿನ ಮುಂಗಡ ಪತ್ರದ ಮೇಲೆ ಈ ಸಭೆಯಲ್ಲಿ ದೀರ್ಘವಾದಂಥ ಚರ್ಚೆಯಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರದ ರೀತಿ ನೀತಿಗಳನ್ನು ಟೀಕೆ ಮಾಡಿದಂತಹವರೂ ಇದ್ದಾರೆ, ಹೊಗಳಿದಂತಹವರೂ ಇದ್ದಾರೆ. ನಾನು ಆ ಎಲ್ಲಾ ಸದಸ್ಯರಿಗೂ ಋಣಿಯಾಗಿದ್ದೇನೆ; ಅವರೆಲ್ಲರಿಗೂ ನನ್ನ ವಂದನೆಗಳು. ಹೊಗಳಿಕೆ ಮತ್ತು ತೆಗಳಿಕೆ ಎರಡೂ ನನ್ನ ದೃಷ್ಟಿಯಲ್ಲಿ ಅಷ್ಟೇ ಮಹತ್ವದ್ದು. ತಿಳಿದವರು ನಿಂದಕರು ಇರಬೇಕು ಎಂದು ಹೇಳಿದ್ದಾರೆ, ಏಕೆಂದರೆ ನಿಂದಕರಿಂದ ಕೂಡ ಸಮಾಜಸೇವೆ ಆಗುತ್ತದೆ. ಅದಕ್ಕಾಗಿ ದೇವರು ಹಂಸಗಳನ್ನು ಹೇಗೆ ಸೃಷ್ಟಿ ಮಾಡಿದ್ದಾನೋ ಹಾಗೆಯೇ ಹದ್ದುಗಳನ್ನೂ ಸೃಷ್ಟಿ ಮಾಡಿದ್ದಾನೆ. ಹಂಸದ ಸ್ವಭಾವ ಏನೆಂದರೆ, ಹಾಲಿನಲ್ಲಿ ನೀರು ಸೇರಿದ್ದರೂ ಆ ನೀರನ್ನು ಪ್ರತ್ಯೇಕಿಸಿ ಬರೀ ಹಾಲನ್ನು ನೋಡುತ್ತದೆ ಮತ್ತು ತೆಗೆದುಕೊಳ್ಳುತ್ತದೆ. ಆದರೆ ಹದ್ದಿನ ಸ್ವಭಾವ ಏನೆಂದರೆ, ಕೊಳೆತು ನಾರತಕ್ಕ ಯಾವುದೇ ವಸ್ತುವಿನ ಮೇಲೆ ಎರಗುತ್ತದೆ; ಮತ್ತು ಅದನ್ನು ಭಕ್ಷಣೆ ಮಾಡುತ್ತದೆ. ಇವೆರಡರಿಂದಲೂ ಉಪಯೋಗವಿದೆ, ನಾನು ಉಪಯೋಗ ಇಲ್ಲವೆಂದು ಹೇಳುತ್ತಾ ಇಲ್ಲ.

ಶ್ರೀ ಬಿ. ಶಿವಣ್ಣ.--ಪಾಯಿಂಟ್ ಆಫ್ ಆರ್ಡರ್ ವಿರೋಧಪಕ್ಷದವರಾದ ನಾವು ನಮ್ಮ ಕರ್ತವ್ಯವನ್ನು ಮಾಡುತ್ತಾ ಇದ್ದೇವೆ; ಈಗ ನಮ್ಮನ್ನು ಹದ್ದಿಗೆ ಹೋಲಿಸುವುದು ಸರಿಯಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.--ಇವರಿಗೆ ಹದ್ದು ಎಂದು ಹೇಳಲಿಲ್ಲ, ಆದರೂ ಏಕೆ ಮಾತನಾಡುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ.--ಕ್ರಿಟಿಸಿಸಂ ಮಾಡತಕ್ಕಂಥಾದ್ದು ನಮ್ಮ ಹಕ್ಕು, ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ನಮ್ಮನ್ನು ಹದ್ದಿಗೆ ಹೋಲಿಸುವುದು ಸರಿಯಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.--ಇವರಿಗೆ ಹದ್ದು ಎಂದು ಯಾರು ಹೇಳಿದರು, ಯಾರು ಹೇಳಲಿಲ್ಲವಲ್ಲಾ ?

ಶ್ರೀ ರಾಮಕೃಷ್ಣ ಹೆಗಡೆ.-- ಮಾನ್ಯ ಶಿವಣ್ಣನವರಿಗೆ ಗಿಲ್ಟಿ ಕಾನ್ಷನ್ಸ್, ಅದಕ್ಕೆ ನಾನೇನು ಮಾಡಲಿ ? ಈ ಎರಡೆರಡೂ ಉಪಯೋಗವಿದೆ ಎಂದು ನಾನು ಹೇಳಿದೆ ಸೃಷ್ಟಿಕರ್ತ ಮಾಡಿರುವುದು ಹಾಗೆ. ಆದರೆ ಹದ್ದುಗಳ ಸ್ವಭಾವವೇನೆಂದರೆ, ಯಾವುದಾದರೂ ಪ್ರಾಣಿ ಸಾಯುತ್ತದೆಯೋ ಎಂದು ಮೇಲಿದ್ದು ನೋಡುವುದು; ಬಂದು ಎರಗಲಿಕ್ಕೆ. ನನ್ನ ಎದುರಿಗೆ ಕುಳಿತಂಥ ಸ್ನೇಹಿತರಿಗೆ ಇಂದು ಒಂದು ಅಭದ್ರತೆಯ ಭೂತ ಬಡಿದಿದೆ. ಅವರ ಭಾಷಣದ ಉದ್ದಕ್ಕೂ ಸರ್ಕಾರ ಅಭದ್ರವಾಗಿದೆ ಈ ಸಮಾಜ ಅಭದ್ರವಾಗಿದೆ, ಆಮೇಲೆ ಆರ್ಥಿಕ ಸ್ಥಿತಿಯಂತೂ ಅಭದ್ರವಾಗಿದೆಯೆಂದು ಹೇಳುತ್ತಾ ಬಂದಿದ್ದಾರೆ ಈ ಭೂತ ನಿವಾರಣೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಕರೆದುಕೊಂಡು ಹೋಗಬೇಕು, ಅಲ್ಲಿ ಅದಕ್ಕೆ ಸರಿಯಾದಂಥ ಮದ್ದು ಇದೆ. ಮಾನ್ಯ ಮೊಯಿಲಿಯವರು ಆ ಜಿಲ್ಲೆಯಿಂದ ಬರುತ್ತಾ ಇದ್ದಾರೆ. ನಾನು ಪ್ರಾರಂಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ, ಏನೆಂದರೆ, ನೀವು ಏನಾದರೂ ಸರ್ಕಾರ ಅಭದ್ರವಾಗಿದೆ ಎಂದು ಹೇಳತಕ್ಕಂಥ ಹಗಲುಗನಸನ್ನು ನೋಡುತ್ತಾ ಇದ್ದರೆ ಆ ಕನಸು ಎಂದೂ ನನಸಾಗುವುದಿಲ್ಲ. ಈ ಸರ್ಕಾರ ಎಷ್ಟು ಭದ್ರವಾಗಿರಬೇಕೋ ಅಷ್ಟು ಭದ್ರವಾಗಿದೆ. ಅದರ ಬಗ್ಗೆ ನಿಮಗೆ ಕನವರಿಕೆ ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಎಷ್ಟೇ ಅಭದ್ರವಾಗಿದ್ದರೂ ನೀವು ಸರ್ಕಾರ ಬಿಡುವಂತೆ ಮಾಡುವುದಿಲ್ಲ ; ನಾವು ನೀವು ಆಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವೀರಪ್ಪ ಮೊಯಿಲಿಯವರ ಮಾತು ಮತ್ತು ಕೃತಿ ಎಷ್ಟು ದೂರ ಹೋಗಬಹುದು ಎನ್ನುವುದನ್ನು ಈಗ ಅವರೇ ತೋರಿಸಿಕೊಟ್ಟರು ಆ ದೂರವನ್ನು ವಿಸ್ತೃತ ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಮಾನ್ಯ ಸದಸ್ಯರಲ್ಲಿ ನನ್ನ ಒಂದು ನಿವೇದನೆ ಯೇನೆಂದರೆ, ಈ ವಾರ್ಷಿಕ ಮುಂಗಡ ಪತ್ರ ಏನಿದೆ, ಇದು ಪಂಚವಾರ್ಷಿಕ ಯೋಜನೆಯ ಕರಡಲ್ಲ. ಅನೇಕ ಜನ ಮಾನ್ಯ ಸದಸ್ಯರಿಗೆ ಇದು ಪಂಚವಾರ್ಷಿಕ ಯೋಜನೆಯ ಒಂದು ಕರಡು ಎಂಬ ತಿಳುವಳಿಕೆ ಇದೆಯೋ ಎನ್ನುವಹಾಗೆ ಅವರ ಭಾಷಣದ ಶೈಲಿ ಇತ್ತು. ಉದಾಹರಣೆಗೆ ಹೇಳುವುದಾದರೆ, ಚುನಾವಣಾ ಪ್ರಣಾಳಿಕೆಯಲ್ಲಿ ಜನತಾ ಪಕ್ಷ ಏನು ಹೇಳಿತ್ತು. ಅದರಲ್ಲಿ ಕೆಲವು ಬಿಟ್ಟು ಹೋಗಿವೆ, ಅದನ್ನು ಏಕೆ ಸೇರಿಸಿಲ್ಲ, ಎಂಬ ಟೀಕೆಯನ್ನು ಅನೇಕ ಜನ ಮಾನ್ಯ ಸದಸ್ಯರು ಮಾಡಿದರು ಯಾವುದೇ ಪಕ್ಷವಾಗಲಿ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದರೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿರತಕ್ಕಂಥ ಎಲ್ಲಾ ಕಾರ್ಯಕ್ರಮವನ್ನು ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ಆಗಲಿ ಮೊದಲನೇ ವರ್ಷದಲ್ಲೇ ಆಗಲಿ ಜಾರಿಗೆ ತರತಕ್ಕಂಥಾದ್ದು ಸಾಧ್ಯವಿಲ್ಲ. ಆದರೆ ಒಂದು ವರ್ಷದಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದಂಥ ಪಕ್ಷ ಜನತೆಗೆ ಚುನಾವಣೆ ಸಮಯದಲ್ಲಿದೆ ಕೊಟ್ಟಂಥ ಮಾತುಗಳನ್ನು ನಡೆಸುವ ದಿಸೆಯಲ್ಲಿ ಪ್ರಯತ್ನ ಮಾಡಿದೆಯೋ ಇಲ್ಲವೋ ಎಂಬುದು ಮುಖ್ಯ. ಹಾಗೆಯೇ ಒಂದೇ ಸಲ ಪ್ರಣಾಳಿಕೆಯಲ್ಲಿರತಕ್ಕ ಎಲ್ಲಾ ಕ್ರಮಗಳನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಯಾವ ಪಕ್ಷವೂ ಇವತ್ತಿನ ವರೆಗೆ ಮಾಡಿಲ್ಲ. ಈ ಒಂದು ದೃಷ್ಟಿಯಿಂದ ನೋಡುವುದಾದರೆ, ನನ್ನ ವಿನಮ್ರವಾದ ಅಭಿಪ್ರಾಯ ಏನೆಂದರೆ, ಈ ಮುಂಗಡ ಪತ್ರ, ಜನತಾ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಯಾವ ಯಾವ ಗೊತ್ತು ಗುರಿಗಳನ್ನು ಯಾವ ಯಾವ ಕಾರ್ಯಕ್ರಮಗಳ ಯಾವ ಯಾವ ನೀತಿಗಳನ್ನು ಹೇಳಿತ್ತೋ ಆ ದಿಸೆಯಲ್ಲಿ ಸರ್ಕಾರ ಹೋಗುತ್ತಿದೆ; ಮತ್ತು ದಿಟ್ಟವಾದ ಕೆಲವು ಹೆಜ್ಜೆಗಳನ್ನು ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ಇದು ಸಾಕ್ಷಿಯಾಗಿದೆ. ಇದರಲ್ಲಿ ಏನೆ ಅತಿಶಯೋಕ್ತಿ ಇಲ್ಲ ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ಕಳೆದ 5 6 ದಿವಸಗಳಲ್ಲಿ ಮಾನ್ಯ ಸದಸ್ಯರುಗಳು ಅನೇಕ ಟೀಕೆಗಳನ್ನು ಅನೇಕ ಸೂಚನೆಗಳನ್ನು ಮಾಡಿದ್ದಾರೆ; ಅವುಗಳಿಗೆ ಉತ್ತರ ಕೊಡುವುದಕ್ಕೆ ಮುನ್ನ, ಸಾಮಾನ್ಯವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇದನ್ನು ಈಗ ಹೇಳಿದರೆ ಅಪ್ರಸ್ತುತವಾಗಲಾರದು. ಕೆಲವು ದಿವಸಗಳ ಹಿಂದೆ ಬೆಂಗಳೂರಿನಲ್ಲಿ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನ ಆಯಿತು. ಈ ಸಮ್ಮೇಳನದ ಉದ್ದೇಶ ಅತ್ಯಂತ ಸ್ಪಷ್ಟವಾಗಿತ್ತು ಮತ್ತು ಸೀಮಿತ್ತವಾಗಿತ್ತು. ಇನ್ನು ಕೆಲವೇ ದಿನಗಳಲ್ಲಿ 8ನೇ ಆರ್ಥಿಕ ಆಯೋಗ ದಕ್ಷಿಣ ರಾಜ್ಯಗಳಿಗೆ ಭೇಟಿಕೊಡಲಿದೆ. ಆ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ತಮ್ಮ ತಮ್ಮ ಆರ್ಥಿಕ ಪರಿಸ್ಥಿತಿಯ ಬಗ್ಗೆ ತಮ್ಮ ತಮ್ಮ ವಿಚಾರಗಳ ಬಗೆ ಮತ್ತು ಆರ್ಥಿಕ ಅವಶ್ಯಕತೆಗಳ ಬಗ್ಗೆ ವಿತ್ತೀಯ ಆಯೋಗದ ಮುಂದೆ ಮನವಿಯನ್ನು ಕೊಡಬೇಕು, ಇಂಥ ಒಂದು ಹಿನ್ನೆಲೆಯಲ್ಲಿ ನಾನು ಯೋಚನೆ ಮಾಡಿದೆ, ಒಬ್ಬರೇ ಕೂತುಕೊಂಡು ಎಷ್ಟೇ ಯೋಚನೆ ಮಾಡಿ ತಯಾರು ಮಾಡಿದಂಥ ಮನವಿಗೂ 4-5 ರಾಜ್ಯಗಳು ಒಂದೇ ಪ್ರದೇಶದಲ್ಲಿ ತಮ್ಮ ತಮ್ಮ ಅನುಭವ ತಮ್ಮ ತಮ್ಮ ವಿಚಾರಗಳನ್ನು ವಿನಿಯೋಗ ಮಾಡಿಕೊಂಡು ಒಂದು ಮನವಿಯನ್ನು ತಯಾರು ಮಾಡಿ ಅದರ ಮೂಲಕ ಹೆಚ್ಚು ಪ್ರಭಾವ ಬೀರಿದರೆ ಉಪಯುಕ್ತವಾಗಬಹುದು ಎಂದು ಯೋಚನೆ ಮಾಡಿ, ಆ ದಿಕ್ಕಿನಲ್ಲಿ ಈ ಸಮ್ಮೇಳನ ಮಾಡಲಾಯಿತು. ಇದರ ಜೊತೆಗೆ ಅನೇಕ ಸಂದರ್ಭಗಳಲ್ಲಿ ಒಂದೇ ಪ್ರದೇಶಗಳಲ್ಲಿರತಕ್ಕ ರಾಜ್ಯಗಳಿಗೆ ಪರಸ್ಪರ ಸಹಾಯ ಮತ್ತು ಸಹಕಾರದ ಅಗತ್ಯ ಇದೆ ನಮಗೆ ವಿದ್ಯುಚ್ಛಕ್ತಿ ಕೊರತೆ ಇತ್ತು ಆಂಧ್ರದಲ್ಲಿ ವಿದ್ಯುಚ್ಛಕ್ತಿ ಸ್ವಲ್ಪಮಟ್ಟಿಗೆ ಹೆಚ್ಚಳ ಇತ್ತು ನಮಗೆ ಕೊರತೆ ಇದ್ದಾಗ, ಅವಶ್ಯಕತೆ ಇದ್ದಾಗ, ಆಂಧ್ರ ಸರ್ಕಾರದ ನೆರವು ಮತ್ತು ಸಹಕಾರ ಕೇಳಿದರೆ ತಪ್ಪೇನೂ ಇಲ್ಲ. ಮೊನ್ನೆ ಮೊನ್ನೆ ತಮಿಳುನಾಡಿನಲ್ಲಿ ಮುಖ್ಯವಾಗಿ ತಂಜಾವೂರು ಈ ಕಡೆ ಇದ್ದಂಥ ರೈತರಿಗೆ ನೀರು ಇಲ್ಲವೇ ಬೆಳೆಗಳೆಲ್ಲಾ ಒಣಗಿಹೋಗುವಂಥ ಸಮಯದಲ್ಲಿ ತಮಿಳು ನಾಡು ಮುಖ್ಯಮಂತ್ರಿಯವರು ನಾಲ್ಕು ಸಲ ಕೇಳಿಕೊಂಡರು ; ನಮಗೆ ತೊಂದರೆ ಇದ್ದರೂ ಕೂಡ ಸದ್ಭಾವನೆಯಿಂದ ಇವತ್ತು ಅವರಿಗೆ 3 ಟಿ. ಎಂ. ಸಿ. ಎಫ್. ಟಿ ನೀರು ಕೊಟ್ಟು ನೆರವು ನೀಡಿದ್ದೇವೆ; ನಾಳೆ ನಮಗೆ ಅವಶ್ಯಕತೆ ಇದ್ದಾಗ ಕಷ್ಟ ಇದ್ದಾಗ ಅವರು ಕೂಡ ನಮ್ಮ ನೆರವಿಗೆ ಬರಬಹುದು. ಈ ಸಮ್ಮೇಳನದ ಉದ್ದೇಶ ಮತ್ತು ವ್ಯಾಪ್ತಿ ಸೀಮಿತವಾಗಿದೆ. ಈಗ ಇದು ನಡೆದಿರುವುದು ದೇಶದ ಒಳ್ಳೆಯದಕ್ಕೆಂದು ಹೇಳುತ್ತೇನೆ. ಸುದೈವದಿಂದ ಈ ಸಮ್ಮೇಳನಕ್ಕೆ ಎಷ್ಟು ಮಹತ್ವ ಕೊಡಬೇಕಾಗಿತ್ತೋ, ಇದರ ವ್ಯಾಪ್ತಿ ಎಷ್ಟರಮಟ್ಟಿಗೆ ಸೀಮಿತವಾಗಬೇಕಾಗಿತ್ತೋ, ಅದಕ್ಕಿಂತಲೂ ನೂರು ಪಟ್ಟು ಮಹತ್ವ ಇದಕ್ಕೆ ಬಂತು, ಹಾಗೂ ಇದರ ವ್ಯಾಪ್ತಿ ಹೆಚ್ಚಾಯಿತು. ಅದಕ್ಕಾಗಿ ನಾನು ಮುಖ್ಯವಾಗಿ ಕಾಂಗ್ರೆಸ್(ಐ) ಬಾಂಧವರಿಗೆ ಋಣಿಯಾಗಿದ್ದೇನೆ. ಇಂದು ಕೂಡ ದೇಶದ ಬೇರೆ ಬೇರೆ ಭಾಗಗಳಲ್ಲಿ

ಕಾಂಗ್ರೆಸ್ (ಐ) ನಾಯಕರು ಮಾತನಾಡುವಾಗ ತಮ್ಮ ವಿಚಾರವನ್ನು ವ್ಯಕ್ತ ಪಡಿಸುವಾಗ ಡೆಲ್ಲಿಯಲ್ಲಿ ಕೇಳಿ ವ್ಯಕ್ತಪಡಿಸಬೇಕು. ಅಲ್ಲಿ ಸ್ವಿಚ್ ಹಾಕಿದರೆ ಬಾಕಿ ಕಡೆಗೆ ಇದ್ದಂಥ ಕಾಂಗ್ರೆಸ್ ನಾಯಕರಿಗೆ ಬೆಳಕು ಬರುತ್ತೆ. ಈ ಒಂದು ಸಮ್ಮೇಳನ ಅಕಸ್ಮಾತ್ತಾಗಿ ಆಯಿತು 17 ವರ್ಷಕ್ಕಿಂತ ಮೊದಲು ಇಂಥ ಒಂದು ಸಮ್ಮೇಳನ ಆಗುತ್ತಿತ್ತು. ಈ ಸಮ್ಮೇಳನದ ಬಗ್ಗೆ ಹೈದರಾಬಾದಿನಲ್ಲಿ ಹೇಳಿದ್ದೇನೆ ಬೆಂಗಳೂರಿನಲ್ಲಿ ಹೇಳಿದ್ದೇನೆ, ಯಾವುದೇ ರೀತಿಯ ಪ್ರತಿಕ್ರಿಯೆ ಪರವಾಗಿಯಾಗಲೀ, ವಿರೋಧವಾಗಿಯಾಗಲೀ ಇರಲಿಲ್ಲ. ಈ ಸಮ್ಮೇಳನ ಆಯಿತು; ಇದರೊಳಗೆ ಏನು ಮಾಡಿದ್ದೇವೆ. ಕೇಂದ್ರ ಸರ್ಕಾರವನ್ನು ಕಿತ್ತು ಹಾಕಬೇಕೆಂದು, ದಕ್ಷಿಣ ಭಾರತ ಪ್ರತ್ಯೇಕವಾಗಬೇಕೆಂದು ಹೇಳಿಲ್ಲ ಬೇರೆ ಬೇರೆ ರೀತಿಯ ಮಸಲತ್ತು ಪಿತೂರಿ ಏನೂ ಇಲ್ಲ ಜೊತೆಗೆ ಇದು ಗುಪ್ತ ಸಮ್ಮೇಳನವಾಗಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲ ಹೆಜ್ಜೆ ಇಟ್ಟಿದ್ದೀರಿ, ಮುಂದೆ ಏನು ಮಾಡುತ್ತೀರೋ. ಯಾರಿಗೆ ಗೊತ್ತು ? ಆದರೆ ರಾಜಕೀಯ ದುರುದ್ದೇಶ ಇರಬಾರದು.

ಶ್ರೀ ರಾಮಕೃಷ್ಣ ಹೆಗಡೆ.—ಇದು ಖಾಸಗಿ ಸಮ್ಮೇಳನ ಅಲ್ಲ ಎಂದು ಅಷ್ಟು ಮಾತ್ರ ಹೇಳಬಲ್ಲೆ. ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿ ಕೌಟುಂಬಿಕ ವ್ಯವಹಾರಗಳ ಬಗ್ಗೆ ಚರ್ಚೆ ಮಾಡಿಲ್ಲ. ಇದು ರಾಜಕೀಯ ಸಮ್ಮೇಳನ ಎಂದು ಹೇಳುವುದರಲ್ಲಿ ಯಾವ ಸಂದೇಹ ಇಲ್ಲ.

ಶ್ರೀ ಸೂರ್ಯನಾರಾಯಣರಾವ್.—ರಾಜಕೀಯ ಸಮ್ಮೇಳನ ಆದರೆ ಏನು ತಪ್ಪು.

ಶ್ರೀ ರಾಮಕೃಷ್ಣ ಹೆಗಡೆ.—ಏನಾದರು ಕೇಂದ್ರದ ವಿರುದ್ಧ ವಾದಂಥ ಸಮ್ಮೇಳನ ವಾಗಿದ್ದರೆ ಕೇರಳ ಮುಖ್ಯಮಂತ್ರಿ ಕರುಣಾಕರನ್ ಅವರಿಗೆ ಏತಕ್ಕೆ ಆಹ್ವಾನ ಕಳುಹಿಸುತ್ತಿದ್ದೆ ? ಅವರೊಂದಿಗೆ ಫೋನಿನಲ್ಲಿ ಕೂಡ ಮಾತನಾಡಿದ್ದೇನೆ. ಆಗ ಅವರು ನಮ್ಮ ರಾಜ್ಯದಲ್ಲಿ ಶಾಸನ ಸಭೆ ಅಧಿವೇಶನ ನಡೆಯುತ್ತಿದೆ, ಬರಲಿಕ್ಕೆ ಆಗುವುದಿಲ್ಲನೆಂದು ತಿಳಿಸಿದರು. ಆಗ ನಾನು ಹೇಳಿದೆ, ನಾಲ್ಕು ರಾಜ್ಯಗಳಲ್ಲಿಯೂ ಶಾಸನ ಸಭೆಗಳು ನಡೆಯುತ್ತಿವೆ ಅದೇ ದೃಷ್ಟಿಯಿಂದ ಭಾನುವಾರದ ದಿವಸ ಸಮ್ಮೇಳನ ಏರ್ಪಡಿಸಿದ್ದೇವೆ, ದಯವಿಟ್ಟು ಬರಬೇಕೆಂದು ಹೇಳಿದೆ ಆಗ ಸಾಧ್ಯವಾದರೆ ಬರುತ್ತೇನೆಂದು ಅವರು ಹೇಳಿದರು. ಈ ಸಮ್ಮೇಳನ ಮುಗಿದ್ದು ಎರಡು ದಿವಸಗಳವರೆಗೆ ಅವರು ವಿರೋಧ ಮಾಡಲಿಲ್ಲ. ಆದರೆ ಡೆಲ್ಲಿಯಲ್ಲಿ ಗುಬ್ಬಿ ಬಾಯಿ ಬಿಡ್ತು, ಆಗ ದೇಶದಲೆಲ್ಲಾ ಚಿಲಿಪಿಲಿ ಚಿಲಿಪಿಲಿ ಶುರುವಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರಾದ ಮೊಯ್ಲಿಯವರು ಸಮ್ಮೇಳನ ನಡೆಯುವಾಗ ಇಲ್ಲಿಯೇ ಇದ್ದರು. ಅಧಿವೇಶನ ನಡೆಯುತ್ತಿತ್ತು.

ಶ್ರೀ ಎಂ ವೀರಪ್ಪ ಮೊಯ್ಲಿ.—ನಾನು ಇರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕರ್ನಾಟಕದಲ್ಲಿ ಇದ್ದಿರಿ. ಆದರೆ ಆವೊತ್ತು ತಮ್ಮ ಪ್ರತಿಕ್ರಿಯೆ ಹೇಳಲಿಲ್ಲ. ಆದರೆ ಈ ಬಗ್ಗೆ ಶ್ರೀ ಮಾನ್ ಸ್ಟೀಫನ್‌ರವರು ಮುಂಬೈನಲ್ಲಿ ವಿರೋಧ ವ್ಯಕ್ತ ಮಾಡಿದಾಗ ಇವರಿಗೆ ಇದ್ದಕ್ಕಿದ್ದಂತೆ ಧೈರ್ಯ ಬಂತು.

ಆಗ ಇವರಿಗೆ ತಮ್ಮ ಕರ್ತವ್ಯದ ಅರಿವು ಆಯಿತು, ಆಗ ಪ್ರೆಸ್ ಕಾನ್‌ಫರೆನ್ಸ್ ಕರೆದು ಅವರೆ ಒಂದು ಹೇಳಿಕೆ ಕೊಟ್ಟರು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅದು ಅವರಿಗೆ ಗೊತ್ತಿರಲಿಲ್ಲ, ಗೊತ್ತಾದ ಮೇಲೆ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೂರ್ಯನಾರಾಯಣರಾವ್ ಅವರನ್ನು ಆ ಕಡೆ ತೆಗೆದುಕೊಂಡು ಬಿಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸೂರ್ಯನಾರಾಯಣರಾವ್ ಅವರು ತಮ್ಮ ಪಕ್ಕದಲ್ಲಿ ಕುಳಿತರೆ ಈ ತಳಮಳ, ಚಿಲಿಪಿಲಿ ಎಲ್ಲ ಈ ಕಡೆಯಿಂದ ಆ ಕಡೆಗೆ ಹೋಗುತ್ತದೆ.

ಶ್ರೀ ಎಸ್ ಸೂರ್ಯನಾರಾಯಣರಾವ್.—ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ತಳಮಳ ಏನೂ ಇಲ್ಲ. ಯಾವುದು ಒಳ್ಳೆಯದಿದೆ ಅದಕ್ಕೆ ನಾವು ಬೆಂಬಲಿಸುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ತರಹ ದ್ವಿಮುಖ ಮಾತು ನನಗೆ ಆಗುವುದಿಲ್ಲ. ಇದು ಅಪ್ರಾಮಾಣಿಕತೆಯನ್ನು ತೋರಿಸುತ್ತದೆ ಶ್ರೀ ಕರುಣಾಕರನವರು ಈ ತತ್ವಕ್ಕೆ ವಿರೋಧಿಗಳಾಗಿದ್ದರೆ ಆ ಮಾತು ಬೇರೆ. ಈಗೇ ಒಂದು ತಿಂಗಳ ಹಿಂದೆ ಅವರು ನನಗೆ ಒಂದು ಪತ್ರ ಬರೆದು ನಾನು ದಕ್ಷಿಣ ಭಾರತ ರಾಜ್ಯಗಳ ಸಮಾಜ ಕಲ್ಯಾಣ ಮತ್ತು ಯೋಜನಾ ಮಂತ್ರಿಗಳ ಹಾಗೂ ಕಾರ್ಯದರ್ಶಿಗಳ ಒಂದು ಸಮ್ಮೇಳನವನ್ನು ಕರೆಯುತ್ತಿದ್ದೇನೆ, ಅದಕ್ಕೆ ನಿಮ್ಮ ಮಂತ್ರಿ ಮಂಡಲದಿಂದ ಯಾರನ್ನಾದರೂ ಕಳುಹಿಸಬೇಕೆಂದು ತಿಳಿಸಿದ್ದರು. ಆ ಪತ್ರದ ಕೊನೆಯಲ್ಲಿ ಈ ರೀತಿ ಹೇಳಿದ್ದಾರೆ.

> "I hope that the deliberations of the Conference will lead to a greater understanding and mutual exchange of ideas among the southern States."

ಇದೇ ಶ್ರೀಮಾನ್ ಕರುಣಾಕರನ್‌ರವರು ದಕ್ಷಿಣ ಭಾರತದ 4-5 ಸರ್ಕಾರಗಳ ಮುಖ್ಯ ಮಂತ್ರಿಗಳು ಸಭೆ ಸೇರಿ ಚರ್ಚೆ ಮಾಡಿದಕ್ಕೆ ಅದು ರಾಷ್ಟ್ರಘಾತುಕ ಚರ್ಚೆ ಎಂದು ಹೇಳಿದರು. ಆದರೆ ಇದಕ್ಕೆ ಏನು ಅರ್ಥ ಎಂದು ಅವರ ಪತ್ರದ ಬಗ್ಗೆ ಕೇಳುತ್ತೇನೆ.

(ಗೊಂದಲ)

Mr. DEPUTY SPEAKER.—What Mr. Kharge said will not go into records.

The Chief Minister is giving reply. You have got a chance to get clarification in the matter.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರಾಗಲೀ ಅಥವಾ ಮಾನ್ಯ ಮಂತ್ರಿಗಳಾಗಲೀ ಮಾತನಾಡುವಾಗ ಮಧ್ಯೆ ಪ್ರವೇಶ ಮಾಡಿಕೊಂಡು ಮಾತನಾಡತಕ್ಕದ್ದು, ಸ್ಪಷ್ಟೀಕರಣ ಕೇಳತಕ್ಕದ್ದು ಈ ಸದನದಲ್ಲಿ ಅಸಹಜವೇನಲ್ಲ ಈ ಒಂದು ಸಂಪ್ರದಾಯ ಏನಿದೆ, ಇದನ್ನು ಎತ್ತಿ ಹಿಡಿದು ತಾವು ರಕ್ಷಣೆ ಕೊಟ್ಟರೆ ಮಾತನಾಡುತ್ತೇವೆ. ಇಲ್ಲದಿದ್ದರೆ ಏತಕ್ಕೆ ಮಾತನಾಡಬೇಕು ?

Mr. DEPUTY SPEAKER.—I have made it clear that while one hon. member is speaking other hon members should not interfere. If any member interferes that will not go into records. I have made this very clear.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಕಡೆಯುವರಾಗಲೀ, ಈ ಕಡೆಯವರಾಗಲೀ ಮಧ್ಯ ಪ್ರವೇಶಿಸಿ ಮಾತನಾಡಿದ್ದು ರೆಕಾರ್ಡ್‌ನಲ್ಲಿ ಸೇರಲೇಬಾರದು ಎಂದು ಹೇಳತಕ್ಕದ್ದು ನಮಗೆ ಅಷ್ಟು ಸಮಾಧಾನವಾಗುವುದಿಲ್ಲ. ಸಾಮಾನ್ಯವಾಗಿ ಪರಸ್ಪರ ಮಾತುಕತೆ ಬಂದೇ ಬರುತ್ತದೆ. ಮುಖ್ಯ ಮಂತ್ರಿಗಳು ಈಲ್ಡ್ ಆಗಿಲ್ಲ. ಈಲ್ಡ್ ಆಗದೆ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲವೆಂದು ಹೇಳಿದರೆ ಕಾನೂನು ಪ್ರಕಾರ ತಪ್ಪು ಎಂದು ಹೇಳುವುದಿಲ್ಲ ಈಗ ನಿಯಮವನ್ನು ಸರಿಯಾಗಿ ಪರಿಪಾಲನೆ ಮಾಡುವುದಾಗಿ ತಾವು ಅಪ್ಪಣೆ ಕೊಟ್ಟದ್ದೀರಿ. ಆದರೆ ಒಮ್ಮೆಲೇ ಕಠೋರವಾಗಿ ತಾವು ಹೇಳುವುದು ಯಾವುದು ರೆಕಾರ್ಡಿಗೆ ಹೋಗುವುದಿಲ್ಲ ಎಂದರೆ ನಮಗೆ ಬಹಳ ಕಷ್ಟವಾಗುತ್ತದೆ.

Sri Ramakrishna Hegde.—In Parliamentary debates interjection is allowed not interruption. ನಾನು ಬಹಳ ಸ್ಪೋರ್ಟಿವ್ ಆಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಹಾಗೇ ತೆಗೆದುಕೊಳ್ಳುತ್ತೇವೆ. ಆದರೆ ನನ್ನ ಒಂದು ಕ್ರಿಯಾಲೋಪ ಏನೆಂದರೆ, ಮುಖ್ಯ ಮಂತ್ರಿಗಳು ಮೊನ್ನೆ ನಡೆಸಿದ ಸಮ್ಮೇಳನದ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಏಕೆಂದರೆ ಆದರ ಉದ್ದೇಶದ ಬಗ್ಗೆ ಸಾಕಷ್ಟು ಜನ ಸಂಶಯ ವ್ಯಕ್ತ ಮಾಡಿದ್ದಾರೆ. ತಾವು ಕರೆದ ಸಮ್ಮೇಳನದ ಉದ್ದೇಶದ ಬಗ್ಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಕಷ್ಟು ಚರ್ಚೆಗೆ ಆಸ್ಪದವಾಗಿದೆ ಇದು ಸಕಾರವಾಗಿದೆ. ಇದು ಸೆಡಿಷನ್ಸ್ ಅಲ್ಲವೆಂದು ಹೇಳುವುದಕ್ಕೆ ಅಡ್ಡಿಯಿಲ್ಲ. ಅದಕ್ಕೆ ನಾವು ಅಕ್ಷೇಪಣೆ ಎತ್ತುವುದಿಲ್ಲ ತಾವು ತಮ್ಮ ವಾದವನ್ನು ಮಂಡಿಸಬೇಕಾಗುತ್ತದೆ. ಆದರೆ ಇಲ್ಲಿ ಪ್ರಶ್ನೆ ಇರುವುದು ಇಷ್ಟೆ; ಕೇರಳದ ಮುಖ್ಯ ಮಂತ್ರಿ ಶ್ರೀ ಕರುಣಾಕರನ್ ಈ ಸಭೆಯ ಸದಸ್ಯರಲ್ಲ ; ಅವರು ಹೊರಗಿದ್ದಾರೆ. ಆದ್ದರಿಂದ ಅವರ ವರ್ತನೆ ಬಗ್ಗೆ ತಾವು ಇಲ್ಲಿ ಪ್ರಸ್ತಾಪ ಮಾಡುವುದು ಸಭೆಯ ಘನತೆಗೆ ಮತ್ತು ಗಾಂಭೀರಕ್ಕೆ ತಕ್ಕುದಲ್ಲ. ತಾವು ವಾದ ಮಂಡಿಸುವುದಕ್ಕೆ ಅಡ್ಡಿಯಿಲ್ಲ ; ಆದರೆ ತಾವು ಏನು ಒಂದು ಹೇಳಿಕೆ ಕೊಟ್ಟದ್ದೀರಿ ಅದು ಸೂಕ್ತವಲ್ಲ. Even while replying in the Assembly. he cannot talk about his conduct and tnlention and that cannot be a subject matter of the discussion here. That will reflect on the conduct of the Chief Minister of Kerala which we are not entitled to discuss.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವಾಗಿ ಕೇರಳದ ಮುಖ್ಯ ಮಂತ್ರಿಗಳು ಸಹ ಅಲ್ಲಿನ ಅಸೆಂಬ್ಲಿಯಲ್ಲಿ ಹೇಳಿದ್ದಾರೆಂಬ ಮಾತನ್ನು ವಿರೋಧ ಪಕ್ಷದ ನಾಯಕರಿಗೆ ನೆನಪು ಮಾಡಿಕೊಡುತ್ತೇನೆ. ದಕ್ಷಿಣ ರಾಜ್ಯದ ಮುಖ್ಯ ಮಂತ್ರಿಗಳ ಸಭೆಯ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಅಲ್ಲಿನ ಅಸೆಂಬ್ಲಿಯಲ್ಲಿ ವ್ಯಕ್ತ ಮಾಡಿದ್ದಾರೆ. ಅದಕ್ಕೆ ಹೇಳುವುದು ...

**As ordered by the chair the matter is not recorded.

Sri Veerappa Moily.--You can read the intention of the Chief Minister as to what it is but reading the intentions behind his statement or his conduct is not allowed. ಅವರೊಡನೆ ಫೋನ್‌ನಲ್ಲಿ ಮಾತುಕತೆ ನಾಡುವುದು ಆಕ್ಷೇಪವಾಗುತ್ತದೆ ಅದನ್ನು ಇಲ್ಲಿ ಪ್ರಶ್ನೆ ಮಾಡುವುದು ಸರಿಯಲ್ಲ.

Sri Ramakrishna Hegde.--I never questioned his conduct He is entitled to his opinion as I am entitled to mine. ಇಷ್ಟಾದರೂ ಕೇರಳದ ಮುಖ್ಯ ಮಂತ್ರಿಗಳು ಇದನ್ನು ಹೊರಗೆ ಹೇಳಿದ್ದಲ್ಲ. ಅಲ್ಲಿನ ಶಾಸನ ಸಭೆಯಲ್ಲೇ ಹೇಳಿರತಕ್ಕದ್ದು. ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಇಲ್ಲಿ ಅನುಸಂಗಿಕವಾಗಿ ಪ್ರಸ್ತಾಪಿಸಿದರೆ ಹೇಗೆ ಸಭೆಯ ಘನತೆಗೆ ಗೌರವಕ್ಕೆ ಧಕ್ಕೆ ಬರುತ್ತದೆಂದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ನಾನು ಇಲ್ಲಿ ಎಕ್ಸ್‌ಪ್ಲನೇಷನ್ ಕೊಡಲಿಕ್ಕೆ ಬಯಸುವುದಿಲ್ಲ. I am dont want to explain to anybody not even the Prime Minister. After all I am the Chief Minister of the State. There is a Government. ಇಲ್ಲಿ ಅವರು ಒಂದು ಮಾತನ್ನು ತಿಳಿದುಕೊಳ್ಳಬೇಕು. ಬಾಕಿ ಮುಖ್ಯ ಮಂತ್ರಿಗಳನ್ನು ನಡೆಸಿಕೊಂಡ ಹಾಗೆ ಎಲ್ಲ ಮುಖ್ಯ ಮಂತ್ರಿಗಳನ್ನು ನಡೆಸಿಕೊಳ್ಳುತ್ತೇವೆಂದರೆ ಆಗುವುದಿಲ್ಲ. I am not throwing this as a challenge. ಈ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಪ್ರತಿಯೊಂದು ರಾಜ್ಯ ಸರ್ಕಾರಕ್ಕೆ ಅಷ್ಟೇ ಮಾನ ಅಷ್ಟೇ ಮರ್ಯಾದೆ, ಅಷ್ಟೇ ಗೌರವ ಕೊಡಬೇಕು.

9-30 A. M.

ನಾನು ಯಾರಿಗೂ ಇದರ ಬಗೆ ವಿವರಣೆ ಕೊಡಬೇಕಾದುದು ಇಲ್ಲ ಇವತ್ತು ಉತ್ತರ ಪೂರ್ವ ಭಾಗದಲ್ಲಿ ಆಗಿರುವಂಥದ್ದಕ್ಕೆ ಯಾರು ಕಾರಣರು? ಆದರೆ ಶ್ರೀಮಾನ್ ಕರುಣಾಕರನ್‌ರವರು ಇದು ರಾಷ್ಟ್ರದ್ರೋಹವೆಂದು ಕರೆದಿದ್ದಾರೆ. ಆದರೆ ಅವರು ಯಾವ ಒಂದು ನಿಲುವೆಯಿಂದ ಇದನ್ನು ರಾಷ್ಟ್ರದ್ರೋಹವೆಂದು ಕರೆದರೋ ನನಗಂತೂ ಗೊತ್ತಿಲ್ಲ. ಅಂತಹ ಒಂದು ರಾಷ್ಟ್ರದ್ರೋಹ ಕೆಲಸ ಮಾಡತಕ್ಕಂಥ ಪರಿಸ್ಥಿತಿಗೆ ಈ ದೇಶ ಬರಬಹುದು. ಇವತ್ತು ಅಸ್ಸಾಂ ಗುಜರಾತ್ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳು ಸ್ವಾತಂತ್ರ ಸಂಗ್ರಾಮದಲ್ಲಿ ಮಹತ್ವಪೂರಿತವಾದಂಥ ಪಾತ್ರವನ್ನು ವಹಿಸಿವೆ. ಅಲ್ಲಿ ಇವತ್ತು ಏತಕ್ಕಾಗಿ ಬೆಂಕಿ ಹತ್ತಿಸಿಕೊಂಡು ಉರಿಯುತ್ತಿದೆ ? ಕಾರಣವೇನೆಂದರೆ ಆ ರಾಜ್ಯಗಳಿಗೆ ಅನ್ಯಾಯವಾಗಿದೆ ಅವರಿಗೆ ಇದು ಅನ್ಯಾಯವೆಂದು ತಿಳಿದುಕೊಂಡಿದ್ದಾರೆ. ಅವರೂ ಕೂಡ ಸುಮಾರು 30-35 ವರ್ಷಗಳಿಂದ ಇವತ್ತು ಬರುತ್ತದೆ, ನಾಳೆ ಬರುತ್ತದೆ, ನಾಳಿದ್ದು ಬರುತ್ತದೆ ಎಂದು ಅವರು ತಮ್ಮ ರಕ್ಷಣೆಯ ಬಗ್ಗೆ ಕಾದು ಸಾಕಾಗಿ ಹೋಯಿತು. ನಮಗೆ ರಕ್ಷಣೆ ಸಿಗುತ್ತದೆ ಎನ್ನುವ ಭರವಸೆ ಅವರಲ್ಲಿ ಸಂಪೂರ್ಣವಾಗಿ ಹೋಗಿದೆ. ಎಲ್ಲಾ ರಾಜ್ಯಗಳ ಹಿತರಕ್ಷಣೆಯನ್ನು ಮಾಡುವಂಥದ್ದು ಕೇಂದ್ರ ಸರ್ಕಾರ. ಆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬುದನ್ನು ನೋಡಬೇಕಾಗುತ್ತದೆ ನಾನು ಹೇಳುವುದರಲ್ಲಿ ಯಾವ ತಪ್ಪೂ ಇಲ್ಲ ಯಾವ ಅಪರಾಧ ಕೂಡ ಇಲ್ಲ ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಒಂದು ಸಣ್ಣ ಉದಾಹರಣೆಯನ್ನು ಕೊಡಬಯಸುತ್ತೇನೆ. ಅದು ಏನೆಂದರೆ ನಮ್ಮ ದೇಶದ ಮಾಜಿ ಅಧ್ಯಕ್ಷರು ಬೊಂಬಾಯಿಯಲ್ಲಿ ಒಂದು ಭಾಷಣ ಮಾಡುತ್ತಾ ಇವತ್ತು ನಮ್ಮ ದೇಶದ ರಾಜ್ಯಗಳ ಪರಿಸ್ಥಿತಿ ಮುನಿಸಿಪಾಲಿಟಿಗಳ ಪರಿಸ್ಥಿತಿಗೆ ಬಂದಿವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ದೇಶದ ಅಧ್ಯಕ್ಷರು ಯಾರು?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರು ಎಂದರೆ ಬೇರೆ ಬೇರೆ ಅರ್ಥ ಬರುತ್ತದೆ. ಆದ್ದರಿಂದ ನಮ್ಮ ದೇಶದ ರಾಷ್ಟ್ರಪತಿಗಳು ಎಂದು ತಾವು ತಿಳಿದುಕೊಳ್ಳಬೇಕು. ಅದರಲ್ಲಿಯೂ ಕೂಡ ಮಾಜಿ ರಾಷ್ಟ್ರಪತಿಗಳು. ಆದರೆ ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ಎರಡು ಮೂರು ಕಾರಣಗಳನ್ನು ಕೊಡಬಯಸುತ್ತೇನೆ ಅದು ಏನೆಂದರೆ, ರಾಜ್ಯ ಸರ್ಕಾರಗಳಿಗೆ ಹಣಕಾಸಿನ ಮೂಲ ಯಾವ ಯಾವ ಬಾಬುಗಳಿಂದ ಬರುತ್ತದೆ ಎಂದರೆ ಸುಮಾರು 4 ಬಾಬುಗಳಿಂದ ಬರುತ್ತದೆ. ಒಂದು ರಾಜ್ಯದ ಸೇಲ್ಸ್ ಟ್ಯಾಕ್ಸ್‌ನಿಂದ. ಎರಡನೆಯದು ಎಕ್ಸೈಜ್ ನಿಂದ ಮತ್ತೆ ಮೂರನೆಯದಾಗಿ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಿಂದ, ಮತ್ತೆ ನಾಲ್ಕನೆಯದಾಗಿ ಲ್ಯಾಂಡ್ ರೆವಿನ್ಯೂನಿಂದ. ಆದರೆ ಎರಡು ವರ್ಷಗಳಿಂದ ರೆವಿನ್ಯೂ ಇಲಾಖೆಯಿಂದ ಬರತಕ್ಕಂಥ ವರಮಾನ ಕಡಿಮೆಯಾಗಿದೆ. ನಮ್ಮ ರಾಜ್ಯ ಸರ್ಕಾರಗಳಿಗೆ ಸೇಲ್ಸ್ ಟ್ಯಾಕ್ಸ್ ಬಿಟ್ಟರೆ ಬೇರೆ ಯಾವುದೇ ಮೂಲಗಳಿಂದ ಆದಾಯ ಸರಿಯಾಗಿ ಬರುತ್ತಿಲ್ಲ ಲ್ಯಾಂಡ್ ರೆವಿನ್ಯೂ ಬಾಬಿನಿಂದ ನಮಗೆ ಬೇಕಾಗಿರತಕ್ಕಂಥದ್ದು 9 ಕೋಟಿ ರೂಪಾಯಿಗಳು. ಆದರೆ ಅದರಲ್ಲಿ ನಮಗೆ ಬರುತ್ತಿರುವುದು ಕೇವಲ 2 ಕೋಟಿ

ರೂಪಾಯಿಗಳು ಮಾತ್ರ. ಇನ್ನು ಮೋಟಾರು ವಾಹನಗಳ ತೆರಿಗೆಯನ್ನು ನಾವು ಲೆಕ್ಕಾಚಾರ ಮಾಡುವುದಾದರೆ ವರ್ಷ ವರ್ಷೇ ಅದು ಕಡಿಮೆಯಾಗುತ್ತಾ ಬಂದಿದೆ. ಸೇಲ್ಸ್ ಟ್ಯಾಕ್ಸ್‌ಗೆ ನಾವು ಅಡಿಷನಲ್ ಟ್ಯಾಕ್ಸ್ ಹಾಕುವುದಕ್ಕೆ ಬರವುದಿಲ್ಲ. ರಾಜ್ಯ ಸರ್ಕಾರದವರು ಹೆಚ್ಚು ಸೇಲ್ಸ್ ಟ್ಯಾಕ್ಸ್ ಹಾಕುವುದಕ್ಕೆ ಬರುವುದಿಲ್ಲ. ಇದು ರಾಜ್ಯ ಸರ್ಕಾರಗಳ ಹಣಕಾಸಿನ ಪರಿಸ್ಥಿತಿ ಕೆಲವು ವರ್ಷಗಳಿಂದ ಏನು ದುರಾದೃಷ್ಟ ನಡೆಯುತ್ತಿದೆ ಎನ್ನುವುದನ್ನು ನಾನು ಹೇಳುವುದಿಲ್ಲ. ಹೇಳಿದರೆ ಅಪರಾಧವಾಗುತ್ತದೆ. ಆದರೆ ನಾವು ಯಾವ ಉದ್ದೇಶವನ್ನು ಇಟ್ಟುಕೊಂಡಿರುತ್ತೇವೆಯೋ ಆ ಉದ್ದೇಶ ಸಫಲವಾಗುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಕೇಂದ್ರ ಸರ್ಕಾರ ಹೆಚ್ಚಿನ ಟ್ಯಾಕ್ಸ್‌ನ್ನು ಹಾಕಿಕೊಂಡು ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳತಕ್ಕ ಪರಿಸ್ಥಿತಿಯಲ್ಲಿ ಇದೆ ಆದರೆ ರಾಜ್ಯ ಸರ್ಕಾರ ತನ್ನ ಹಣಕಾಸಿನ ಪರಿಸ್ಥಿತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹೆಚ್ಚು ಟ್ಯಾಕ್ಸ್ ಹಾಕುವುದಕ್ಕೆ ಬರುವುದಿಲ್ಲ. ಇದರಲ್ಲಿ ಎರಡು ವಿಧಗಳು ಇವೆ. ಒಂದು ಟ್ಯಾಕ್ಸ್ ಲಿಫ್ಟ್ಸ್ ಮಾಡುವುದು ಇನ್ನೊಂದು ನಾನ್ ಟ್ಯಾಕ್ಸ್‌ನಿಂದ ಶೇಖರಣೆ ಮಾಡುವುದು ಈಗ ಉದಾಹರಣೆಗೆ ಕೇಂದ್ರ ಸರ್ಕಾರದ ಬಡ್ಜೆಟ್‌ನ್ನು ನಾವು ತೆಗೆದುಕೊಳ್ಳುವುದಾದರೆ ಇಂಡಿಯನ್ ಪೋಸ್ಟ್ ಅಂಡ್ ಟೆಲಿಗ್ರಾಫ್ ಡಿಪಾರ್ಟ್‌ಮೆಂಟ್ 78-80 ಕೋಟಿ ರೂಪಾಯಿಗಳ ವರಮಾನವನ್ನು ಬರುವಂತೆ ತೆರಿಗೆಯನ್ನು ಹಾಕಿದ್ದಾರೆ ಆಮೇಲೆ ಡೀಸಲ್ ಮತ್ತು ಸೀಮೆ ಎಣ್ಣೆಯ ದರವನ್ನು ಹೆಚ್ಚು ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಈ ಎರಡು ಬಾಬುಗಳಿಂದ ಎಷ್ಟು ವರಮಾನ ಬರುತ್ತದೆಯೋ ಅದರಲ್ಲಿ ರಾಜ್ಯ ಸರ್ಕಾರಗಳಿಗೆ ಒಂದು ಬಿಡಿ ಕಾಸು ಕೂಡ ಬರುವುದಿಲ್ಲ. ಸುಮಾರು 800 ಕೋಟಿ ರೂಪಾಯಿಗಳ ಪೈಕಿ ರಾಜ್ಯ ಸರ್ಕಾರಗಳಿಗೆ ಒಂದು ಪೈಸೆ ಕೂಡ ಆದಾಯ ಬರುವುದಿಲ್ಲ ಇದು ಸುಮಾರು ವರ್ಷಗಳಿಂದ ಈ ರೀತಿ ನಡೆದುಕೊಂಡು ಬರುತ್ತಿದೆ. ಕೇಂದ್ರ ಸರ್ಕಾರದವರು ಹಾಕಿದ ಟ್ಯಾಕ್ಸ್ ಮೇಲೆ ನಾವು ಅಡಿಷನಲ್ ಟ್ಯಾಕ್ಸ್ ಹಾಕುವುದಕ್ಕೆ ಬರುವುದಿಲ್ಲ. ರಾಜ್ಯ ಸರ್ಕಾರಗಳಿಗೆ ವಿತ್ತೀಯ ಆಯೋಗ ಯಾವ ಒಂದು ಅನುದಾನ ಕೊಡುತ್ತದೆ, ಅದೇ ಒಂದು ಅನುದಾನ ರಾಜ್ಯ ಸರ್ಕಾರಗಳಿಗೆ ದಾನರೂಪ ಪ್ರಕಾರ ಸಿಗುವ ವರಮಾನ. ಆದ್ದರಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಮಾಡುವ ವಂಚನೆ ಎಂದು ಹೇಳಿದರೂ ಕೂಡ ಅದು ತಪ್ಪಾಗುವುದಿಲ್ಲ. ಅದೇ ರೀತಿಯಲ್ಲಿ ಸ್ಟೀಲ್ ಮೇಲೆ ಎಕ್ಸೈಜ್ ಡ್ಯೂಟಿ ಜಾಸ್ತಿ ಮಾಡಿದರೆ ರಾಜ್ಯ ಸರ್ಕಾರಗಳಿಗೆ ಸ್ವಲ್ಪ ಆದಾಯ ಬರುತ್ತಿತ್ತು. ಆದರೆ ಆ ರೀತಿ ಕೇಂದ್ರ ಸರ್ಕಾರ ಮಾಡಿಲ್ಲ ರಾಜ್ಯ ಸರ್ಕಾರದವರು ಸ್ಟೀಲ್ ಬೆಲೆಯನ್ನು ಹೆಚ್ಚು ಮಾಡುವುದಕ್ಕೆ ಅಧಿಕಾರವಿಲ್ಲ. ಒಂದು ವೇಳೆ ಸ್ಟೀಲ್ ಬೆಲೆಯನ್ನು ಹೆಚ್ಚು ಮಾಡಿದರೆ ಇದರ ಲಾಭ ಯಾರಿಗೆ ಹೋಗುತ್ತದೆ, ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ನಾನು ಈ ವಿಚಾರವನ್ನು ಇನ್ನೂ ಒಂದು 5 ನಿಮಿಷಗಳ ಕಾಲ ವಿವರಿಸಿ ಹೇಳಬೇಕಾಗುತ್ತದೆ ಸಾಮಾನ್ಯವಾಗಿ ನಾವು ಸ್ಟೀಲ್‌ನ್ನು ಮತ್ತು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮತ್ತು ದೊಡ್ಡ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನು ಕಟ್ಟುವಾಗ ರಾಜ್ಯ ಸರ್ಕಾರದವರು ಖರ್ಚು ಮಾಡತಕ್ಕಂಥ ಹಣ ಅಸ್ತವ್ಯಸ್ತವಾಗುತ್ತದೆ. ಆದರೂ ಕೂಡ ಕೇಂದ್ರ ಸರ್ಕಾರದಿಂದ ನಾವು ಯಾವುದಾದರೊಂದು ಪ್ರಾಜೆಕ್ಟ್‌ಗಳನ್ನು ನಿರ್ಮಾಣ ಮಾಡಲು ತೆಗೆದುಕೊಂಡರೆ ಹಣವನ್ನು ನಾವು ವಾಪಸ್ ಕೊಡಬೇಕು. ಆದರೆ ಕೇಂದ್ರ ಸರ್ಕಾರದ ಆದಾಯವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅವರು ಸ್ಟೀಲ್ ಮೇಲೆ ಹೆಚ್ಚು ಬೆಲೆಯನ್ನು ನಿಗದಿ ಮಾಡಿದ್ದಾರೆ. ಇದನ್ನು ಮಾನ್ಯ ಸದಸ್ಯರು ಸ್ವಲ್ಪ ಅರ್ಥಮಾಡಿಕೊಳ್ಳಬೇಕು

ಶ್ರೀ ಕೆ ಎಚ್. ರಂಗನಾಥ್.--ಈಗ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರದ ನೀತಿಯನ್ನು ಉಲ್ಲೇಖ ಮಾಡುತ್ತಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದ ನೀತಿಯಿಂದ ರಾಜ್ಯ ಸರ್ಕಾರಕ್ಕೆ ಏನು ಅನ್ಯಾಯವಾಗುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.--ಈ ನೀತಿ ಕಳೆದ 35 ವರ್ಷಗಳಿಂದ ನಡೆದುಕೊಂಡು ಬಂದಿದೆ. ತಾವು ಕಬ್ಬಿಣದ ದರದ ಬಗ್ಗೆ ಹೇಳುತ್ತಿದ್ದೀರಿ. 1979ರ ಫೆಬ್ರವರಿ ಅಥವಾ ಮಾರ್ಚಿ ತಿಂಗಳಲ್ಲಿ ಒಂದೇ ಸಾರಿ ಕಬ್ಬಿಣದ ಬೆಲೆಯನ್ನು 2, 500 ರೂಪಾಯಿಗಳಿಂದ 4, 500 ರೂಪಾಯಿಗಳಿಗೆ ಏರಿಸಲಾಯಿತು ಆಗ ಕೇಂದ್ರದಲ್ಲಿ ಜನತಾ ಸರ್ಕಾರ ಇತ್ತು. ನಾನು ಈ ಬಗ್ಗೆ ತಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ ಈ ಒಂದು ನೀತಿಯನ್ನು ನಾವು ಅಂದಿಂದೇ ಆಗಾಗ್ಗೇ ಖಂಡನೆ ಮಾಡಿಕೊಂಡು ಬಂದಿದ್ದರೆ, ವಿರೋಧ ಮಾಡಿದ್ದರೆ ಈ ರೀತಿಯ ನೀತಿಯನ್ನು ಯಾರೂ ಅನುಸರಣೆ ಮಾಡುತ್ತ ಇರಲಿಲ್ಲ

ಶ್ರೀ ರಾಮಕೃಷ್ಣ ಹೆಗಡೆ.--ಅಧ್ಯಕ್ಷರೇ, ಇಲ್ಲಿ ಕೇಂದ್ರ ಸರ್ಕಾರದ ನೀತಿಯ ವಿಚಾರವಾಗಿ ನಮಗೆ ಏನು ಅನ್ಯಾಯವಾಗುತ್ತಿದೆ ಎಂಬುದನ್ನು ಹೇಳಿದೆನೇ ಹೊರತು ಯಾರ ಪಾರ್ಟಿ ಅಧಿಕಾರದಲ್ಲಿ ಇತ್ತು ಎಂದು ಅವರನ್ನು ಹೊಣೆ ಮಾಡಿ ನಾನು ಹೇಳಿಲ್ಲ ಜನತಾ ಪಕ್ಷದವರ ಸರ್ಕಾರ ಇದ್ದಾಗ ಹೀಗೆ ಇತ್ತು, ಇಂದಿರಾಗಾಂಧಿಯವರ ಸರ್ಕಾರ ಬಂದಾಗ ಹೀಗೆ ಆಯಿತು ಎಂದು ನಾನು ಹೇಳಲಿಲ್ಲ ವಸ್ತುನಿಷ್ಠವಾಗಿ ಕೇಂದ್ರ ಸರ್ಕಾರ ಮೊದಲಿನಿಂದಲೂ ಅನುಸರಿಸಿಕೊಂಡು ಬಂದ ಪದ್ಧತಿ ಏನು, ಯಾವ ರೀತಿ ಬದಲಾವಣೆ

ಮಾಡಿಕೊಂಡು ಬಂದರು ಎಂಬುದನ್ನು ನಾನು ಹೇಳುತ್ತಿದ್ದೇನೆ. 1979-80 ರಿಂದ 1983-84 ರವರೆಗೆ ಕೇಂದ್ರ ಸರ್ಕಾರ ತನ್ನ ಮುಂಗಡ ಪತ್ರದಲ್ಲಿ ಹೊಸ ರಿಸೋರ್ಸಸ್ ಬಗ್ಗೆ, ಅಡಿಷನಲ್ ರಿಸೋರ್ಸಸ್ ಬಗ್ಗೆ ಏನು, ಏನು ಕರವನ್ನು ಹಾಕಿದರು ಎಂಬ ಬಗ್ಗೆ ಹೇಳಬೇಕಾಗುತ್ತದೆ. ವಿತ್ತ ಆಯೋಗದ ರೆಕಮೆಂಡೇಷನ್ಸ್ ಪ್ರಕಾರ ದಾಮಾಷಾ ಎಷ್ಟು ಕೊಡಬೇಕೆಂದು ನಿರ್ಣಯ ಮಾಡುತ್ತಾರೆ. ಆ ಪ್ರಕಾರ ಅಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್ ಕೇಂದ್ರ ಸರ್ಕಾರ ಯಾವಾಗ ಮಾಡುತ್ತದೆಯೋ ಅದರಲ್ಲಿ ಇಷ್ಟು ಭಾಗ ರಾಜ್ಯ ಸರ್ಕಾರಕ್ಕೆ ಬರಬೇಕು ಇಷ್ಟು ಭಾಗ ಕೇಂದ್ರ ಸರ್ಕಾರಕ್ಕೆ ಬರಬೇಕೆಂದು ನಿರ್ಧಿಷ್ಟಪಡಿಸಲಾಗಿದೆ ಆದರೆ ಈ 4 ವರ್ಷದ ಅವಧಿಯಲ್ಲಿ ಅಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್ ಏನಾಯಿತು ? ಕೇಂದ್ರದ ಹೊಸ ಕರದ ನೀತಿಯ ಪ್ರಕಾರ ಕೇಂದ್ರ ಸರ್ಕಾರದ್ದು ಶೇಕಡಾ 73 ಆದರೆ ರಾಜ್ಯ ಸರ್ಕಾರಕ್ಕೆ ಶೇಕಡಾ 52ರಷ್ಟು ಮಾತ್ರ ಸಿಕ್ಕುತ್ತಿತ್ತು. ಅಂದರೆ ರಾಜ್ಯ ಸರ್ಕಾರಕ್ಕೆ ಕಡಿಮೆ ಆಗುತ್ತಾ ಹೋಯಿತು. ಹೊಸದಾಗಿ ಟ್ಯಾಕ್ಸ್ ಪ್ರಪೋಸಲ್ ಫಾರ್ಮುಲೇಟ್ ಮಾಡುವಾಗ ಒಂದು ಯುಕ್ತಿಯನ್ನು, ಎಂದರೆ ಒಂದು ಕುಯುಕ್ತಿಯನ್ನು ಹುಡುಕಿದ್ದಾರೆ ಅದೇನೆಂದರೆ. ರಾಜ್ಯ ಸರ್ಕಾರಕ್ಕೆ ಹೋಗತಕ್ಕ ಕರ ಕಡಿಮೆ ಆಗಬೇಕು, ಕೇಂದ್ರ ಸರ್ಕಾರದ್ದು ಹೆಚ್ಚಾಗಬೇಕೆನ್ನುವುದೇ ಈ ಒಂದು ನೀತಿ ಆಮೇಲೆ 1979-80 ರಲ್ಲಿ ಒಟ್ಟು ಸೆಂಟ್ರಲ್ ಟ್ಯಾಕ್ಸ್‌ನಲ್ಲಿ ರಾಜ್ಯಸರ್ಕಾರಕ್ಕೆ $28\frac{1}{2}$ ಪರ್ಸೆಂಟ್ ಇದ್ದರೆ, ಈಗ ಹೊಸ ಬಜೆಟ್‌ನಲ್ಲಿ ನಾವು ಲೆಕ್ಕ ಹಾಕಿದರೆ ಅದರಲ್ಲಿ ರಾಜ್ಯ ಸರ್ಕಾರಗಳಿಗೆ ಬರತಕ್ಕ ಭಾಗ ಕೇವಲ ಶೇಕಡಾ 25 ರಷ್ಟು ಇದೆ ಇದರಿಂದಾಗಿ 700 ಕೋಟಿ ರೂಪಾಯಿ ಒಟ್ಟು ನಷ್ಟ ರಾಜ್ಯ ಸರ್ಕಾರಗಳಿಗೆ ಆಗಿದೆ ನಾವು ಇದನ್ನು ಏನೆಂದು ಕರೆಯಬೇಕು ? ಇಷ್ಟು ರಾಜ್ಯ ಸರ್ಕಾರಗಳ ಬಗ್ಗೆ ಅಸಮಧಾನ ಇದ್ದರೆ ಅವುಗಳ ಕೈಕಟ್ಟಿ ಹೀಗೆ ಹೇಳುವುದಾದರೆ, ಈ ಬಗ್ಗೆ ಮಾನ್ಯ ಮೊಯಿಲಿಯವರು ಸಹಾ ಯೋಚನೆ ಮಾಡಬೇಕು ಅವರೂ ಕೂಡ ಆರ್ಥಿಕ ಮಂತ್ರಿಗಳಾಗಿದ್ದವರು. ನಾವು ಉತ್ಪಾದನೆಯನ್ನು ಎಷ್ಟೇ ಹೆಚ್ಚು ಮಾಡತಕ್ಕ ಪ್ರಯತ್ನ ಮಾಡುವಾಗ ನಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಯನ್ನು ಅರಿತುಕೊಂಡು ನಮ್ಮಲ್ಲಿ ಸಾಕಷ್ಟು ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಈ ವಿಚಾರದ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ ಇದನ್ನು ಎಷ್ಟು ಜನ ಮಾನ್ಯ ಸದಸ್ಯರು ಅಧ್ಯಯನ ಮಾಡಿದ್ದಾರೋ ಗೊತ್ತಿಲ್ಲ. ಎಲ್ಲರೂ ಅಧ್ಯಯನ ಮಾಡತಕ್ಕ ಒಂದು ಮಹತ್ವದ ವಿಚಾರ ಇದು. ಮಾನ್ಯ ಮೊಯ್ಲಿಯವರೂ, ಮಾನ್ಯ ರಂಗನಾಥರವರೂ ಅಧ್ಯಯನ ಮಾಡಬೇಕು. ಉದಾಹರಣೆಗೆ ತುಂಗಭದ್ರಾ ಅಣೆಕಟ್ಟು ಇದೆ. ಇದಕ್ಕೆ ಕೇಂದ್ರ ಸರ್ಕಾರದ ಸಾಲವನ್ನು ತೆಗೆದುಕೊಂಡು ಕಟ್ಟಿದ್ದೇವೆ. ಇದರ ಪರಿಣಾಮವಾಗಿ ರಾಜ್ಯ ಸರ್ಕಾರಕ್ಕೆ ನೇರವಾಗಿ ಬರತಕ್ಕ ಆದಾಯ ಎಷ್ಟು? ಕೇವಲ ಎರಡೇ ಎರಡು. ಒಂದು ವಾಟರ್ ರೇಟ್ ಮತ್ತು ಇನ್ನೊಂದು ಬೆಟರ್‌ಮೆಂಟ್ ಲೆವಿ. ಈಗ ಬೆಟರ್‌ಮೆಂಟ್ ಲೆವಿಯನ್ನು ತೆಗೆದು ಹಾಕಿದ್ದೇವೆ ಅಂದರೆ ಒಂದು ಎಕರೆಗೆ ಹೆಚ್ಚೆಂದರೆ 150 ರೂಪಾಯಿಗಳ ವಾಟರ್ ರೇಟ್ ನಮಗೆ ಬರುತ್ತದೆ ಮಹಾರಾಷ್ಟ್ರದಲ್ಲಿ ಸ್ವಲ್ಪ ಹೆಚ್ಚು ಮಾಡಿರಬಹುದು ಇಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಇದರಿಂದ. ರಾಜ್ಯ ಸರ್ಕಾರಕ್ಕೆ ಒಂದು ಎಕರೆಯಿಂದ ಬರತಕ್ಕ ಆದಾಯ ವರ್ಷಕ್ಕೆ ಕೇವಲ 150 ರೂಪಾಯಿ. ಆದರೆ ನಾವು ಯಾರಿಂದ ಸಾಲ ಪಡೆದು ಈ ಯೋಜನೆ ಮಾಡಿದ್ದೇವೋ ಅಂತಹ ಕೇಂದ್ರ ಸರ್ಕಾರಕ್ಕೆ ಈ ಪ್ರಾಜೆಕ್ಟ್‌ನಿಂದ ನೇರವಾಗಿ ಹೋಗತಕ್ಕ ಆದಾಯವೆಂದರೆ 1 ಎಕರೆಗೆ 1 ವರ್ಷಕ್ಕೆ 3 ಸಾವಿರ ರೂಪಾಯಿಗಳು. ಇಲ್ಲಿ ಉತ್ಪಾದನೆಯಾಗುವ ಕಬ್ಬಿನಿಂದ ಸಕ್ಕರೆ ಉತ್ಪಾದನೆ ಮಾಡಿದಾಗ ಅದರ ಮೇಲೆ ಎಕ್ಸೈಸ್ ಡ್ಯೂಟಿ; ಅದರಿಂದ ಬರುವ ಮೊಲಾಸಸ್ ಮೇಲೆ ಎಕ್ಸೈಸ್ ಡ್ಯೂಟಿ; ಅದರಿಂದ ಉತ್ಪಾದನೆಯಾಗುವ ಸ್ಪಿರಿಟ್‌ನಿಂದ ಎಕ್ಸೈಸ್ ಡ್ಯೂಟಿ ಎಷ್ಟು ? ಇದರಲ್ಲಿ ನಮಗೆ ಏನು ಸಿಗುತ್ತದೆ? ಅವರಿಂದಲೇ ಸಾಲ ತಂದು ನಾವು ಪ್ರಾಜೆಕ್ಟ್ ಕಟ್ಟುತ್ತೇವೆಂದು ಖುಷಿಯಿಂದ ಹೇಳುತ್ತೇವೆ. 15-20 ಕಂತುಗಳಲ್ಲಿ ಅವರು ಕೊಟ್ಟಂಥ ಸಾಲವನ್ನು ವಾಪಸ್ಸು ಕಟ್ಟಬೇಕು. ಆದರೆ ಎಲ್ಲಿಂದ ಕಟ್ಟಬೇಕು? ಎಲ್ಲಿಂದ ತರಬೇಕು? ಇದನ್ನು ತರ್ಕಬದ್ಧವಾಗಿ ನೋಡಿದರೆ ಅದೇ ಪ್ರಾಜೆಕ್ಟ್‌ನಿಂದ ಬಂದಂಥ ದುಡ್ಡಿನಿಂದ ವಾಪಸ್ಸು ಕಟ್ಟಬೇಕು. ನಾವು ಒಂದು ಎಕರೆಗೆ 100-150 ರೂಪಾಯಿ ನೀರಿನ ತೆರಿಗೆ ಹಾಕಿದರೆ, ಆ ಹಣದಿಂದ ಆ ಪ್ರಾಜೆಕ್ಟನ್ನು ಮೆಂಟೇನ್ ಮಾಡುವುದಕ್ಕೆ ಸಾಕಾಗುವುದಿಲ್ಲ ಇದರಿಂದ ಇಂದು ರಾಜ್ಯ ಸರ್ಕಾರಗಳಲ್ಲಿ ಅಸಮಧಾನವಾಗಿದೆ. ಕೇಂದ್ರ ಸರ್ಕಾರದವರು ಏನು ಖರ್ಚುಮಾಡಿದರೂ ನಾವು ಏನೂ ಕೇಳುವಂತಿಲ್ಲ. ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ಖರ್ಚಾಗುತ್ತದೆ. ಆಗ ನಾವು ಕೇಂದ್ರದೊಂದಿಗೆ ಚರ್ಚೆ ಮಾಡುವುದಕ್ಕೆ ಹೋದಾಗ ನಮ್ಮ ಮೇಲೆ ಅವರು ಕಣ್ಣು ಬಿಡುತ್ತಾರೆ. ನಾನ್ ಪ್ಲಾನ್‌ನಲ್ಲಿರುವ ಹಣವನ್ನು ಏತಕ್ಕೆ ಖರ್ಚುಮಾಡುತ್ತೀರಿ, ಇದರಿಂದ ನಿಮ್ಮ ಹಣಕಾಸಿನ ಪರಿಸ್ಥಿತಿ ಅಭದ್ರವಾಗಿದೆ; ಓವರ್ ಡ್ರಾಫ್ಟ್ ಆಗುತ್ತದೆಂದು ಹೇಳುತ್ತಾರೆ. ಆದರೆ ಕೇಂದ್ರ ಸರ್ಕಾರದವರು ಏನೇ ಮಾಡಲಿ, ನಾವು ಕೇಳುವಂತಿಲ್ಲ. ಈ ಸಂದರ್ಭದಲ್ಲಿ ನಾನು ಏಷಿಯಾಡ್ ಉದಾಹರಣೆ ಕೊಡುವುದಿಲ್ಲ. ಸುಮಾರು 1500 ಕೋಟಿ ರೂಪಾಯಿ

ಖರ್ಚು ಮಾಡಿದರು; ಇದು ಯಾವ ರೀತಿ ಎಕ್ಸ್‌ಪೆಂಡೀಚರ್ ? ಎಲ್ಲಿಂದ ಖರ್ಚು ಮಾಡಿದರು ? ಏತಕ್ಕೆ ಖರ್ಚು ಮಾಡಿದರು? ಇದನ್ನು ನಾವು ಪ್ರಶ್ನೆ ಮಾಡುವಂತಿಲ್ಲ. ರಕ್ಷಣಾ ಇಲಾಖೆಗೋಸ್ಕರ ಎಷ್ಟು ಬೇಕಾದರೂ ಖರ್ಚು ಮಾಡಲಿ; ಕೆಲವು ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಕೇಂದ್ರಸರ್ಕಾರದ ಜವಾಬ್ದಾರಿ ಇದೆ, ಅದಕ್ಕೆ ಖರ್ಚು ಮಾಡಲಿ, ನಮ್ಮ ಆಕ್ಷೇಪಣೆ ಇಲ್ಲ ಆದರೆ ನಮ್ಮ ನೀತಿಯಲ್ಲಿ ಪರಸ್ಪರ ಸಹಕಾರ ಇರಬೇಕು. ಇದೇ ಸಂದರ್ಭದಲ್ಲಿ ಶ್ರೀಮಾನ್ ಮೊಯ್ಲಿಯವರಿಗೆ ಒಂದು ವಿಚಾರ ಹೇಳುವುದಕ್ಕೆ ಬಯಸುತ್ತೇನೆ ಅವರ ಸಂಗಡಿಗರು ದಕ್ಷಿಣ ರಾಜ್ಯಗಳ ಮುಖ್ಯ ಮಂತ್ರಿಗಳ ಸಮ್ಮೇಳನ ವಿಚಾರದಲ್ಲಿ ಏನೂ ಹೇಳಿಲ್ಲ ; ಆದರೆ ಅವರ ಪಕ್ಷದ ಮುಖ್ಯ ಮಂತ್ರಿಗಳು ಎಲ್ಲರೂ ಖಾಸಗೀಯಾಗಿ ಮಾತನಾಡುತ್ತಾ ನಾವು ಅತ್ಯಂತ ಉತ್ತಮವಾದಂಥ ಕೆಲಸವನ್ನು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇರತಕ್ಕಂಥ ವಿಚಾರವನ್ನು ಇಲ್ಲಿಯವರೆಗೆ ವ್ಯಕ್ತಮಾಡುವಂಥ ಧೈರ್ಯ ಯಾರಿಗೂ ಇರಲಿಲ್ಲ ; ಇವತ್ತು ಆ ಕೆಲಸ ಮಾಡಿದ್ದೇವೆ. ಹೊಸ ಕನ್‌ವೆನ್‌ಷನ್ ಮಾಡಿದ್ದೇವೆನ್ನುವ ಮಾತನ್ನು ಪುನಃ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ನನಗೆ ಸ್ಪಷ್ಟೀಕರಣ ಇಷ್ಟು ಮಾತ್ರ ಬೇಕು ನನ್ನ ಹೇಳಿಕೆ ಮತ್ತು ನಮ್ಮ ಪಕ್ಷದ ಅನೇಕ ನಾಯಕರ ಹೇಳಿಕೆಯನ್ನು ಓದಿದ್ದೇನೆ. ಈ ಸಮ್ಮೇಳನ ನಡೆಸುವುದಕ್ಕೆ ಯಾರೂ ಆಕ್ಷೇಪಮಾಡುವುದಿಲ್ಲ. ಆದರೆ ಸಮ್ಮೇಳನ ನಡೆದ ಉದ್ದೇಶ ನಾಲ್ಕು ರಾಜ್ಯಗಳು ದಕ್ಷಿಣ ಭಾರತದ ಮುಖ್ಯ ಮಂತ್ರಿಗಳು ಸೇರಿದಂತೆ ಒಂದು ಮಂಡಲಿಯನ್ನು ರಚನೆ ಮಾಡುವುದಕ್ಕೆ ಏನು ಹೊರಟಿದ್ದಾರೆ. ಇದರ ಬಗ್ಗೆ ನಾನು ಆಕ್ಷೇಪ ಮಾಡಿದ್ದೇನೆ. ಮುಖ್ಯಮಂತ್ರಿಗಳಲ್ಲಿ ಪರಸ್ಪರ ಮಾತುಕತೆ ಹಿಂದೆ ಕೂಡ ನಡೆದಿತ್ತು. ಈಗಲೂ ಕೂಡ ನಡೆಯಬಹುದು.. ಆದರೆ ಮಂಡಲಿಯನ್ನು ರಚನೆ ಮಾಡುವುದರ ಬಗ್ಗೆ ಮಾತ್ರ ಪ್ರಶ್ನೆ ಮಾಡಿದ್ದೇವೆ.

2 ನೇ ವಿಚಾರವೆಂದರೆ ಇಲ್ಲಿಯವರೆಗೆ, ಯಾವ ಮುಖ್ಯಮಂತ್ರಿಗಳೂ ಧೈರ್ಯ ಮಾಡಲಿಲ್ಲವೆಂದು ಹೇಳಿದರು. 1977 ರಲ್ಲಿ ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರ ಇದ್ದಾಗ ಆಗ ಏತಕ್ಕೆ ಇವರು ಧೈರ್ಯ ಮಾಡಲಿಲ್ಲ, ಚಿಂತನೆ ಮಾಡಲಿಲ್ಲ ಹೊಸದಾಗಿ ನಿಮ್ಮಿಂದ ಏತಕ್ಕೆ ಉಪಾಯವಾಯಿತು

ಶ್ರೀ ಎಸ್. ಆರ್. ಬೊಮ್ಮಾಯಿ.--1979 ರಲ್ಲಿ ಮಾನ್ಯ ಮುಖ್ಯಮಂತ್ರಿಗಳಾದಂಥ ದಿವಂಗತ ದೇವರಾಜು ಅರಸು ಅವರು ಈ ಸಭೆಯಲ್ಲಿ ಹೇಳಿದಂಥ ಮಾತನ್ನು ಉಲ್ಲೇಖ ಮಾಡುವುದಾದರೆ, ಕೇಂದ್ರ ಸರ್ಕಾರ ಉತ್ತಮವಾದ ರೀತಿಯಲ್ಲಿ ರಾಜ್ಯ ಸರ್ಕಾರವನ್ನು ಟ್ರೀಟ್ ಮಾಡಿದ್ದಾರೆ; ಕರ್ನಾಟಕಕ್ಕೆ ಅತಿ ಹೆಚ್ಚಿನ ಸಂಪನ್ಮೂಲಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಪ್ರಧಾನ ಮಂತ್ರಿ ಮುರಾರ್ಜಿ ದೇಸಾಯಿಯವರನ್ನು ಅಭಿನಂದನೆ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಸಂದರ್ಭದಲ್ಲಿ ಏತಕ್ಕೆ ಮಾಡಿದರೂ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.-- ಇದರಲ್ಲಿ ಯಾವ ವ್ಯಕ್ತಿಗಳನ್ನು ತರತಕ್ಕಂಥ ಅಗತ್ಯ ಇಲ್ಲ. ಮೊನ್ನೆ ನಾವು ಏನು ಸಮ್ಮೇಳನ ನಡೆಸಿದೆವು, ಅದು ಇದರ ಪರಿಣಾಮವಾಗಿ ಎಂದು ಅಂದುಕೊಂಡರೆ ತಪ್ಪಾಗಲಾರದು. ನಮ್ಮ ಪ್ರಧಾನ ಮಂತ್ರಿಯವರು ಒಂದು ಆಯೋಗವನ್ನು ರಚಿಸುವ ಘೋಷಣೆ ಮಾಡಿದ್ದಾರೆ. ಇದು ನಮ್ಮ ಸಮ್ಮೇಳನದ ನೇರವಾದ ಪ್ರತಿಫಲವೆಂದು ಹೇಳುತ್ತೇನೆ. ಅದಕ್ಕಾಗಿ ಪ್ರಧಾನ ಮಂತ್ರಿಯವರನ್ನು ಅಭಿನಂದಿಸುತ್ತೇನೆ ಅಷ್ಟು ಬೇಗ ಪ್ರತಿಕ್ರಿಯೆ ತೋರಿಸಿದರು. ಕೇವಲ ನಾಲ್ಕು ರಾಜ್ಯಗಳಿಗೆ ಮಾತ್ರವಲ್ಲ ; ಬೇರೆ ರಾಜ್ಯಗಳಲ್ಲಿಯೂ ಇದೇ ರೀತಿಯ ಭಾವನೆ ಒಳಗೊಳಗೇ ಇದೆ, ಎನ್ನುವುದು ಅವರಿಗೆ ಗೊತ್ತಾಗಿರಬೇಕೆಂದು ಅಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜೀವರಾಜ ಆಳ್ವ.-- ಒಂದು ಛಾಯೆ ಪ್ರಧಾನ ಮಂತ್ರಿಯವರಿಗೂ ಆವರಿಸಿದೆಯೆಂದು ಅನ್ನಿಸುತ್ತಿದೆ.

ಶ್ರೀ ಬಿ. ಶಿವಣ್ಣ .--ಮಾನ್ಯ ಅಧ್ಯಕ್ಷರೇ, ದಯವಿಟ್ಟು ಆ ಪದವನ್ನು ಕಡತದಿಂದ ತೆಗೆಸಿ ಹಾಕಿ.

ಉಪಾಧ್ಯಕ್ಷರು.*-- ಆ ಪದವನ್ನು ಕಡತದಿಂದ ತೆಗೆದುಹಾಕಲಾಗುವುದು.

ಶ್ರೀ ಕೆ. ಹೆಚ್. ರಂಗನಾಥ್.--ತಾವು ಮುಖ್ಯಮಂತ್ರಿಗಳಾಗಿ ಇದನ್ನು ಒಪ್ಪುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.--ಹಾಗೆ ಹೇಳಲಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.--24 ಗಂಟೆ ಇಂದಿರಾ ಗಾಂಧಿ ಭೂತ ಇಟ್ಟುಕೊಂಡು ಕೂತಿದ್ದೀರಿ.

ಬಡ್ಜೆಟ್ ಮಂಡನೆಮಾಡಿದ ಮೇಲೆ ಪತ್ರಿಕೆಗಳು ಸಂಪಾದಕೀಯ ಬರೆದಿರುವುದನ್ನು ತಾವು ಓದಿದ್ದೀರಾ? ಕೇಂದ್ರದ ಬಡ್ಜೆಟ್ ಮಂಡನೆಯಾದ ಮೇಲೂ ಲೇಖನ ಬರೆದಿದ್ದಾರೆ; ಅದನ್ನು ಕೂಡ ತಾವು ಓದಿದ್ದೀರಾ ? ನಾನು ಮಾನ್ಯಮುಖ್ಯ ಮಂತ್ರಿಯವರನ್ನು ಅಭಿನಂದಿಸುತ್ತೇನೆ. ಯಾವುದೇ ಸರ್ಕಾರದ ಒಗ್ಗಿ ಕೇಂದ್ರ ಮತ್ತು

---

* ಅಧ್ಯಕ್ಷರ ಅಪ್ಪಣೆ ಮೇರೆಗೆ ಪದವನ್ನು ತೆಗೆದು ಹಾಕಲಾಗಿದೆ.

ರಾಜ್ಯ ಸರ್ಕಾರಗಳ ನೀತಿ ಬಗ್ಗೆ ಮಾತನಾಡಿದ್ದಾರೆ. ನಿಮಗೆ ಕೂತರೆ ನಿಂತರೆ ಮಲಗಿದರೆ ಇಂದಿರಾಗಾಂಧಿ ಬರುತ್ತಾರೆ.

ಶ್ರೀ ಪಿ. ರಾಂದೇವ್.-- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧದ ವಿಷಯದಲ್ಲಿ ಕೇಂದ್ರ ಸರ್ಕಾರವೇ ನೇಮಕ ಮಾಡಿದಂಥ ಒಂದು ಸಮಿತಿ ರಿಪೋರ್ಟ್ ಕೊಟ್ಟಿದ್ದು ತಮಗೆ ಜ್ಞಾಪಕ ಇದೆಯೆ ?

ಶ್ರೀ ಕೆ. ಹೆಚ್. ರಂಗನಾಥ್ -- ತಾವು ಕಾರ್ಪೊರೇಷನ್‌ಗಳಿಗೆ ಸಂಬಂಧಪಟ್ಟಂತೆ ಸೊಳ್ಳೆ, ನೀರು, ಚರಂಡಿ ವಿಷಯ ಬಿಟ್ಟು ಬೇರೆ ಏನೂ ಓದುವುದಿಲ್ಲ.

ಉಪಾಧ್ಯಕ್ಷರು.—ನೀವುಗಳು ಏನು ಮಾತನಾಡಿದರೂ ಕಡತದಲ್ಲಿ ಹೋಗುವುದಿಲ್ಲ.

10-A. M

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಒಂದು ವಿಚಾರವನ್ನು ನಾನು ಮುಗಿಸಿ ಮತ್ತೊಂದು ವಿಚಾರಕ್ಕೆ ಹೋಗುವ ಮೊದಲು ಇಷ್ಟನ್ನು ಹೇಳುತ್ತೇನೆ. ಪ್ರಧಾನ ಮಂತ್ರಿಗಳು ಮಾಡಿದಂತಹ ಒಂದು ಅನೌನ್ಸ್‌ಮೆಂಟ್‌ನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇಂದಿನವರೆಗೆ ಅದರ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎಂದು ತಿಳಿದಿಲ್ಲ. ಅದು ಸಾಕಷ್ಟು ವ್ಯಾಪಕವಾಗಿ ಇರುತ್ತದೆ ಮತ್ತು ರಾಜ್ಯ ಸರ್ಕಾರಗಳ ಅಭಿಪ್ರಾಯ ಎಲ್ಲಿಯವರೆಗೆ ವ್ಯಕ್ತವಾಗಿದೆ, ಆ ಅಭಿಪ್ರಾಯಕ್ಕೆ ತಕ್ಕದಾಗಿ ಅವರ ಎಲ್ಲಾ ಸಮಸ್ಯೆಗಳನ್ನು ಒಳಗೊಂಡಿರತಕ್ಕ ಒಂದು ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಅವರು ಮಾಡುತ್ತಾರೆಂದು ನಾನು ಆಸೆಪಡುತ್ತೇನೆ. ಮೊದಲನೆಯದಾಗಿ ಟೀಕೆ ಈ ಬಜೆಟ್ ಮೇಲೆ ಬಂದದ್ದು ಇದು ಬಹಳ ದೊಡ್ಡ ಕೊರತೆಯ ಮುಂಗಡ ಪತ್ರ ಎಂದು ನಿಜ, ಕೊರತೆ ಸ್ವಲ್ಪ ದೊಡ್ಡದಾಗಿದೆ ಆದರೆ ಈ ಕೊರತೆ ವರ್ಷದ ಕೊನೆಯಲ್ಲಿ ಇಷ್ಟೇ ದೊಡ್ಡದಾಗಿರುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಈ ಕೊರತೆಯನ್ನು ತುಂಬಿಕೊಳ್ಳಲಿಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಆ ಕ್ರಮ ಏನು ತೆಗೆದುಕೊಂಡರೂ ಅದನ್ನೆಲ್ಲಾ ಮಾನ್ಯ ಸಭೆಯ ಮುಂದೆ ಇಡುತ್ತೇನೆ. ಬರುವ ಅಧಿವೇಶನದಲ್ಲಿ ಅಥವಾ ಯಾವಾಗ ಅದು ಸಾಧ್ಯವಾಗುತ್ತದೆಯೋ ಅಥವಾ ಯಾವಾಗ ನಿರೂಪಣೆ ಮಾಡುತ್ತೇನೆ ಆಗ ಇಡುತ್ತೇನೆ. ಆದರೆ, ಈ ಸಲ ಕೇವಲ ಕರ್ನಾಟಕ ಬಜೆಟ್ ಮಾತ್ರ ಕೊರತೆ ಮುಂಗಡ ಪತ್ರ ಆಗಿಲ್ಲ. ಮೊನ್ನೆ ಅಸ್ಸಾಂ ಮುಂಗಡ ಪತ್ರ ನೋಡಿರಬಹುದು. ಅದು ಚಿಕ್ಕ ರಾಜ್ಯವಾದರೂ 145 ಕೋಟಿ ರೂಪಾಯಿ ಕೊರತೆ ಇದೆ. ತಮಿಳುನಾಡು ರಾಜ್ಯ 184 ಕೋಟಿ ರೂಪಾಯಿ ಕೊರತೆ ಮುಂಗಡಪತ್ರ ಇಟ್ಟಿದೆ ಒಂದು ಮುಂಗಡ ಪತ್ರದ ಯೋಗ್ಯತೆ ಸಾಧಾರಣವಾಗಿ ಗುಣ, ಅವಗುಣ ಇದನ್ನು ಕೇವಲ ಒಂದು ಕೊರತೆಯ ಗಾತ್ರದಿಂದ ಅಳೆಯುವುದು ಸರಿಯಲ್ಲ. ಇವೊತ್ತು ಕೊರತೆ ಕಂಡರೂ ವರ್ಷದ ಕೊನೆಯಲ್ಲಿ ಕೊರತೆ ಆಗಲಿಕ್ಕಿಲ್ಲ ಈಗ ದೊಡ್ಡದು ಇದ್ದರೂ ಕಡಿಮೆ ಆಗಬಹುದು. ಉದಾಹರಣೆಗೆ 1981-82ರ ಮುಂಗಡ ಪತ್ರದಲ್ಲಿ 100 ಕೋಟಿ ರೂಪಾಯಿ ಕೊರತೆ ಇತ್ತು. ಕಳೆದ ವರ್ಷದ ಬಜೆಟ್‌ನಲ್ಲಿ 40 ಕೋಟಿ ರೂಪಾಯಿ ಕೊರತೆ ಬಜೆಟ್ ಮುಂಗಡ ಪತ್ರ ಇತ್ತು. ಈ ವರ್ಷದ ಕೊರತೆಗೆ ಮುಖ್ಯವಾದ ಕಾರಣ ಎರಡು ಮೊದಲನೆಯದು ನಮ್ಮ ಯೋಜನಾವೆಚ್ಚ 100ಕೋಟಿ ರೂಪಾಯಿಗಿಂತಲೂ ಹೆಚ್ಚು ಮಾಡಿದ್ದೇವೆ, 475ಕೋಟಿ ರೂಪಾಯಿಗಳಿಂದ ಬರುವ ವರ್ಷದ ಯೋಜನವೆಚ್ಚ 575ಕೋಟಿ ರೂಪಾಯಿಗೆ ಹೆಚ್ಚಿಸಿದ್ದೇವೆ. ಅದರಲ್ಲಿ 100 ಕೋಟಿ ರೂಪಾಯಿ ಹೆಚ್ಚಳವಾಗಿದೆ. ಅದರ ಜೊತೆಗೆ ಓವರ್‌ಡ್ರಾಫ್ಟ್ ವಿಚಾರ ಹೇಳಿದರು. ಇದರಲ್ಲಿ ಹೋದ ವರ್ಷದ 40ಕೋಟಿ ರೂಪಾಯಿ ಕೊರತೆ ಮುಂಗಡ ಪತ್ರ ಇದೆಯಲ್ಲ ಅದೂ ಸಹ ಸೇರಿಕೊಂಡಿದೆ ಎಂದು ಹೇಳುತ್ತೇನೆ. ಓವರ್‌ಡ್ರಾಫ್ಟ್ ವಿಚಾರವನ್ನು ಮಾನ್ಯ ನೊಯಿಲಿಯವರು ಹೇಳುತ್ತಾ 31ನೇ ಡಿಸೆಂಬರ್ ಎಷ್ಟು ಇತ್ತು ಎಂದು ಹೇಳಿದರು ಮೊನ್ನೆ ನಾನು ಒಂದು ಪ್ರಶ್ನೆಗೆ ಉತ್ತರ ರೂಪದಲ್ಲಿ ಯಾವ ಯಾವ ತಾರೀಖಿಗೆ ಎಷ್ಟೆಷ್ಟು ಇತ್ತು ಎನ್ನುವುದನ್ನು ಹೇಳಿದ್ದೇನೆ. 31-12-82 ನೇ ತಾರೀಖಿಗೆ ಕೇವಲ 2 ಕೋಟಿ 52 ಲಕ್ಷ ಇತ್ತು ; ಆದರೆ 4-1-1983 ಕ್ಕೆ ಅಲ್ಲಿಂದ 5 ದಿವಸ ಅಂದರೆ ಚುನಾವಣೆ 5ನೇ ತಾರೀಖು ಆಯಿತು 4-1-1983ನೇ ದಿವಸ ಓವರ್ ಡ್ರಾಫ್ಟ್ $21\frac{1}{2}$ ಕೋಟಿ ರೂಪಾಯಿ ಇತ್ತು. ಇವೊತ್ತು ಅಂದರೆ ಇವೊತ್ತು ಅಲ್ಲ ಅಥವಾ ಮೊನ್ನೆ ಇರಬಹುದು. ಓವರ್‌ಡ್ರಾಫ್ಟ್ 50ಕೋಟಿ ರೂಪಾಯಿ ಇದೆ ಈ ತಿಂಗಳು ಕೊನೆಯೊಳಗೆ ಈ ಓವರ್‌ಡ್ರಾಫ್ಟ್‌ನ್ನು ತೀರಿಸಬೇಕಾಗಿದೆ. ಅದಕ್ಕೆ ಕೆಲವೊಂದು ಕ್ರಮ ತೆಗೆದುಕೊಳ್ಳುತ್ತೇವೆ. ಬರುವ ವರ್ಷ ಕೂಡ ಅತ್ಯಂತ ನಿಷ್ಠೂರವಾದ ಕಠಿಣ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕರ್ನಾಟಕ ಸರ್ಕಾರ ಎಂದೂ ಕೂಡ ಅಂದರೆ ಕಳೆದ 20 ವರ್ಷಗಳಿಂದ ಯಾರೇ ಅರ್ಥ ಮಂತ್ರಿ ಇರಲಿ, ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವುದರಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರದ ಯೋಜನಾ ಆಯೋಗದ ಮತ್ತು ರಿಸರ್ವ್ ಬ್ಯಾಂಕಿನ ಮೆಚ್ಚುಗೆಗೆ ಕರ್ನಾಟಕ ಸರ್ಕಾರ ಪಾತ್ರವಾಗಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಆದ್ದರಿಂದ ನಮಗೆ ಮುಂದೆ ಟ್ಯಾಕ್ಸ್ ಮುಖಾಂತರವಾಗಲಿ, ಬೇರೆ

ಬಾಬುಗಳಿಂದಾಗಲಿ, ದುಡ್ಡು ಎತ್ತತಕ್ಕದ್ದು ಅತ್ಯಂತ ಕಡಿಮೆ ಸ್ಕೋಪ್ ಇದೆ ಎಂದು ನನ್ನ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಈಗ ಇದರಲ್ಲಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕು ಎಂಬುದನ್ನು ತತ್ವಶಃ ನಾನು ಒಪ್ಪುತ್ತೇನೆ. ಆದರೆ ಇದನ್ನು ಎಷ್ಟು ಸುಲಭವಾಗಿ ಹೇಳುತ್ತೇವೆಯೋ ಅಷ್ಟು ಸುಲಭವಾಗಿ ಮಾಡಲಿಕ್ಕೆ ಸಾಧ್ಯ ಇಲ್ಲ. ಉದಾಹರಣೆಗೆ ಹೇಳಬೇಕೆಂದರೆ, ವಿಶ್ವ ಕನ್ನಡ ಸಮ್ಮೇಳನ ಅದರ ಬಗ್ಗೆ 8-10 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಇದರ ಕೆಲವು ಕೆಲಸಗಳು ಶುರುವಾಗಿವೆ. ವಿಶ್ವ ಕನ್ನಡ ಸಮ್ಮೇಳನ ನಾವು ಮಾಡುತ್ತೇವೆ. ಈಗ ಎಲ್ಲೆಲ್ಲಿ ಕಟ್ಟಡಗಳ ಕೆಲಸ ಶುರುವಾಗಿದೆ; ಅದನ್ನು ನಿಲ್ಲಿಸಲಿಕ್ಕೆ ಸಾಧ್ಯವೇ ? ಅರ್ಧಕ್ಕೆ ನಿಲ್ಲಿಸಲಿಕ್ಕೆ ಬರುತ್ತದೆಯೋ ? ಅದನ್ನು ಮುಕ್ತಾಯ ಮಾಡಲೇಬೇಕು. ಅದಕ್ಕೆ ಎಷ್ಟು ಖರ್ಚು ಮಾಡಬೇಕು ಎಂದು ಅಂದಾಜು ಮಾಡಿದಾರೋ ಅದಕ್ಕೂ ಹೆಚ್ಚಾಗಬಹುದು. ಆದರೆ ಅದನ್ನು ನಿಲ್ಲಿಸಲಿಕ್ಕೆ ಬರುವುದಿಲ್ಲ. ಮಾನ್ಯ ಮೊಯ್ಲಿಯವರು ಅದರ ಬಗ್ಗೆ ಬಹಳಷ್ಟು ಹೇಳಿದರು—

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪ್ರತಿ ಜಿಲ್ಲೆಯಲ್ಲಿ ರಂಗಮಂದಿರಗಳನ್ನು ಕಟ್ಟುವಂತಹದ್ದನ್ನು ಮುಂದುವರಿಸುತ್ತೀರಾ ಎಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರಿಗೆ ಪೆನ್‌ಷನ್ ಬಗ್ಗೆ ಹೇಳಿದರೆ ಸಾಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪೆನ್‌ಷನ್‌ಗೂ ರಂಗಮಂದಿರ ಕಟ್ಟಿಸುವುದಕ್ಕೂ ಸಂಬಂಧ ಏನು ? ಪರ್ಸನಲ್ ಆಗಿ ಮಾತನಾಡುವುದು ಕೆಟ್ಟ ಪದ್ಧತಿ. ತಾವು ಅನುಭವಿ ಶಾಸಕರಾಗಿ ಈ ರೀತಿ ಮಾತನಾಡುವುದು ಸೂಕ್ತವಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಸಂಪನ್ಮೂಲ ವಿಚಾರ ಹೇಳುವಾಗ ಸ್ಪಷ್ಟವಾಗಿ ಒಂದು ಮಾಹಿತಿ ಕೊಡಬೇಕಾಗಿದೆ. 6ನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಒಟ್ಟು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸತಕ್ಕ ಒಂದು ಗುರಿ 457 ಕೋಟಿ ರೂಪಾಯಿಗಳಿದ್ದರೆ ಇವೊತ್ತಿನವರೆಗೆ ನಾವು ಸಾಧಿಸಿದಂತಹ ಗುರಿ 675-76 ಕೋಟಿ ರೂಪಾಯಿಗಳು 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 5 ವರ್ಷದವರೆಗೆ ಎಷ್ಟು ಮಾಡಬೇಕಾಗಿತ್ತೋ ಅದಕ್ಕಿಂತಲೂ ಸುಮಾರು 225 ಕೋಟಿ ರೂಪಾಯಿಗಳವರೆಗೆ ಹೆಚ್ಚು ಸಂಪನ್ಮೂಲಗಳನ್ನು ಶೇಖರಿಸಿದ್ದೇವೆ. ಈಗ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ವಿಚಾರಕ್ಕೆ ಬಂದರೆ 1979-80ರಲ್ಲಿ 477 ಕೋಟಿ ರೂಪಾಯಿಗಳಿದ್ದರೆ 1980-81ರಲ್ಲಿ 552 ಕೋಟಿ ರೂಪಾಯಿಗಳು, 81-82 ರಲ್ಲಿ 631 ಕೋಟಿ ರೂಪಾಯಿಗಳು 82-83 ರಲ್ಲಿ 833 ಕೋಟಿ ರೂಪಾಯಿಗಳ ಪ್ರಕಾರ ನಾನ್‌ಪ್ಲಾನ್ ಖರ್ಚಿನಲ್ಲಿ ವೃದ್ಧಿಯಾಗಿದೆ. ಅಂದರೆ ಸುಮಾರು ಶೇಕಡ 32 ರಷ್ಟು ಖರ್ಚು ವೃದ್ಧಿಯಾಗಿದೆ. ಇದನ್ನು ಕಡಿಮೆ ಮಾಡಬೇಕೆಂದು ಹೇಳುವುದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಏನೂ ಇಲ್ಲ. ಈ ಖರ್ಚನ್ನು ಕಡಿಮೆ ಮಾಡುವುದಕ್ಕೆ ನನ್ನ ಕೈಲಾದ ಎಲ್ಲ ಪ್ರಯತ್ನವನ್ನೂ ನಾನು ಮಾಡುತ್ತೇನೆ. ಆದರೆ ಈ ರೀತಿ ಮಿತವ್ಯಯವನ್ನು ಮಾಡುವುದಕ್ಕೂ ಒಂದು ಮಿತಿ ಇದೆಯೆಂದು ನಾನು ತಮಗೆ ಹೇಳಬಯಸುತ್ತೇನೆ. ಈ ಮಿತವ್ಯಯದ ಬಗ್ಗೆ ಈಗಾಗಲೇ ಸ್ವಲ್ಪ ಮಟ್ಟಿಗೆ ಹೇಳಿದ್ದೇನೆ. ಆದ್ದರಿಂದ ಮತ್ತೆ ಅದನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಈ ಬಂಗಾರಪ್ಪನವರಿಗೆ ನನ್ನ ಮಿತವ್ಯಯದ ಬಗ್ಗೆ ಮಾತನಾಡಲು ಒಂದು ಸಂದರ್ಭ ಸಿಕ್ಕಿತು. ಅದು ಏನೆಂದರೆ ನಾನು ದೆಹಲಿಗೆ ಹೋಗುವಾಗ ನನ್ನ ಆಪ್ತ ಸಹಾಯಕನನ್ನು ಕರೆದುಕೊಂಡು ಹೋದೆ ಎಂದು. ಈ ರೀತಿ ಇನ್ನು ಮುಂದೆ ಕರೆದುಕೊಂಡು ಹೋಗುವುದು ಬೇಡವೆಂದು ಹೇಳುವುದಾದರೆ ಬಿಟ್ಟು ಬೇಕಾದರೂ ಹೋಗುತ್ತೇನೆ ಇಲ್ಲದಿದ್ದರೆ ಅರ್ಧ ಸೀಟಿನಲ್ಲಿ ಹೋಗುವುದಾದರೆ ಅದನ್ನೂ ಮಾಡುತ್ತೇನೆ. ಆದರೆ ಇಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಇದುವರೆಗಿನ ಪ್ರತಿಯೊಬ್ಬ ಮುಖ್ಯ ಮಂತ್ರಿಗಳೂ 4-4 ಜನ ಆಪ್ತ ಸಹಾಯಕರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಆಗ ಯಾರೂ ಮಾತನಾಡುತ್ತಿರಲಿಲ್ಲ ನಾನು ಒಬ್ಬ ಆಪ್ತ ಸಹಾಯಕನನ್ನು ಕರೆದುಕೊಂಡುಹೋದದ್ದಾದರೂ ಏತಕ್ಕೆಂದರೆ ಒಂದು ವೇಳೆ ದಾರಿಯಲ್ಲಿ ಹೋಗುತ್ತಾ ಹೈದರಾಬಾದನಲ್ಲಿ ಏನಾದರೂ ಒಂದು ಮೆಸೇಜ್ ಕೊಡಬೇಕಾದರೆ, ಅಥವಾ ಇನ್ನೇನಾದರೂ ಒಂದು ಕೆಲಸಕ್ಕೆ ಬೇಕಾದರೆ ಇರಲಿ ಎಂದು. ಆ ದೆಹಲಿಯಲ್ಲಿ ಎಂಥವರು ಇದ್ದಾರೆಂದರೆ, ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿಸುತ್ತೇನೆಂದು ಹೇಳಿ ದುಡ್ಡನ್ನು ತೆಗೆದುಕೊಂಡವರೂ ಇದ್ದಾರೆ. ಅಂಥವರನ್ನು ನಾನು ಇಟ್ಟುಕೊಳ್ಳಲೇ ? ರಾಜ್ಯದ ಅಧಿಕಾರಿಗಳು ಎಕ್ಸಿಕ್ಯುಟಿವ್ ಕ್ಲಾಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದುದನ್ನೂ ಕೂಡ ಬೇಡವೆಂದು ನಿಲ್ಲಿಸಿದ್ದೇನೆ. ಏಕೆಂದರೆ ಅದಕ್ಕೆ ಹೆಚ್ಚಿನ ಹಣ ಖರ್ಚಾಗುತ್ತಿತ್ತು. ಅದೇ ರೀತಿ ಮಂತ್ರಿಗಳ ಕಾರಿನ ಹಿಂದೆ ಮುಂದೆ ಅವರ ರಕ್ಷಣೆಗೋಸ್ಕರ 3-4 ಕಾರುಗಳು ಹೋಗುತ್ತಿದ್ದವು. ಅದನ್ನೆಲ್ಲಾ ನಾವು ನಿಲ್ಲಿಸಿದ್ದೇವೆ. ನನ್ನ ಸೂಟ್‌ಕೇಸನ್ನು ಹಿಡಿದುಕೊಂಡು ಹೋಗುವುದಕ್ಕೆ ನನ್ನ ಆಪ್ತ ಸಹಾಯಕನನ್ನು ಕರೆದುಕೊಂಡು ಹೋಗಿರಲಿಲ್ಲ. ನನ್ನ ಸೂಟ್‌ಕೇಸನ್ನು ನಾನೇ ತೆಗೆದುಕೊಂಡು ಹೋಗುತ್ತೇನೆ. ನನಗೆ ಇನ್ನೂ ಶಕ್ತಿ

ಇದೆ. ಎಲ್ಲ ಮಿತವ್ಯಯವನ್ನು ಮಾಡಬೇಕೆಂದರೆ, ಎಲ್ಲಿ ಅನಾವಶ್ಯಕವಾಗಿ ಖರ್ಚಾಗುತ್ತಿದೆ ಅದನ್ನು ಮೊದಲು ನಿಲ್ಲಿಸಬೇಕು. ನಾನು ನನ್ನ ಅಧಿಕಾರಿಗಳಿಗೆ ಮತ್ತು ಮಂತ್ರಿಮಂಡಲದ ಸಹೋದ್ಯೋಗಿಗಳಿಗೆ ಸೂಚನೆ ಕೊಟ್ಟು ಯಾವುದೇ ಅನಾವಶ್ಯಕ ಖರ್ಚನ್ನೂ ಸಹ ಮಾಡಬಾರದೆಂದು ಹೇಳಿದ್ದೇನೆ.....

ಶ್ರೀ ಕೆ ಹೆಚ್. ರಂಗನಾಥ್.--ಮೇಲ್ಮನೆಯಲ್ಲಿ ಬಿ. ಜೆ. ಪಿ. ಅಧ್ಯಕ್ಷರು ಮಾತನಾಡುತ್ತಾ ಬಿ. ಡಿ.ಎ. ನಲ್ಲಿ 2 ಕೋಟಿ ರೂ. ಅನ್ಯವಹಾರವಾಗಿದೆ ಎಂದು ಆಪಾದನೆ ಮಾಡಿದರು. ಅದು ನಮ್ಮ ಕಾಲದಲ್ಲಿ ಆಗಿರ ಬಹುದು. ಆದರೆ ಅದನ್ನು ತಮ್ಮ ಕಾಲದಲ್ಲೂ ಮುಂದುವರಿಸಿಕೊಂಡು ಹೋಗುತ್ತೀರಾ ? ಅಥವಾ ಅದನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ ಏನೆಂದರೆ, ಮೇಲ್ಮನೆಯು ಲ್ಲಾಗಲಿ ಅಥವಾ ಈ ಮನೆಯಲ್ಲೇ ಆಗಲಿ, ಏನಾದರೂ ಆರೋಪ ಬಂದರೆ ಆ ಬಗ್ಗೆ ತನಿಖೆ ಮಾಡಿಸುವುದಕ್ಕೆ ನಾನು ಸಿದ್ಧವಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ವಿಮಾನದಲ್ಲಾಗಲಿ, ಅಥವಾ ರೈಲಿನಲ್ಲಾಗಲಿ ಹೋಗುವಾಗ ಅವರ ಜೊತೆಯಲ್ಲಿ ಆಪ್ತ ಸಹಾಯಕರು ಹೋಗತಕ್ಕ ಒಂದು ಪರಿಪಾಠ ಇದೆ. ಇದನ್ನು ನಾನು ಒಪ್ಪುತ್ತೇನೆ. ಏಕೆಂದರೆ, ಮುಖ್ಯ ಮಂತ್ರಿಗಳು ತುರ್ತಾಗಿ ಏನಾದರೂ ಕೆಲಸವನ್ನು ಮಾಡುವಾಗ ಈ ಆಪ್ತ ಸಹಾಯಕರು ಇರಬೇಕಾಗುತ್ತದೆ. ಆದರೆ ನಾನು ಹೇಳಿರತಕ್ಕದ್ದು ಎಂದರೆ, ಕರ್ನಾಟಕ ಭವನದಲ್ಲಿ ಆಪ್ತ ಸಹಾಯಕರನ್ನಾಗಿ ಇಟ್ಟುಕೊಂಡಿದ್ದೀರಲ್ಲಾ ಅವರಿಗೆ ಏನು ಕೆಲಸ ಕೊಟ್ಟಿದ್ದೀರಿ? ಅಷ್ಟು ಜನ ಅಲ್ಲಿ ಏತಕ್ಕೆ ಬೇಕು ? ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿಸುತ್ತೇನೆಂದು ಯಾರು ದುಡ್ಡನ್ನು ತೆಗೆದುಕೊಂಡಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕರ್ನಾಟಕ ಭವನದಲ್ಲಿ ಇರತಕ್ಕ ಆಪ್ತ ಸಹಾಯಕರು ಇವತ್ತಿನಿಂದ ಇಲ್ಲ. ಮೊದಲಿನಿಂದಲೂ ಇದ್ದಾರೆ. ನಮ್ಮ ರಾಜ್ಯದಿಂದ ಹೋಗತಕ್ಕ ಮಂತ್ರಿಗಳಿಗೆ ಹಾಗೂ ಅಲ್ಲಿರತಕ್ಕ ಕರ್ನಾಟಕದ ಲೋಕಸಭಾ ಸದಸ್ಯರಿಗೆ ಸಹಾಯ ಮಾಡುವ ಸಲುವಾಗಿ ಇದ್ದಾರೆ. ಅವರನ್ನೂ ಕಡಿಮೆ ಮಾಡುತ್ತೇನೆ. ಅನಾವಶ್ಯಕವಾಗಿ ಖರ್ಚಾಗತಕ್ಕ ಹಣವನ್ನು ನಾವು ಉಳಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಸೇಲ್ಸ್ ಟ್ಯಾಕ್ಸ್, ಇನ್‌ಕಂಟ್ಯಾಕ್ಸ್, ಎಕ್ಸೈಜ್ ಮೋಟಾರ್ ವೆಹಿಕಲ್ಸ್ ಮುಂತಾದ ಯಾವುದೇ ಇಲಾಖೆಯಲ್ಲಾಗಲಿ, ಹಣ ಅನಾವಶ್ಯಕವಾಗಿ ಸೋರಿಹೋಗದಂತೆ ನೋಡಿಕೊಳ್ಳಬೇಕು, ಇಲ್ಲವೇ ಸೋರಿ ಹೋಗುವುದನ್ನು ಅತ್ಯಂತ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ. ನಮ್ಮ ಸರ್ಕಾರ ಈಗತಾನೆ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಅದು ಈ ರೀತಿ ಇದೆ.

i) "Cash payments which are to be made out of supplementary estimates whether planned or non-planned shall not be released ;

ii) In the case of releases to autonomous bodies and public under takings wherever cash is involved, the Government Orders releasing this amount should stipulate that payment, any cash shall not be made and if done, then such cash lie deposited with the treasury in that deposit amount ;

iii) No sanction shall be given nor payment made whether under plan or non-plan for any item for which provision was not made in the original budget estimate of 1982-83 ;

iv) Proposals for relaxation of economy orders shall not be entertained and no expenditure shall be incurred in anticipation of such orders".

ಇದು ಒಂದು. ಬರಗಾಲ ಕಾಮಗಾರಿಗಳಿಗೆ ಇದು ಅನ್ವಹಿಸುವುದಿಲ್ಲ. ಕಟ್ಟುನಿಟ್ಟಾಗಿ ಈ ನಿರ್ಣಯವನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ ವೀರಪ್ಪಮೋಯ್ಲಿ.—ಮಾನ್ಯ ಅಧ್ಯಕರೆ. ನಾನ್ ಪ್ಲಾನ್ ಬಗ್ಗೆ ಒಂದು ಮಾತನ್ನು ಹೇಳ ಬಯಸುತ್ತೇನೆ. ನಾನ್ ಪ್ಲಾನ್ ಅಂದರೆ ಅದು ಅನುಪಯುಕ್ತ ಖರ್ಚು ಎನ್ನುವ ಭಾವನೆ ಜನರ ಮನಸ್ಸಿನಲ್ಲಿ ಬರಬಾರದು. ನಾನ್ ಪ್ಲಾನ್. ನಾನ್ ಪ್ರೊಡಕ್ಟೀವ್ ಖರ್ಚನ್ನು ನಿಲ್ಲಿಸಬೇಕು. ಆದರೆ ನಾನ್ ಪ್ಲಾನ್ ಪ್ರೊಡಕ್ಟೀವ್ ಪರ್ಪಸ್‌ಗೆ ಅಂದರೆ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ, ಸಂಬಳಕ್ಕೆ, ವಿದ್ಯಾರ್ಥಿ

ಗಳಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕೆ ಇನ್ನೂ ಮುಂತಾದವದಕ್ಕೆ ಹಣ ಖರ್ಚುಮಾಡುವುದನ್ನು ನೀವು ನಿಲ್ಲಿಸು ವುದಕ್ಕೆ ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ವಿದ್ಯಾಭ್ಯಾಸ ಕ್ಷೇತ್ರಕ್ಕೆ ಸುಮಾರು 90 ಪರ್ಸೆಂಟ್ ಹಣ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ನಾನ್ ಪ್ಲಾನ್‌ನಲ್ಲಿ ನಾನ್ ಪ್ರೊಡಕ್ಟೀವ್ ಅನುಪಯುಕ್ತ ಎಂದು

ಶ್ರೀ ಕೆ ಹೆಚ್. ರಂಗನಾಥ್.--ಸ್ವಾಮಿ, ಪ್ಲಾನ್ ಪೀರಿಯಡ್‌ನಲ್ಲಿ ನಾಲ್ಕು ನೂರು ಚಿಲ್ಲರೆ ಕೋಟಿ ರೂಪಾಯಿಗಳ ಸಂಪನ್ಮೂಲಗಳನ್ನು ನಾವು ಸೇರಿಸಬೇಕಾಗಿತ್ತು. ಆದರೆ ಆಗ ಒಟ್ಟು 600 ಕೋಟಿ ರೂ. ಗಳಷ್ಟು ಸಂಪನ್ಮೂಲಗಳನ್ನು ಒಟ್ಟುಮಾಡಿದ್ದೆವು. ತಾವು ಮಾತನಾಡುವಾಗ ಇದರಲ್ಲಿ 32 ಪರ್ಸೆಂಟ್ ಹಣವನ್ನು ನಾನ್ ಪ್ಲಾನ್‌ಗೋಸ್ಕರ ಖರ್ಚುಮಾಡಿದ್ದೇವೆಂದು ಹೇಳಿದಂತೆ ನನಗೆ ಕೇಳಿಸಿತು. ಆದ್ದರಿಂದ ಪ್ರೊಡಕ್ಟೀವ್‌ಗೆ ಎಷ್ಟು ಖರ್ಚು ಬರುತ್ತದೆ ? ನಾನ್ ಪ್ರೊಡಕ್ಟೀವ್‌ಗೆ ಎಷ್ಟು ಖರ್ಚು ಬರುತ್ತದೆಂಬುದನ್ನು ತಾವು ವಿವರಿಸಿದರೆ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.--ನಮ್ಮ ಆಯವ್ಯಯ ಭಾಷಣದಲ್ಲೇ ಅದನ್ನು ಹೇಳಿದ್ದೇವೆ. ತಾವು ದಯ ವಿಟ್ಟು ಓದಿ ನೋಡಬೇಕು

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು.....

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಸುಮಾರು ಒಂದೂಕಾಲು ಗಂಟೆ ಯಿಂದ ಉತ್ತರವನ್ನು ಕೊಡುತ್ತಾ ಬಂದಿದ್ದೇನೆ. ನಾನು ಉತ್ತರವನ್ನು ಮುಗಿಸಿದಮೇಲೆ ಮಾನ್ಯ ಸದಸ್ಯರು ಏನಾದರೂ ಸಂದೇಹಗಳಿದ್ದರೆ, ಅಥವಾ ಏನಾದರೂ ಪ್ರಶ್ನೆಗಳಿದ್ದರೆ ಕೇಳಲಿ. ಅದಕ್ಕೆ ನಾನು ಉತ್ತರಕೊಡು ತ್ತೇನೆ. ಏಕೆಂದರೆ ನಾನು ಉತ್ತರ ಕೊಡುವಾಗ ಮಧ್ಯೆ ಅಡಚಣೆ ಉಂಟಾದರೆ ನನ್ನ ಉತ್ತರದ ಧಾಟಿಯೇ ಬದಲಾಗುತ್ತದೆ. ಒಂದುವೇಳೆ ಅವರು ಅಡಚಣೆಯನ್ನುಂಟುಮಾಡಬೇಕೆಂದಿದ್ದರೆ ಆದರ ಮಾತು ಬೇರೆಯಾ ಗುತ್ತದೆ

ಶ್ರೀ ಎಸ್. ಬಂಗಾರಪ್ಪ.--ಅದು ತಮ್ಮ ಧಾಟಿಯಮೇಲೆ ಅವಲಂಬಿಸಿರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಬಂಗಾರಪ್ಪನವರು ಬೆಲೆ ಇಳಿಸುವುದು ಏನಾ ಯಿತು ಎಂದು ಹೇಳಿದರು. ಬೆಲೆಗಳು ಬಹಳವಾಗಿ ಏರಿದೆ ಎಂದು ಹೇಳಿದರು. ತಮ್ಮ ಹತ್ತಿರ ಇರತಕ್ಕಂಥ ಅಂಕಿಸಂಖ್ಯೆಗಳ ಮೇಲೆ ನೋಡಿದರೆ ಕಳೆದ ಎರಡು ತಿಂಗಳಿಂದ ಯಾವುದರ ಬೆಲೆಯೂ ಹೆಚ್ಚಾಗಲಿಲ್ಲ. ಕೆಲವು ಪದಾರ್ಥಗಳ ಬೆಲೆ ಕಡಿಮೆಯಾಗಿದೆಯೇ ಹೊರತು ಹೆಚ್ಚಿಲ್ಲ ಮತ್ತು ಇದಂಥ ಬೆಲೆಗಳು ಒಂದೇ ಲೆವಲ್‌ನಲ್ಲಿಯೇ ಇವೆ ಎಂದು ಹೇಳಬಯಸುತ್ತೇನೆ. ನಿಮಗೆ ಯಾವ ವಸ್ತುಗಳ ಬೆಲೆಬೇಕು ಕೇಳಿ, ಅಂಕಿ ಸಂಖ್ಯೆಗಳು ಇದೆ, ಕೊಡುತ್ತೇನೆ.

Sri VEERAPPA MOILY.—We are telling about the corresponding period for the last year.

Sri RAMAKRISHNA HEGDE.—There has not been any increase and that is why that question does not arise. I am prepared to give even that also.

ಶ್ರೀ ಎಸ್. ಬಂಗಾರಪ್ಪ.--ನಾನು ಹೇಳಿದ್ದು ಕೆಲವು ಐಟಮ್ಸ್ ಬಗ್ಗೆ ಮಾತ್ರ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಒಂದು ಉಗ್ರವಾದಂಥ ಟೀಕೆ ಬಂದಿತು. ಅದು ಏನೆಂದರೆ, ನೀರಾವರಿ ಯೋಜನೆಗಳಿಗೆ ಹಣವನ್ನು ಕಡಿಮೆ ಮಾಡಿದ್ದೀರಿ ಎಂದು ಕಾವೇರಿ ಬೇಸಿನ್ ನೀರಾವರಿ ಯೋಜನೆಗೆ ನೀವು ಬಹಳ ಕಡಿಮೆ ಮಾಡಿದ್ದೀರಿ ಇದು ಸತ್ಯವೆ ಎಂದು ಕೇಳಿದ್ದಾರೆ. ಈಗ ಕಾವೇರಿ ಬೇಸಿನ್ ನಲ್ಲಿ ಇರತಕ್ಕಂಥ ಯೋಜನೆಗಳಿಗೆ 1980-81ನೇ ಇಸವಿಯಲ್ಲಿ ಇಪ್ಪತ್ತ ಮೂರೆ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದರೆ 1981-81ರಲ್ಲಿ 25 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. 1982-83ರಲ್ಲಿ 4 ಕೋಟಿ ಈ ಸಲ 44 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಎರಡು ವರ್ಷಗಳ ಹಿಂದೆ 25 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರೆ ಈ ಯೋಜನೆಗಳಿಗೆ ಈ ಸಲ 44 ಕೋಟಿ ರೂಪಾಯಿಗಳನ್ನು ಒದಗಿಸಿದರೆ ಇದು ಕಡಿಮೆಯಾಗುತ್ತದೆಯೋ ? ಇದನ್ನು ಯಾವದೃಷ್ಟಿಯಲ್ಲಿ ಮಾನ್ಯ ಸದಸ್ಯರು ಹೇಳಿದರೋ ನನಗಂತೂ ಅರ್ಥವಾಗುವುದಿಲ್ಲ. ಅದೇ ರೀತಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಯೋಜನೆಗೆ ಸುಮಾರು 51 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಇದರಲ್ಲೂ ನಾವು ಕಳೆದ ವರ್ಷ ರೆವೈಸ್ಡ್ ಎಸ್ಟಿಮೇಟ್ ಮಾಡಿದೆವು. ಇದರ ಹಣ ಈ ವರ್ಷ ಖರ್ಚಾಗಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಹಿಂದುಳಿದ ವರ್ಗಗಳಿಗೆ ವಿರುದ್ಧವಾದ ಬಜೆಟ್, ಹರಿಜನ ಗಿರಿಜನ ರಿಗೆ ವಿರುದ್ಧವಾದ ಬಜೆಟ್ ಎಂದು ಹೇಳಿರುತ್ತಾರೆ. ಇದನ್ನು ಅವರು ಯಾವ ದೃಷ್ಟಿಯಿಂದ ಹೇಳಿದರೋ ನನಗಂತೂ ಅರ್ಥವಾಗುತ್ತಿಲ್ಲ. ಕಣ್ಣಲ್ಲಿ ಯಾವ ಬಣ್ಣದ ಕನ್ನಡಕವನ್ನು ಹಾಕಿಕೊಂಡು ನೋಡಿದರೂ ನನಗೆ

ಅರ್ಥವಾಗುತ್ತಿಲ್ಲ. ಮತ್ತೆ ರೈತರ ವಿಚಾರದಲ್ಲೂ ಹೇಳಿರುತ್ತಾರೆ. ಮಾನ್ಯ ಮೊಯಿಲಿಯವರು ಈ ಬಡ್ಜೆಟ್‌ಗೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಸ್ವಲ್ಪ ಮಟ್ಟಿಗೆ ಇಲ್ಲಿ ನಾನು ಪ್ರಸ್ತಾಪ ಮಾಡಿದರೆ ಅದನ್ನು ಸ್ವಾಗತಮಾಡುತ್ತಾರೆಂದು ನಾನು ಆಶೆ ಇಟ್ಟುಕೊಂಡಿರುತ್ತೇನೆ. ಅವರು ಹೇಳಿದ್ದು ಇಷ್ಟೇ ಅವರು ಹೇಳಿದ್ದು ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 40 ಪರ್ಸೆಂಟ್ ಮತ ಸಿಕ್ಕಿದ್ದೆ, ಜನತಾ ಪಕ್ಷಕ್ಕೆ ಕೇವಲ 35 ಪರ್ಸೆಂಟ್ ಸಿಕ್ಕಿದೆ, ಆದ್ದರಿಂದ ಜನತಾಕ್ಕೆ ಮ್ಯಾನ್‌ಡೇಟೂ ಸಿಕ್ಕಿದೆ ಎಂದು ಹೇಳುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈವತ್ತಿನ ದಿವಸ ಚುನಾವಣೆ ಪದ್ಧತಿಯ ಒಂದು ವೈಖರಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಏತಕ್ಕೆಂದರೆ 80ನೇ ಇಸವಿಯಲ್ಲಿ ಕಾಂಗ್ರೆಸ್ ಐ ಪಕ್ಷಕ್ಕೆ ಯು. ಪಿ. ಮತ್ತು ಬಿಹಾರ್‌ನಲ್ಲಿ ಶೇಕಡಾ 30ರಷ್ಟು ಮತಗಳು ಸಿಕ್ಕಿದ್ದು. ಮತ್ತೆ 1977ನೇ ಇಸವಿಯಲ್ಲಿ 33 ರಷ್ಟು ಮತಗಳು ಸಿಕ್ಕಿದ್ದು. ಅದೇ 1977ರಲ್ಲಿ ಪಾರ್ಲಿಮೆಂಟ್‌ಗೆ ಯು. ಪಿ. ಬಿಹಾರ್ ಮತ್ತು ಮಧ್ಯ ಪ್ರದೇಶಗಳಲ್ಲಿ ಒಂದು ಸೀಟೂ ಕೂಡ ಸಿಗಲಿಲ್ಲ ಆದರೆ 1980ನೇ ಇಸವಿಯಲ್ಲಿ ಶೇಕಡಾ ಎಷ್ಟು ಮತಗಳನ್ನು ಗಳಿಸಿಕೊಂಡರು ಎಂದರೆ ಯು ಪಿ. ಶೇಕಡಾ 65 ರಷ್ಟು ಬಿಹಾರ್‌ನಲ್ಲಿ ಶೇಕಡಾ 42-43 ಇದಕ್ಕಾಗಿಯೇ ಚುನಾವಣೆ ಪದ್ಧತಿ ಬದಲಾವಣೆಯಾಗಬೇಕು ಎಂದು ನಾವು ಹೇಳುವುದು. ಆದರೆ ಒಂದು ಮಾತನ್ನು ಹೇಳುತ್ತೇನೆ. ಕಾಂಗ್ರೆಸ್ ಐ ಪಕ್ಷವನ್ನು ಸೋಲಿಸಿದೇವೆ. ಇದರ ಬಗ್ಗೆ ಸಂದೇಹವಿಲ್ಲ. ಆದರೆ ತಾವು ಏನಾದರೂ ಹೇಳಿರಿ, ಅದು 40 ಪರ್ಸೆಂಟ್ ಸಿಕ್ಕಿದೆ ಮೊನ್ನೆ ಅಸ್ಸಾಮ್‌ನಲ್ಲಿ ಚುನಾವಣೆಯಾಯಿತು. ಅಸ್ಸಾಮ್‌ನಲ್ಲಿ ಎಷ್ಟು ಪರ್ಸೆಂಟ್ ಬಂದಿದೆ. ಕೆಲವು ಮತಕ್ಷೇತ್ರಗಳಲ್ಲಿ ಮತದಾನ ಮಾಡಿದರು. ಆದರೆ ಎಷ್ಟು ಮೂರು ಪರ್ಸೆಂಟ್ ಮತದಾನ, ಒಂದೊಂದು ಮತಕಟ್ಟೆಯಲ್ಲಿ ಸೊನ್ನೆ, ಮತ್ತೊಂದು ಮತಕಟ್ಟೆಯಲ್ಲಿ ಎರಡು-ಮೂರು, ಕೆಲವು ಮತಕಟ್ಟೆಯಲ್ಲಿ ಮತದಾನವೇ ನಡೆಯಲಿಲ್ಲ, ಅಂಥದ್ದರಲ್ಲೂ ಈವತ್ತು ಸರ್ಕಾರ ಅಲ್ಲಿ ನಡೆಯುತ್ತಿದೆ ಸರ್ಕಾರವನ್ನು ಜನತೆಯ ಸರ್ಕಾರವೆಂದು ಬೇರೆ ಹೇಳುತ್ತಾರೆ. ಆಮೇಲೆ ಜನತಾ ಪಕ್ಷವನ್ನು ನ್ಯಾಷನಲ್ ಪಾರ್ಟಿಯಲ್ಲವೆಂದು ಹೇಳುತ್ತಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಈಗ ಹೋಗುವುದಿಲ್ಲ.

ಶ್ರೀ ಎಚ್ ಡಿ ಚೌಡಯ್ಯ.—ಅದೆಲ್ಲಾ ರಾಜಕೀಯ ಭಾಷಣವಾಗುತ್ತದೆ. ಆದರಿಂದ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಮ್ಮಲ್ಲಿ ಏನಿದೆಯೋ ಅದನ್ನು ತೋರಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಅಜ್ಞಾನವನ್ನು ತೋರಿಸುವುದಕ್ಕಿಂತ ನಿಮ್ಮ ಜ್ಞಾನ ಎಷ್ಟು ಇದೆ ಎನ್ನುವುದನ್ನು ತೋರಿಸುತ್ತೇನೆ.

ಮಾನ್ಯ ಅಧ್ಯಕ್ಷರೇ ಮಾನ್ಯ ಬಂಗಾರಪ್ಪನವರು ತಮ್ಮ ಪ್ರವಾಸವನ್ನು ರದ್ದು ಮಾಡಿ ಇಲ್ಲಿರುವುದಕ್ಕೆ ನಾನು ಅವರಿಗೆ ಋಣಿಯಾಗಿದ್ದೇನೆ. ಈವತ್ತು ನನ್ನ ಬಲವಾದ ನಂಬಿಕೆ ಏನೆಂದರೆ, ಈ ಬಡ್ಜೆಟ್ ರೈತರಿಗೆ ಪ್ರಧಾನವಾಗಿ, ಕೈಗಾರಿಕೆಗೆ ಹರಿಜನಗಿರಿಜನರಿಗೆ ಪ್ರಧಾನವಾಗಿ, ಗ್ರಾಮಾಂತರ ಪ್ರದೇಶಗಳಿಗೆ ಪ್ರಧಾನವಾಗಿರತಕ್ಕಂಥ ಬಡ್ಜೆಟ್ ಎಂದು ಹೇಳಿದರೆ ತಪ್ಪಾಗಲಾರದು, ಇದೇರೀತಿ ಸಾರ್ವಜನಿಕರಿಂದಲೂ ಬಂದಂಥ ಪ್ರತಿಕ್ರಿಯೆ ಕೂಡ ಆಗಿದೆ. ಮೊದಲು ರೈತರ ವಿಷಯನ್ನು ತೆಗೆದುಕೊಳ್ಳೋಣ, ಮಾನ್ಯ ಬಂಗಾರಪ್ಪನವರು ರೈತರಿಗೆ ನಾವು ಮೋಸ ಮಾಡಿದ್ದೇವೆಂದು ಹೇಳಿದರು ಅವರು ಏನು ಮೋಸವನ್ನು ಕಂಡಿದ್ದಾರೋ ಗೊತ್ತಿಲ್ಲ

ಶ್ರೀ ಎಸ್. ಬಂಗಾರಪ್ಪ.—ರೈತರ ಮುಖಂಡರೇ ಈ ಮಾತನ್ನು ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ರೈತರಿಗೆ ಯಾವರೀತಿ ಪರಿಹಾರ ಕೊಡಬೇಕು ಎನ್ನುವ ವಿಚಾರದಲ್ಲಿ ಈ ಹಿಂದಿನ ಸರ್ಕಾರದವರು ಬಹಳ ಹಿಂದೆ ಒಂದು ಸಮಿತಿಯನ್ನು ಮಾಡಿದರು. ಮಾನ್ಯ ಬಂಗಾರಪ್ಪನವರೇ ಈ ಕಮಿಟಿಯ ಅಧ್ಯಕ್ಷರಾಗಿದ್ದರು. ಮಾನ್ಯ ಅಧ್ಯಕ್ಷರೇ, ಆ ಸಮಿತಿಯವರು ಶಿಫಾರಸು ಮಾಡಿರುವುದನ್ನು ಮತ್ತು ನಾವು ಮಂಡಿಸಿರುವ ಬಡ್ಜೆಟನ್ನು ಸ್ವಲ್ಪ ಮಟ್ಟಿಗೆ ಹೋಲಿಕೆ ಮಾಡಿನೋಡೋಣ. ಬೆಟರ್‌ಮೆಂಟ್ ಲೆವಿಯನ್ನು 50 ಪರ್ಸೆಂಟ್ ವಿಧಿಸಿದ್ದರು. ಈಗ ಆ ಲೆವಿಯನ್ನು ನಾವು ಸಂಪೂರ್ಣವಾಗಿ ತೆಗೆದೇ ಹಾಕಿದ್ದೇವೆ. ನಾವು ಹೊಸದಾಗಿ ಏನು ಹಾಕಿಲ್ಲ, ಈ ಮಾತನ್ನು ಕೇಳಿ ತಾವು ಬಹಳ ಸಂತೋಷವಾಗಿದ್ದೀರಿ ಎಂದು ಕಾಣುತ್ತದೆ. ಈಗ ಲಿಸ್ಟ್ ಇದೆ ಕೊಡುತ್ತೇನೆ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ದಿಢೀರನೆ ಏನೇನೋ ಘೋಷಣೆ ಮಾಡಿದರು. ರೈತರಿಗೆ ಏನೇನೋ ಸವಲತ್ತುಗಳನ್ನು ಕೊಟ್ಟರು, ವಾಸ್ತವವಾಗಿ ಏನೇನು ಜಾರಿಗೆ ಬಂದಿತು ಅದರ ಚಿತ್ರ ತಮ್ಮ ಮುಂದೆ ಇಡುತ್ತೇನೆ. ಅದರ ಮೇಲೆ ಡಿಬೇಟ್ ಮಾಡಿ ಬೆಟರ್‌ಮೆಂಟ್ ಆಯವ್ಯಯ ಕಾಯಿದೆಗೆ ತಿದ್ದುಪಡಿ ಮಾಡಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಒಟ್ಟು 36 ಕೋಟಿ ರೂಪಾಯಿಗಳಷ್ಟು ರಿಲೀಫ್ ಸಿಕ್ಕುತ್ತದೆಂದು ಹೇಳಿದಿರಿ. ಆದರೆ ಸರಿಯಾಗಿ ಲೆಕ್ಕಾಚಾರ ಹಾಕಿ ನೋಡಿದರೆ ಬರೆ ನೂರು ಕೋಟಿ ರೂಪಾಯಿಗಳು

ಮಾತ್ರ ರಿಲೀಫ್ ಸಿಕ್ಕುತ್ತದೆ. ಇದನ್ನು ರೈತರ ಮುಖಂಡರೇ ಹೇಳಿರುತ್ತಾರೆ. ಬೇಕಾದರೆ ತಾವು ರೈತರ ಮುಖಂಡರನ್ನೇ ಕರೆಸಿ ಮಾತನಾಡಿ.

10-30 A. M.

ಶ್ರೀ ರಾಮಕೃಷ್ಣ ಹೆಗಡೆ.—ರೈತ ಮುಖಂಡರೆಲ್ಲಾ ಆ ರೀತಿ ಹೇಳಿಲ್ಲ. ಕೆಲವು ಮುಖಂಡರು ಮಾತ್ರ ಆ ರೀತಿ ಹೇಳಿದ್ದಾರೆ. ಯಾರು ಇದನ್ನು ಸರಿಯಾಗಿ ತಿಳಿದುಕೊಂಡಿಲ್ಲವೋ ಅಂತಹವರು ಮಾತ್ರ ಆ ರೀತಿ ಹೇಳಿದ್ದಾರೆ. ಆದರೆ ಸರಿಯಾಗಿ ತಿಳಿದುಕೊಂಡಿರುವವರು ಇದನ್ನು ಸ್ವಾಗತ ಮಾಡಿದ್ದಾರೆ. ಬೆಟರ್ ಮೆಂಟ್ ಲೆವಿಯನ್ನು ಶೇಕಡಾ 50 ರಷ್ಟು ಇಳಿಸಬೇಕೆಂದು ಶ್ರೀ ಬಂಗಾರಪ್ಪ ಸಮಿತಿಯವರು ಹೇಳಿದ್ದರು. ಆದರೆ ಈಗ ಪೂರಾ ಹೋಗಿದೆ. ಹಿಂದೆ ಏನು ಬಾಕಿ ಇತ್ತೋ ಅದನ್ನು ಕೂಡ ಮನ್ನಾ ಮಾಡಿದ್ದೇವೆ. ವಾಟರ್ ರೇಟನ್ನು 50 ಪರ್ಸೆಂಟ್ ಇಳಿಸಬೇಕೆಂದು ಈ ಸಮಿತಿಯವರು ಹೇಳಿದ್ದರು. ಇದರ ಬಗ್ಗೆ ನಮ್ಮ ಸರ್ಕಾರದ ನೀತಿ ಏನಿದೆ ಎಂದರೆ ಹಾಗೂ ಈ ವಿಚಾರದಲ್ಲಿ ರೈತ ಮುಖಂಡರು ನಮಗೆ ಹೇಳಿದ್ದೇನೆಂದರೆ, ರಾಜ್ಯದಲ್ಲಿ ಹೊಸ ಉದ್ಯಮಗಳು ಸ್ಥಾಪನೆಯಾದಾಗ 5 ವರ್ಷಗಳ ಕಾಲ ಯಾವ ರೀತಿಯಿಂದ ಟ್ಯಾಕ್ಸ್‌ನಿಂದ ವಿನಾಯಿತಿ ಕೊಡಲಾಗುತ್ತದೋ ಅದೇ ರೀತಿ ಮೊದಲ 5 ವರ್ಷಗಳ ಕಾಲ ವಾಟರ್-ಟ್ಯಾಕ್ಸ್‌ನಿಂದ ರೈತರಿಗೆ ವಿನಾಯಿತಿ ಕೊಡಬೇಕೆಂದು ಕೇಳಿದ್ದರಿಂದ ಅವರ ಒಂದು ಬೇಡಿಕೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಇದರ ಪ್ರಕಾರ ಯಾವ ದಿವಸದಿಂದ ರೈತರಿಗೆ ನಾವು ಹೊಸದಾಗಿ ನೀರಾವರಿ ಯೋಜನೆಗಳ ಮೂಲಕ ನೀರು ಒದಗಿಸುತ್ತೇವೋ ಅಲ್ಲಿಂದ 5 ವರ್ಷಗಳ ಕಾಲ ಅವರು ನೀರಿನ ತೆರಿಗೆಯನ್ನು ಕೊಡಬೇಕಾಗಿಲ್ಲ ಈ ಒಂದು ವಿನಾಯಿತಿಯನ್ನು ಕೊಟ್ಟಿದ್ದೇವೆ. ಆಮೇಲೆ Purchase tax on Sugar cane should be reduced irom 19.20% per toune to Rs. 10/- per tonne. ಈ ವಿಚಾರ ಹೈಕೋರ್ಟಿನಲ್ಲಿರುವುದರಿಂದ ನಾವು ಈ ವಿಷಯದಲ್ಲಿ ಏನೂ ತೀರ್ಮಾನ ಮಾಡಿಲ್ಲ. ಆಮೇಲೆ the rate of interest in lendiag for agricultural purpose should not exceed 9% or 3% more than the rate which the Reserve Bank lends to the State Apex Bank or whichever is less. ಮಾನ್ಯ ಬಂಗಾರಪ್ಪನವರು ದಯವಿಟ್ಟು ಈ ವಿಚಾರವನ್ನು ಕೇಳಬೇಕು. ಏನೆಂದರೆ, 12 ರಿಂದ 13 ಪರ್ಸೆಂಟ್‌ವರೆಗೆ ಚಾರ್ಜ್ ಮಾಡಿದರೂ ಸಹ ಅದನ್ನು 9 ಪರ್ಸೆಂಟ್‌ಗೆ ಕಡಿಮೆ ಮಾಡಬೇಕೆಂದು ತಮ್ಮ ಸಮಿತಿಯ ಮೂಲಕ ಶಿಫಾರಸ್ ಮಾಡಿದ್ದಿರಿ. ಆದರೆ ನಮ್ಮ ಸರ್ಕಾರ ಇನ್ನೂ ಮುಂದೆ ಹೋಗಿ ದೀರ್ಘಾವಧಿ ಸಾಲಕ್ಕಾದರೆ ಆರೂವರೆ ಪರ್ಸೆಂಟ್ ಬಡ್ಡಿ ಮತ್ತು ಅಲ್ಪಾವಧಿ ಸಾಲಕ್ಕಾದರೆ 7 ಪರ್ಸೆಂಟ್ ಬಡ್ಡಿ ಎಂದು ಮಾಡಿದ್ದೇವೆ. ಇದನ್ನು ತಾವು ರಿಯಾಯಿತಿ ಎಂದು ಹೇಳುತ್ತೀರೋ ಅಥವಾ ನಮ್ಮದು ರೈತ ವಿರೋಧ ಸರ್ಕಾರ ಎಂದು ಹೇಳುತ್ತೀರೋ ? ಆಮೇಲೆ ಶ್ರೀ ಬಂಗಾರಪ್ಪ ಸಮಿತಿಯವರು ಈ ರೀತಿ ಹೇಳಿದ್ದಾರೆ. Aiter any natural celamity, it would be obligatore for the Government to give free seeds to small and marginal farders to take up cultivation on their affected lands. The seeds loans distributed during the famine in northern districtc in 1972-73 should be waived in respect of all farmers. This Government has waived it. ಇದನ್ನೂ ಕೂಡ ನೀವು ಸ್ವಾಗತ ಮಾಡಲಿಲ್ಲ. ಈ ಮೊದಲು ನಿಮ್ಮ ಸಮಿತಿಯವರು ಸರ್ಕಾರಕ್ಕೆ ಏನೇನು ಶಿಫಾರಸ್ ಮಾಡಿದ್ದರೋ ಅದೆಲ್ಲಾ ನಿಮಗೆ ನೆನಪು ಇದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ ಈಗ ನಾವು ಸೀಡ್ ಲೋನ್ ಅಷ್ಟನ್ನೂ ವೇವ್ ಮಾಡಿದ್ದೇವೆ. ಆಮೇಲೆ "So far as the digging of irrigation wells is concerned, in case of failed wells full amount of the loan should be waived of insted of 50% of the amount as at present." ಎಂದು ಸರ್ಕಾರಕ್ಕೆ ಸೂಚನೆ ಮಾಡಿದ್ದಾರೆ. ಈಗ ನಾವು ನೂರಕ್ಕೆ ನೂರರಷ್ಟು ವೇವ್ ಮಾಡಿದೇವೆ ಯಾರು ಬಾವಿ ತೆಗೆಯಲು ಸಾಲ ತೆಗೆದುಕೊಂಡಿದ್ದಾರೋ, ಅಂತಹವರ ಬಾವಿಗಳಲ್ಲಿ ಏನಾದರು ನೀರು ಬರದೆ ಫೇಲ್ ಆದರೆ, ಅಂತಹವರ ಸಾಲವನ್ನು ಶೇಕಡಾ ನೂರರಷ್ಟು ವೇವ್ ಮಾಡಿದ್ದೇವೆ. ಇದಕ್ಕಿಂತ ಜಾಸ್ತಿ ಮಾಡುವುದಕ್ಕೆ ಬರುತ್ತದೆಯೋ ? ಇಂತಹ ಒಂದು ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ ಆಮೇಲೆ "Under scarcity relief works, disilting of tanks should be given top-priority. A blue-print of tanks whose disilting would be taken up should be prepared." ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ನಾವು ಈ ಸಲದ ಬಜೆಟ್ ಭಾಷಣದಲ್ಲಿ ಹೇಳಿದ್ದೇವೆ ಮತ್ತು ಇದೇ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗಲೂ ಸಹ ಉತ್ತರ ಕೊಟ್ಟಿದ್ದೇವೆ. ಇದರ ಪ್ರಕಾರ ಈಗ

ಎಲ್ಲೆಲ್ಲಿ ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆಯೋ ಅಲ್ಲೆಲ್ಲಾ ಅಂದರೆ ಸ್ಕೇರ್ಸಿಟಿ ಏರಿಯಾಗಳಲ್ಲಿ, ಮಲೆನಾಡು ಏರಿಯಾದಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ಹೀಗೆ ಎಲ್ಲ ಕಡೆಗಳಲ್ಲಿಯೂ ಈ ಕೆಲಸವನ್ನು ಭೂ ಸೇನೆ ಮೂಲಕ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಮುಂದೆ "Massive afforestation programme should be taken up" ಎಂದು ಹೇಳಿದ್ದಾರೆ ಇದರ ಬಗ್ಗೆ ನಾವು ಒಂದು ಹೊಸ ಯೋಜನೆ ಪ್ರಾರಂಭ ಮಾಡಿದ್ದೇವೆ. ಮುಖ್ಯವಾಗಿ ಮಾನ್ಯ ಬಂಗಾರಪ್ಪನವರ ವರದಿ ನನಗೆ ಈ ಬಜೆಟ್ ತಯಾರು ಮಾಡಲು ಒಂದು ಬೈಬಲ್ ಆಗಿತ್ತು. ಅದರೆ ತಾವು ಈ ತಮ್ಮ ವರದಿ ಪ್ರಕಾರ ಇದ್ದೀರೋ ಅಥವಾ ಬೇರೆ ರೀತಿ ಇದ್ದೀರೋ ನನಗೆ ಗೊತ್ತಿಲ್ಲ. ಆಮೇಲೆ "All districts in the State should have a mobile Soil Testing Plant Protection laboratory." ಎಂದು ಹೇಳಿದ್ದಾರೆ. 1968-69ರಲ್ಲಿಯೇ ನಾನು ಆರ್ಥಿಕ ಮಂತ್ರಿಯಾಗಿದ್ದಾಗ ಈ ಯೋಜನೆಯನ್ನು ಪ್ರಾರಂಭ ಮಾಡಿದ್ದು. ಆದರೆ ಇದು ಜಾರಿಗೆ ಬರುವುದು ಸ್ವಲ್ಪ ಮಟ್ಟಿಗೆ ನಿಧಾನವಾಯಿತು. ಇದನ್ನೂ ಕೂಡ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ಇದೇನು ಹೊಸ ಸ್ಕೀಮಲ್ಲ. ಹಳೆಯ ಸ್ಕೀಮು. ಆಮೇಲೆ "Sales Tax on fertilisers and foodgrains should be abolished. As regard other commodities connected with the Agriculure, there should be a single point tax." ಎಂದು ಹೇಳಿದ್ದಾರೆ ಈಗ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಮೇಲಿನ ಸೇಲ್ಸ್‌ಟ್ಯಾಕ್ಸನ್ನು ತೆಗೆದುಹಾಕಿದ್ದೇವೆ. ಆಹಾರದ ಮೇಲೆ ಸೇಲ್ಸ್‌ಟ್ಯಾಕ್ಸ್ ಹಾಕಿದರೆ ಅದರಿಂದ ರೈತರಿಗೆ ತೊಂದರೆಯಾಗುವುದಿಲ್ಲ. ಇದರಿಂದ ಬಳಕೆದಾರರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈಗ ಎರಡು ಪರ್ಸೆಂಟ್‌ನಷ್ಟು ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಆಮೇಲೆ "Agriculture income-tax should be abolished." ಎಂದು ಹೇಳಿದ್ದಾರೆ. ಇದನ್ನು ಈ ಹಿಂದಿನ ಸರ್ಕಾರವೇ ಮಾಡಿದೆ. ಆಮೇಲೆ "Electricity tarif on pumpsets." ಎನ್ನುವ ವಿಚಾರದಲ್ಲಿ ಒಂದು ಅಶ್ವಶಕ್ತಿಗೆ 50 ರೂ. ಕೊಡಬೇಕೆಂದು ಈ ಹಿಂದಿನ ಸರ್ಕಾರವೇ ತೀರ್ಮಾನ ಮಾಡಿದೆ. ಆಮೇಲೆ "Market cess in the regulated market should be reduced from 2% to 0.5% ಎಂದು ಹೇಳಿದ್ದಾರೆ. ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಕೇಸ್ ಇರುವುದರಿಂದ ನಾವು ಇದರ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿಲ್ಲ. ವರ್ತಕರೇ ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಆದ್ದರಿಂದ ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ಬಂಗಾರಪ್ಪನವರ ವರದಿಗಿಂತಲೂ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದರೂ ಸಹ ಮಾನ್ಯ ಬಂಗಾರಪ್ಪನವರಿಗೆ ನಮ್ಮ ಮೇಲೆ ಏನು ಪ್ರೀತಿಯೋ ಗೊತ್ತಿಲ್ಲ, ರೈತರ ಬಗ್ಗೆ ಇಂಥಾದ್ದನ್ನೆಲ್ಲಾ ನಾವು ಮಾಡಿದ್ದೇವೆ ಎಂಬುದನ್ನು ಅವರು ಹೇಳಲಿಲ್ಲ ಆದರೆ...

ಶ್ರೀ ಎಚ್. ಡಿ. ಚೌಡಯ್ಯ —ಮಾನ್ಯ ಬಂಗಾರಪ್ಪನವರ ಸಮಿತಿ ವರದಿ ಬಗ್ಗೆ ತಾವು ಕಾಮೆಂಟ್ ಮಾಡಿದಿರಿ. ಆದರೆ ರೈತ ಸಂಘದವರು ಸರ್ಕಾರದ ಮುಂದೆ ಇಟ್ಟಿರುವಂತಹ ಹತ್ತು ಅಂಶಗಳ ಬೇಡಿಕೆಗಳು ಇತ್ತೀಚಿನದ್ದು. ಅದರ ಬಗ್ಗೆ ತಾವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ನಾವು ರೈತ ಪ್ರತಿನಿಧಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಇವೊತ್ತು ರೈತರಿಗೆ ಕೊಟ್ಟಿರುವ ಸಾಲಗಳೆಲ್ಲಾ ಮನ್ನಾ ಆಗಬೇಕು ಮತ್ತು ಅವರಿಗೆ ಹೊಸ ಸಾಲ ಸಿಗಬೇಕು ಹಾಗೂ ಈಗಿರುವಂತಹ ತೆರಿಗೆಗಳನ್ನೆಲ್ಲಾ ತೆಗೆದುಹಾಕುವುದರ ಮೂಲಕ ಅಭಿವೃದ್ಧಿ ಕೆಲಸಗಳನ್ನೂ ಕೂಡ ಕೈಕೊಳ್ಳಬೇಕೆಂದರೆ ಅದು ಯಾವ ಜಾದೂಗಾರನಿಂದಲೂ ಸಾಧ್ಯವಿಲ್ಲ. ಈ ಅಂಶವನ್ನು ರೈತ ಪ್ರತಿನಿಧಿಗಳೂ ಸಹ ತಿಳಿದುಕೊಳ್ಳಬೇಕು. ಇವೊತ್ತಿನ ಪರಿಸ್ಥಿತಿಯಲ್ಲಿ ನಾವು ಎಷ್ಟು ರಿಯಾಯಿತಿಗಳನ್ನು ಕೊಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಕೊಟ್ಟಿದೇವೆ. ನಾವು ನಮ್ಮ ಅಭಿವೃದ್ಧಿ ವೇಗವನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ ಮತ್ತು ನಾಳೆ ನಮ್ಮ ರೈತರಿಗೆ ಸಾಲ ಸಿಗದಿರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೂ ಆಗುವುದಿಲ್ಲ, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾವು ರೈತರಿಗೆ ಎಷ್ಟು ಸವಲತ್ತುಗಳನ್ನು ಕೊಡಬೇಕೋ ಅಷ್ಟನ್ನೂ ಕೊಟ್ಟಿದ್ದೇವೆ. ಇದೇ ಹೊತ್ತಿನಲ್ಲಿ ನನಗೆ ಆಶ್ಚರ್ಯವಾಗುವ ಒಂದು ಸಂಗತಿ ಎಂದರೆ, ಮಾನ್ಯ ಬಂಗಾರಪ್ಪನವರು ಯಾವಾಗ ಸರ್ಕಾರಕ್ಕೊಂದು ಮಧ್ಯಮಾವಧಿ ವರದಿಯನ್ನು ಕೊಟ್ಟರೋ ಆ ತಕ್ಷಣವೇ ಇವರ ಒಂದು ಅಧ್ಯಕ್ಷತೆಯಲ್ಲಿದ್ದ ಕಮಿಟಿಯನ್ನು ಹಿಂದಿನ ಮುಖ್ಯಮಂತ್ರಿಗಳು ರದ್ದು ಮಾಡಿದರು. ಆ ಸಮಯದಲ್ಲಿ ಮಾನ್ಯ ಬಂಗಾರಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದರು.

ಮಾನ್ಯ ಬಂಗಾರಪ್ಪನವರು ಬಹಳ ಸ್ವಾಭಿಮಾನದ ವ್ಯಕ್ತಿಗಳು, ಸ್ವಾಭಿಮಾನ ನನಗಿಂತ ಅವರಿಗೇ ಹೆಚ್ಚು ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಹಿಂದಿನ ಸರ್ಕಾರ ಅವರ ರಿಪೋರ್ಟನ್ನು ಒಪ್ಪಿದಮೇಲೆ ಆ ಸಮಿತಿಯನ್ನು ರದ್ದು ಮಾಡಲಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.--ಈ ಹಿಂದಿನ ಸರ್ಕಾರ ಕಮಿಟಿಯು ಅಂತಿಮ ರಿಪೋರ್ಟ್ ಕೊಡಲಿಕ್ಕೇ ಅಸ್ಪದ ಕೊಡಲಿಲ್ಲ ಇಂಟರಿಮ್ ರಿಪೋರ್ಟ್ ಕೊಟ್ಟ ತಕ್ಷಣ ಕಮಿಟಿಯನ್ನು ರದ್ದು ಮಾಡಿದ್ದಾರೆ.

Sri A. LAKSHMISAGAR.--He placed it on the table of the House knowing fully well that the Government would not approve it.

ಶ್ರೀ ರಾಮಕೃಷ್ಣ ಹೆಗಡೆ.--ತಾವು ಮಂತ್ರಿಗಳಾಗಿದ್ದವರು, ರೈತರ ಬಗ್ಗೆ ಮಾನ್ಯ ಬಂಗಾರಪ್ಪನವರಿಗೆ ಕಳಕಳಿ ಇದೆ. ನಾನು ಬೇರೆಯವರು ಇಂತಹದ್ದು ಮಾಡಬೇಕೆಂದು ಹೇಳುತ್ತಿಲ್ಲ. ಬಂಗಾರಪ್ಪನವರ ಜಾಗದಲ್ಲಿ ನಾನಿದ್ದು ಇಂಟರಿಮ್ ರಿಪೋರ್ಟ್ ಕೊಟ್ಟ ತಕ್ಷಣ ಕಮಿಟಿಯನ್ನು ರದ್ದು ಮಾಡಿದ್ದರೆ ತಕ್ಷಣ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಹೊರ ಹೋಗುತ್ತಿದ್ದೆ. ಮಾನ್ಯ ಬಂಗಾರಪ್ಪನವರು ಯಾವಾಗಲೂ ಹೇಳುತ್ತಾರೆ ನನಗೆ ಅಧಿಕಾರದ ಬಗ್ಗೆ ವ್ಯಾಮೋಹ ಇಲ್ಲವೆಂದು, ಆದರೆ ಆಗ ಇವರಿಗೆ ಏನಾಗಿತ್ತು ? ರೈತರ ಬಗ್ಗೆ ಕಳಕಳಿ ಇರತಕ್ಕವರು, ರೈತರ ಬಗ್ಗೆ ಉತ್ತಮ ರಿಪೋರ್ಟ್ ಕೊಟ್ಟವರು, ಅಧಿಕಾರದ ವ್ಯಾಮೋಹ ಇಲ್ಲದ ವ್ಯಕ್ತಿ ರಾಜೀನಾಮೆ ಬರೆದು ಎಸೆದು ಬರಬೇಕಾಗಿತ್ತು. ಆಗ ಇವರಿಗೆ ಏನೋ ಆಗಿರಬೇಕು ಹಿಂದಿನ ಮುಖ್ಯಮಂತ್ರಿಗಳು ಮಾನ್ಯ ಬೊಮ್ಮಾಯಿಯವರ ಪ್ರಶ್ನೆಗೆ ರೈತರಿಗೆ 83ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮಾನ್ಯ ಮೊಯಿಲಿಯವರು ಸಹ ಇಲ್ಲೇ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮುಖ್ಯಮಂತ್ರಿಗಳು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ರೈತರ ಬಗ್ಗೆ ನನ್ನ ಅಧ್ಯಕ್ಷತೆಯಲ್ಲಿ ಇದ್ದಂತಹ ಸಮಿತಿ ಏನೊಂದು ವರದಿಯನ್ನು ಆಗಿನ ಸರ್ಕಾರಕ್ಕೆ ಕೊಟ್ಟಿತ್ತು. ಆ ವಿಚಾರ ಪ್ರಸ್ತಾಪ ಮಾಡಿದ್ದಾರೆ, ಅದು ಸರಿ ನಾನು ವಿವರಕ್ಕೆ ಹೋಗುವುದಿಲ್ಲ. ರೈತ ಸಂಘದ ಪ್ರತಿನಿಧಿಗಳು ಅವರ ಬೇಡಿಕೆಗಳನ್ನು ಇಟ್ಟಿದ್ದಾರೆ. ಅದರಲ್ಲಿ ಬಂಗಾರಪ್ಪನವರ ಸಮಿತಿಯ ವರದಿಯ ಶಿಫಾರಸುಗಳು ಏನಿವೆ ಅವುಗಳನ್ನು ಜಾರಿಗೆ ಕೊಡಬೇಕೆನ್ನುವ ಮಾತನ್ನು ಅವರು ಹೇಳಿದ್ದಾರೆ. ನಾನು ಬಡ್ಜೆಟ್ ಭಾಷಣದ ಮೇಲೆ ಮಾತನಾಡುವಾಗ ಹೇಳಿರುವುದು ನೀವು ಏನು ಸಬ್ಸಿಡಿ ಕೊಟ್ಟಿದ್ದೀರಿ ಅದರ ಬಗ್ಗೆ ಹೇಳಿದ್ದೇನೆ. 30-6-83ರೊಳಗೆ ಯಾರು ಅಸಲು ಕಟ್ಟುತ್ತಾರೋ ಅಂತಹವರ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದೂ ಇರತಕ್ಕ 9 ಕೋಟಿ ಬಡ್ಡಿ ರಿಯಾಯಿತಿಯನ್ನು ತೋರಿಸಿದ್ದೇವೆಂದು ಏನು ಹೇಳಿದ್ದೀರಿ ಅದರ ಮೇಲೆ ಕಾಮೆಂಟ್ ಮಾಡಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.--ಇದು ಕ್ಲಾರಿಫಿಕೇಶನ್ ಇದ್ದ ಹಾಗೆ ಕಾಣುವುದಿಲ್ಲ. ಬಡ್ಜೆಟ್ ಭಾಷಣಕ್ಕೆ ಉತ್ತರ ಕೊಡುವ ಹೊತ್ತಿನಲ್ಲಿ ಸಂಭಾಷಣೆ ಮಾಡುವಂತಹ ಕಾರ್ಯಕ್ರಮವಿಲ್ಲ.

ಶ್ರೀ ಎಸ್. ಬಂಗಾರಪ್ಪ --ತಾ. 30-6-83 ರೊಳಗೆ ಯಾರು ಹಣವನ್ನು ಕಟ್ಟುತ್ತಾರೋ ಅಂತಹವರಿಗೆ ಮಾತ್ರ ಕೊಡತಕ್ಕಂತಹ ಸಬ್ಸಿಡಿ 9 ಕೋಟಿ ರೂಪಾಯಿ. 30-6-83 ರೊಳಗೆ ಹಣವನ್ನು ಕಟ್ಟತಕ್ಕಂತಹ ಶಕ್ತಿ ಅನೇಕ ಜನರಿಗೆ ಇಲ್ಲ ಅಸಲು ಕಟ್ಟದೇ ಇರತಕ್ಕವರಿಗೆ ಸಬ್ಸಿಡಿ ಕೊಡತಕ್ಕಂತಹ ಪ್ರಶ್ನೆ ಉದ್ಭವವಾಗುವುದಿಲ್ಲ ಎನ್ನತಕ್ಕದ್ದು ನನ್ನ ವಾದ. ಎರಡನೆಯದಾಗಿ ನನ್ನ ರಾಜಿನಾಮೆ ಬಗ್ಗೆ ಮತ್ತು ಸ್ವಾಭಿಮಾನದ ಬಗ್ಗೆ ಹೇಳಿದ್ದಾರೆ, ಆ ಸಂದರ್ಭದಲ್ಲಿ ಮಂತ್ರಿ ಮಂಡಲದಿಂದ ಹೊರಗೆ ಬರತಕ್ಕಂತಹ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಿದ್ದೇನೆ. ಸಮಿತಿಯನ್ನು ವಜಾ ಮಾಡಿದಾಗ ನಾನು ಬಹುಶಃ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಪ್ರವಾಸ ಕೈಗೊಂಡಿದ್ದೆ. ಅದರ ಜೊತೆಗೆ ಸಮಿತಿಯನ್ನು ವಜಾ ಮಾಡಿರತಕ್ಕ ವಿಚಾರ ನನಗೆ ಗೊತ್ತಿದ್ದ ಮೇಲೂ ಸಹ ನಾವು ಒಂದು ಪಕ್ಷದಲ್ಲಿರುವಾಗ ಆ ಪಕ್ಷದ ನಿಯಮಗಳ ಚೌಕಟ್ಟಿನೊಳಗಡೆ ಕೆಲಸ ಮಾಡಬೇಕಾಗುತ್ತದೆ. ಬಹುಶಃ ಸಮಿತಿಯನ್ನು ವಜಾ ಮಾಡಿದ್ದು ಅಕ್ಟೋಬರ್ ನವಂಬರ್ ಅಥವಾ ಡಿಸೆಂಬರ್ ತಿಂಗಳು ಇರಬಹುದು ; ಮಾನ್ಯ ಬೊಮ್ಮಾಯಿಯವರಿಗೆ ನೆನಪಿದೆ, ನನಗೆ ನೆನಪಿಲ್ಲ. ನಾನು ಮಂತ್ರಿ ಮಂಡಲಕ್ಕೆ ರಾಜಿನಾಮೆ ಕೊಟ್ಟಿದ್ದು ಜನವರಿ ಮೊದಲನೆ ವಾರದಲ್ಲಿರಬಹುದು. ರಾಜಿನಾಮೆ ಬರೆದು ಬಿಸಾಕಿ ಹೋಗಬೇಕೆಂದರೂ ಕೂಡ ಪ್ರಜಾಪ್ರಭುತ್ವದ ತತ್ವಕ್ಕೆ ಅನುಗುಣವಾಗಿ ಹೋಗಬೇಕಾಗುತ್ತದೆ. ನಾನು ಅಧಿಕಾರಕ್ಕಾಗಿ ಆಸೆ ಪಟ್ಟಿಲ್ಲ, ಆಗಲೂ ಅಷ್ಟೇ ಈಗಲೂ ಅಷ್ಟೇ. ಅಧಿಕಾರಕ್ಕೆ ಆಸೆ ಪಟ್ಟಿಲ್ಲವೆಂದು ಹೇಳುವವರು ಈಗಲೂ ಕೂಡ ಅಧಿಕಾರದಲ್ಲಿದ್ದಾರೆ. ಆದ್ದರಿಂದ ಅಧಿಕಾರದ ಪ್ರಶ್ನೆ ಈಗ ಬೇಡ ಮತ್ತೊಂದು ಸಾರಿ ಪ್ರಸ್ತಾಪ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾವು ರೈತರಿಗೆ ಕೊಟ್ಟಂತಹ ಸವಲತ್ತುಗಳನ್ನು ಕೇವಲ ತೋರಿಕೆಗೋಸ್ಕರ ಕೊಟ್ಟಿಲ್ಲ. ನಾವು ಕೊಟ್ಟಿರತಕ್ಕ ನಿಜವಾದಂತಹ ಸವಲತ್ತು ಎಷ್ಟು ? ಅದನ್ನು ತಿಳಿದುಕೊಳ್ಳಬೇಕಾದ್ದು ಅಗತ್ಯವಿದೆ, ನಾನು ಸ್ಪಷ್ಟಪಡಿಸಬೇಕಾದ್ದು ಅಗತ್ಯವಿದೆ, ಅದಕ್ಕೆ ಇದರಲ್ಲಿ ಸಬ್ಸಿಡಿ ಎಂದು ಬರೆದಿದ್ದೇವೆ. ಇದು ರಿಸರ್ವ್‌ಬ್ಯಾಂಕ್‌ನವರಿಗೆ ಹೋಗುತ್ತದೆ ಅವರಿಗೆ ಪೈಸೆ ಕೂಡ ಅರ್ಥವಾಗುವ ರೀತಿಯಲ್ಲಿ ನನ್ನ ಭಾಷಣದಲ್ಲಿ ಬರೆದಿದ್ದೇನೆ. ಒಂದು ಕಾಪಿ ರಿಸರ್ವ್‌ಬ್ಯಾಂಕಿಗೆ ಹೋಗುತ್ತದೆ. ಇದನ್ನು

ವೇವ್ ಮಾಡಿದ್ದೇವೆ ಅಂದರೆ ಓವರ್ ಡ್ಯೂ ಎಷ್ಟು, ಬಡ್ಡಿ ಎಷ್ಟು ? ಸಾಮಾನ್ಯ ಬಡ್ಡಿ ಇರಲಿ ಯಾವುದೇ ಬಡ್ಡಿ ಇರಲಿ ಚಕ್ರ ಬಡ್ಡಿ, ಸುಸ್ತಿ ಬಡ್ಡಿ ಯಾವುದೇ ಬಡ್ಡಿ ಇರಲಿ, ಎಷ್ಟು ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎನ್ನುವುದನ್ನು ಅವರಿಗೆ ಹೇಳುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ.—ಇಂಪಾಸಿಬಲ್ ಕಂಡೀಷನ್ಸ್ ಹಾಕಿ.

ಶ್ರೀ ರಾಮಕೃಷ್ಣ ಹೆಗಡೆ.--ಎರಡು-ಮೂರು ಜಿಲ್ಲಾ ಬ್ಯಾಂಕ್‌ಗಳನ್ನು ಬಿಟ್ಟರೆ ಬೇರೆ ಯಾವುದೇ ಜಿಲ್ಲಾ ಬ್ಯಾಂಕ್ ಬರುವ ವರ್ಷ ರೈತರಿಗೆ ಸಾಲ ಕೊಡತಕ್ಕಂತಹ ಪರಿಸ್ಥಿತಿಯಲ್ಲಿ ಇಲ್ಲ ಈ ರೀತಿ ಆದರೆ ರಿಸರ್ವ್‌ಬ್ಯಾಂಕ್‌ನವರು ಹಣ ಕೊಡುವುದಕ್ಕೆ ಇಷ್ಟಪಡುತ್ತಾರೆಯೇ ಎಂಬುದನ್ನು ತಾವುಗಮನಿಸಬೇಕು. ರೈತರಿಗೆ ಅನುಕೂಲವಾಗಬೇಕೆಂದು ನಿಮ್ಮ ಮನಸ್ಸಿನಲ್ಲಿದ್ದರೆ 30-6-83 ರೊಳಗೆ ಪ್ರಿನ್ಸಿಪಲ್ ಹಣ ಕೊಡಬೇಕು. ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಯಾವುದೇ ಸಾಲವಾಗಲಿ, ಸಾಲದ ಹಣವನ್ನು ಜೂನ್ 83 ರೊಳಗೆ ಯಾರು ವಾಪಸ್ ಕೊಡುತ್ತಾರೆ ಅಂತಹವರಿಗೆ ಬಡ್ಡಿ ಮನ್ನಾ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಅನುಕೂಲ ಪಡೆಯತಕ್ಕ ರೈತರು ತಾಲ್ಲೂಕು ಪ್ರೈಮರಿ ಕ್ರೆಡಿಟ್ ಸೊಸೈಟಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಇನ್ನಿತರ ಕಡೆಯಿಂದ ಸಾಲ ಪಡೆದುಕೊಂಡಿದ್ದರೆ ಅಂತಹ ಪ್ರೈಮರಿ ಸೊಸೈಟಿಗಳಿಗೆ ತಮ್ಮ ಕೃಷಿ ಉತ್ಪನ್ನವನ್ನು ಮಾರಾಟ ಮಾಡಿದರೆ ಕೃಷಿ ಉತ್ಪನ್ನದ ಮೌಲ್ಯದ ಶೇ 5 ರಷ್ಟರವರೆಗೆ ಸರ್ಕಾರದಿಂದ ಪ್ರೋತ್ಸಾಹಕ ಸಬ್ಸಿಡಿ ನೀಡಲು ತೀರ್ಮಾನ ಮಾಡಿದ್ದೇವೆ. ರೈತ ಬೆಳೆದಂತಹ ಬೆಳೆಯನ್ನು ಮಾರ್ಕೆಟಿಂಗ್ ಸೊಸೈಟಿ ಮುಖಾಂತರ ಮಾರದಿದ್ದರೆ ಸಹಕಾರ ಸಂಸ್ಥೆಗಳು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ರೈತರಿಗೆ ಮೋಸ ಆಗತಕ್ಕಂತಹ ಸಾಧ್ಯತೆ ಇದೆ. ಸುಮಾರು 20 ಕೋಟಿ ರೂಪಾಯಿಗಳ ಸಾಲ ಇವತ್ತು ರೈತರ ಮೇಲೆ ನೀರು ಸಿಗದೆ ವ್ಯರ್ಥವಾಗಿ ತೆಗೆದಂತಹ ನೀರಾವರಿ ಬಾವಿಗಳ ಮೇಲಿದೆ. ಹಿಂದೆ ಸರ್ಕಾರ ಏನು ಮಾಡಿತ್ತು ಅಂದರೆ ಇಂತಿಷ್ಟನೇ ತಾರೀಖಿನೊಳಗೆ ಯಾರು ಅರ್ಜಿ ಹಾಕಿಕೊಳ್ಳುತ್ತಾರೆ ಅಂತಹವರಿಗೆ ಮಾತ್ರ ರಿಯಾಯಿತಿ ಸಿಗುತ್ತದೆ ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಿದ್ದರು ನಾವು ಆ ಒಂದು ಕಂಡೀಷನ್ ಮಾಡಿಲ್ಲ ಕೊಳವೆ ಬಾವಿ ತೆಗೆಸಿ ಅವು ಫೇಲ್ಯೂರ್ ಆಗಿದ್ದರೆ ಅಂತಹ ಬಾವಿಗಳಿಗೂ ಕೂಡ ವಿನಾಯತಿ ತೋರಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೇವೆ. ಸುಮಾರು 10–12 ತರಹ ಸಾಲಗಳು ಅನೇಕ ವರ್ಷಗಳಿಂದ ರೈತರ ಮೇಲೆ ಹಾಗೆಯೇ ಇದೆ. ಪ್ರತಿ ವರ್ಷ 4 20 ಲಕ್ಷ ವಸೂಲಿ ಆಗುತ್ತಿತ್ತು. ಅದು ಫ್ಲಡ್ ಲೋನ್, ಸೀಡ್ ಲೋನ್, ಮೆನ್ಯೂರ್ ಲೋನ್, ಫರ್ಟಿಲೈಸರ್ ಲೋನ್ ಹೀಗೆ ಯಾವುದೇ ಲೋನ್ ಇರಬಹುದು.

ನೀರಾವರಿಯ ಜಮೀನಿನ ಮೇಲೆ ತೆಗೆದುಕೊಂಡಿರತಕ್ಕಂಥ ಲೋನ್ ಇರಬಹುದು, ಅಥವಾ ಜಮೀನಿನ ಮೇಲೆ ತೆಗೆದುಕೊಂಡಿರತಕ್ಕಂಥ ಲೋನ್ ಇರಬಹುದು. ಅಥವಾ ಬೆಳೆ ಅಭಿವೃದ್ಧಿಯ ಮೇಲೆ ತೆಗೆದುಕೊಂಡಿರತಕ್ಕಂಥ ಸಾಲವಿರಬಹುದು, ಅಥವಾ ತಕಾವಿ ಲೋನ್ ಇರಬಹುದು ಯಾವುದೇ ತರಹ ಲೋನ್ ಇರಬಹುದು ಆ ಎಲ್ಲಾ ರೀತಿಯ ಲೋನ್‌ಗಳನ್ನು ಸರ್ಕಾರ ನಿಗದಿ ಮಾಡಿದ ದಿನಾಂಕದೊಳಗಾಗಿ ಪಾವತಿ ಮಾಡಿದರೆ ಅವರಿಗೆ ಎಲ್ಲಾ ರೀತಿಯ ಬಡ್ಡಿಯ ರಿಯಾಯ್ತಿಯನ್ನು ಸರ್ಕಾರ ಮಾಡುತ್ತದೆ. ಮತ್ತು ಯಾವ ರೈತ ಸಾಯಿಲ್ ಕನ್ಸ್‌ರ್ವೇಷನ್‌ಗೆ ಲೋನ್ ತೆಗೆದುಕೊಂಡಿರುತ್ತಾನೆಯೋ ಆ ಲೋನ್‌ನ್ನು ಮನ್ನಾ ಮಾಡಿದ್ದೇವೆ. ರೈತರಿಗೆ ಸರ್ಕಾರ ಯಾವ ಯಾವ ರೀತಿಯ ಸಹಾಯವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಯೋ ಆ ಎಲ್ಲಾ ಸಹಾಯವನ್ನು ಮಾಡಲು ಸಿದ್ಧವಾಗಿದೆ. ನನಗೆ ಇದರಲ್ಲಿ ತಕ್ಷಣ ಬೇಕಾದಂಥ ಮಾಹಿತಿಗಳು ಸಿಗಲಿಲ್ಲ. ಯಾವ ರೈತ ತನ್ನ ಜಮೀನಿನ ಮೇಲೆ ಅಂದರೆ ಒಂದು ಎಕರೆ, ಅಥವಾ ಎರಡು ಎಕರೆ ಮೂರು ಎಕರೆಯಾಗಿರಬಹುದು ಅದರ ಮೇಲೆ ಸಾಯಿಲ್ ಕನ್ಸ್‌ರ್ವೇಷನ್‌ಗೆ ಲೋನ್ ತೆಗೆದುಕೊಂಡಿದ್ದರೆ ಆತ ಖರ್ಚು ಮಾಡಿರತಕ್ಕಂಥ ಹಣ ಎಷ್ಟು ಎಂಬುದನ್ನು ಲೆಕ್ಕಾಚಾರ ಮಾಡಿ ಆ ಜಮೀನಿನ ಬೆಲೆಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದರೆ.

ಶ್ರೀ ಕೆ ಎಚ್. ರಂಗನಾಥ್.--ಸರ್ಕಾರದಲ್ಲಿ ಆ ಮಾಹಿತಿ ಇದೆ. ಬೇಕಾದರೆ ತಾವು ತರಿಸಿಕೊಂಡು ನೋಡಬಹುದಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವೇಳೆ ಆ ರೈತ ತನ್ನ ಜಮೀನಿನ ಬೆಲೆಗಿಂತ ಹೆಚ್ಚು ಕಿಮ್ಮತ್ತು ಸರ್ಕಾರಕ್ಕೆ ಕಟ್ಟಿದ್ದರೆ ಅದನ್ನು ಕೂಡ ಸರ್ಕಾರ ಮನಗಂಡು ಅವರಿಗೆ ಸೂಕ್ತ ಅನುಕೂಲದ ವ್ಯವಸ್ಥೆಯನ್ನು ಮಾಡುತ್ತದೆ. ಕೆಲವು ಜನ ರೈತರಿಗೆ ಈ ರೀತಿಯ ತೊಂದರೆಯಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ರೀತಿಯಲ್ಲಿ ರೈತರಿಗೆ ಅನುಕೂಲವಾಗದೆ ಇದ್ದರೆ ಅದನ್ನು ಸರ್ಕಾರ ಗಮನಿಸಿ ಅವರಿಗೆ ಹೆಚ್ಚಿನ ರೀತಿಯಲ್ಲಿ ಪರಿಹಾರ ಕೊಡುವುದಕ್ಕೂ ಕೂಡ ಯೋಚನೆ ಮಾಡಿದ್ದೇವೆ. ಆದರೆ ಹಿಂದಿನ ಸರ್ಕಾರದವರು ರೈತರಿಗೆ ಕೊಟ್ಟಿರತಕ್ಕಂಥ ಸವಲತ್ತುಗಳನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪಮೊಯ್ಲಿಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕಾರಣವೇನೆಂದರೆ ಹಿಂದಿನ ಹಣಕಾಸಿನ

ಮಂತ್ರಿಗಳು ಮತ್ತು ಹಿಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು ನಾವು ರೈತರಿಗೆ ಸುಮಾರು 83 ಕೋಟಿ ರೂಪಾಯಿಗಳ ಪರಿಹಾರವನ್ನು ಒದಗಿಸಿಕೊಟ್ಟದ್ದೇವೆಂದು ಹೇಳಿಕೊಂಡಿದ್ದಾರೆ. ಮತ್ತು ನಾವು ರೈತರ ರಕ್ಷಣೆ ಮಾಡಿದ್ದೇವೆಂದು ಹೇಳಿದಾರೆ ಅವರು ಮಾಡಿರತಕ್ಕಂಥದ್ದು ಏನೆಂಬುದನ್ನು ನಾವು ಇಲ್ಲಿ ಅವಲೋಕಿಸಿದರೆ ಎಲ್ಲರಿಗೂ ಗೊತ್ತಾಗುತ್ತದೆ. 'Abolition of Betterment Ley under Karnataka Irregation Act-5 crores." ಇದು ಕೂಡ ಒಂದು ರೀತಿಯಲ್ಲಿ ರೈತರಿಗೆ ಕೊಟ್ಟಿರತಕ್ಕಂಥ ಪರಿಹಾರ? ಇದನ್ನು ತಾವು ಪರಿಹಾರವೆಂದು ಹೇಳಿದರೆ ಹೇಗೆ? ಹಿಂದಿನ ಸರ್ಕಾರ ಆರ್ಥಿಕವಾಗಿ ಹಿಂದೆ ಬಿದ್ದವರನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡಲಿಲ್ಲ. ಆದರೆ ಇದರಲ್ಲಿ ಇನ್ನೂ ಒಂದು ಒಳ್ಳೆಯ ತಮಾಷೆ ಇದೆ. ಅದೇನೆಂದರೆ Payment of compensation of land acquisition where such compensation in deveeopment of Achkat roads in command area of major projects. ಅದೇ ರೀತಿಯಲ್ಲಿ ರೈತರಿಗೆ ಯಾವ ಯಾವ ಪರಿಹಾರವನ್ನು ಕೊಟ್ಟಿದ್ದಾರೆಂದು ನಾವು ಲೆಕ್ಕಾ ಹಾಕಿ ನೋಡಿದರೆ ಗೊತ್ತಾಗುತ್ತದೆ. ಈ ರೀತಿಯ ಪರಿಹಾರವನ್ನು ಹಿಂದಿನ ಸರ್ಕಾರದವರು ರೈತರಿಗೆ ಕೊಟ್ಟು ನಾವು ಸುಮಾರು 83 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಟ್ಟದ್ದೇವೆಂದು ಹೇಳಿದ್ದಾರೆ. ಮತ್ತೆ ಹೋರಾಟ ತೆರಿಗೆ 3 ಪರ್ಸೆಂಟ್ ಇತ್ತು. ಅದನ್ನು ಎರಡು ಪರ್ಸೆಂಟ್ ಎಂದು ಮಾಡಿದ್ದಾರೆ. ಈ ರೀತಿಯಲ್ಲಿ ಪರಿಹಾರವೆಂದು ಹೇಳಿ ಅದಕ್ಕೆ ಸ್ವಲ್ಪ ಬಣ್ಣ ಕಟ್ಟಿ ರೈತರನ್ನು ಮೋಸ ಮಾಡಿದ್ದಾರೆ.

Amount kept at the disposal of Food and Civil Supplies corporation under Minimum Support price policy to avoid distress sales 20 crores ಕೊಟ್ಟಿದ್ದಾರೆ. ಇದನ್ನು ಮಾನ್ಯ ಸದಸ್ಯರು ಗಮನಿಸಬೇಕು. Employment Affirmation Scheme for providing emplyment

ಶ್ರೀ ಎಸ್. ಭೀಮಣ್ಣ ಖಂಡ್ರೆ.--ತಮ್ಮ ಅಧಿಕಾರಿಗಳು ಬರೆದು ಕೊಟ್ಟಿರುವುದು ಆ ರೀತಿ, ಅದಕ್ಕೆ ಹಿಂದಿನ ಸರ್ಕಾರವೇನು ಮಾಡುವುದಕ್ಕೆ ಆಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.--ಭೀಮಣ್ಣ ಖಂಡ್ರೆಯವರೇ, ನಿಮ್ಮ ಸರ್ಕಾರ ಕೊಟ್ಟಿರುವ ಪರಿಹಾರಕ್ಕಿಂತ ನಮ್ಮ ನೂತನ ಸರ್ಕಾರ ಹೆಚ್ಚಿನ ಪರಿಹಾರವನ್ನು ಕೇವಲ ಎರಡು ತಿಂಗಳಲ್ಲಿ ಕೊಟ್ಟಿದೆ. ತಮ್ಮ ಹಾಗೆ ನಾವು ರೈತರ ಮುಂದೆ ನಾಟಕ ಆಡುವುದಿಲ್ಲ.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ ಅದನ್ನು ತಾವು ಪೂರ್ತಿ ಓದಿದ್ದರೆ ಚನ್ನಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.--ಪೂರ್ತಿಯಾಗಿ ಹೇಳಲಾ. ಬೇಡ ಪೂರ್ತಿಯಾಗಿ ನೀವೇ ಓದಿಕೊಳ್ಳಿ, ಈ ಪುಸ್ತಕವನ್ನು ನಿಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ ನಮ್ಮ ಸರ್ಕಾರ ಜನತೆಯ ಸರ್ಕಾರ ಹಾಗೂ ಸರ್ಕಾರ ರೈತರ ಮಿತ್ರ ಸರ್ಕಾರ. ಆದ್ದರಿಂದ ಸದಾ ರೈತರಿಗೆ ಸಹಾಯ ಮಾಡುವುದೇ ನಮ್ಮ ಮೂಲಭೂತವಾದ ಗುರಿ. ಹಿಂದಿನ ಸರ್ಕಾರ ಇದ್ದಾಗ ಹಳ್ಳಿಗಳಿಂದ ಪಟ್ಟಣಗಳಿಗೆ ಹಣ ಸೇರು ಬರುತ್ತಿತ್ತು. ಆದರೆ ನಮ್ಮ ಸರ್ಕಾರ ಪಟ್ಟಣಗಳಿಂದ ಹಳ್ಳಿಗಳಿಗೆ ಸೇರು ಹೋಗುವಂತೆ ವ್ಯವಸ್ಥೆ ಮಾಡುವಂಥ ಉದ್ದೇಶವನ್ನು ಇಟ್ಟುಕೊಂಡಿದೆ: ನಮಗೆ ಯಾವುದೇ ರೀತಿಯಲ್ಲಿ ರೈತರನ್ನು ನಕಲಿ ಮಾಡುವಂಥ ಉದ್ದೇಶವಿಲ್ಲ. ಆದ್ದರಿಂದ ನಾನು ರೈತರನ್ನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ, ಏನೆಂದರೆ, ಇದು ನಿಮ್ಮ ಸರ್ಕಾರ, ನಿಮ್ಮ ಮಿತ್ರ ಸರ್ಕಾರ ನೀವು ಯಾವಾಗ ಬೇಕಾದರೂ ಧಾರಾಳವಾಗಿ ಈ ಸರ್ಕಾರದೊಂದಿಗೆ ವ್ಯವಹರಿಸಬಹುದು ಎಂದು

ಶ್ರೀ ಧರ್ಮಸಿಂಗ್.—ಸ್ವಾಮಿ. ರೈತರಿಗೆ ನಿಮ್ಮ ಸರ್ಕಾರ

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ ನಾನು ಈಲ್ಡ್ ಆಗಿಲ್ಲ.

ಶ್ರೀ ಧರ್ಮಸಿಂಗ್.—ಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು ಬಂಗಾರಪ್ಪನವರು ಮಾತನಾಡಬೇಕಾದರೆ ಈಲ್ಡ್ ಆಗುತ್ತಾರೆ ; ನಾನು ಮಾತನಾಡುವುದಕ್ಕೆ ಈಲ್ಡ್ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಹಿಂದಿನ ಸರ್ಕಾರದವರು ರೈತರ ಮೇಲೆ ಗುಂಡು ಹಾಕಿ ಕೊಂದಿದ್ದಾರೆ ಆದರೆ ಅದೇ ರೈತರಿಗೆ ನಾವು ಇವತ್ತು ಸಹಾಯ ಮಾಡುತ್ತಿದ್ದೇವೆ. ಅಷ್ಟೇ ನಮಗೂ ನಿಮಗೂ ಇರುವಂಥ ವ್ಯತ್ಯಾಸ.

ಶ್ರೀ ಧರ್ಮಸಿಂಗ್.--ಸ್ವಾಮಿ ಪ್ರತಿದಿವಸ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಯಾರು ರೈತರ ಮೇಲೆ ಗುಂಡು ಹಾಕಿ ಕೊಲ್ಲುತ್ತಿದ್ದಾರೆಂದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಧರ್ಮಸಿಂಗ್‌ರವರೇ ಇದು ಜನತೆಯ ಪ್ರೀತಿಯ ಸರ್ಕಾರ ಈ ಸರ್ಕಾರವನ್ನು ಅರ್ಥಮಾಡಿಕೊಳ್ಳಬೇಕಾದರೆ ನಿಮಗೆ ಇನ್ನೂ ಸಮಯ ಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.--ನಿಮ್ಮ ಸರ್ಕಾರದ ಲಕ್ಷಣಗಳು ಏನೆಂಬುದು ಜನರಿಗೆ ಗೊತ್ತಾಗುತ್ತಿವೆ.

ಶ್ರೀ ರಾಮಕೃಷ್ಣ ಹೆಗಡೆ.--ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ಮಾತನಾಡಿದಂಥ ಸಂದರ್ಭದಲ್ಲಿ ಲ್ಯಾಂಡ್ ರಿಫಾರಮ್ಸ್ ಬಗ್ಗೆ ಪ್ರಸ್ತಾಪ ಮಾಡಿಲ್ಲ ಎಂದು ತಿಳಿಸಿದ್ದಾರೆ. ನಮ್ಮ ಆಯವ್ಯಯಪಟ್ಟಿಯಲ್ಲಿ ಪ್ರತಿಯೊಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದೇನೂ ಇಲ್ಲ ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ನಾವು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದೇವೆ.

11-00 A. M.

ಶ್ರೀ ಎಸ್. ಬಂಗಾರಪ್ಪ.--ನಾನು ಹೇಳಿದ್ದು ಚುನಾವಣಾ ಪ್ರಣಾಳಿಕೆಯಲ್ಲಿ ಗೇಣಿದಾರರಿಗೆ ಕೊಟ್ಟಿದ್ದ ಆಶ್ವಾಸನೆ ಇದರಲ್ಲಿ ಇಲ್ಲವಲ್ಲ ಅಂತ.

Sri. RAMAKRISHNA HEGADE---We have said it in Governor's address.

> "The implementation of Land Reforms has not yet been completed, because large of a number of pending writ Petitions. Likewise, it has not been possible to complete the distribution of surplus lands because of stay orders from the Courts. It would be our effort to see that these litigations are finalised as soon as possible and to ensure that the object of Land Reforms Legislation is completely achieved in the shortest time span possible."

ಇದನ್ನು ನಾನು ಇದರಲ್ಲಿ ಮತ್ತೆ ಪುನರುಕ್ತಿ ಮಾಡತಕ್ಕ ಅಗತ್ಯ ಇಲ್ಲ. ಆದರೆ ಈ ವಿಚಾರವನ್ನು ಎತ್ತಿದ್ದರಿಂದ ಹೇಳುತ್ತಿದೇನೆ. ಶ್ರೀಮಾನ್ ಬಂಗಾರಪ್ಪನವರಿಗೆ ಭೂಸುಧಾರಣೆಯಲ್ಲಿ ಇವತ್ತು ರೈತರಿಗೆ ಕೊಡಬೇಕಾದಂತಹ ನ್ಯಾಯದ ಬಗ್ಗೆ ಎಷ್ಟು ವಿಶ್ವಾಸ ಇದೆಯೋ, ಅಷ್ಟೇ ವಿಶ್ವಾಸ, ಅದಕ್ಕಿಂತ ಸ್ವಲ್ಪ ಹೆಚ್ಚು ವಿಶ್ವಾಸ ಈ ಸರ್ಕಾರಕ್ಕೆ ಇದೆಯೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ --ನಾನು ಹೇಳಿದಂಥ ಪ್ರಶ್ನೆ ಪೇಮೆಂಟ್ಸ್ ಆಫ್ ಇನ್‌ಸ್ಟಾಲ್‌ಮೆಂಟ್ಸ್.

ಶ್ರೀ ರಾಮಕೃಷ್ಣ ಹೆಗಡೆ.--ಅದನ್ನು ಕೂಡ ಕೊಡುತ್ತೇವೆ. ಸಣ್ಣಪುಟ್ಟ ಭೂಮಾಲೀಕರಿಗೆ ಕಾಯಿದೆ ಪ್ರಕಾರ ಏನು ಕೊಡಬೇಕೆಂದು ಇದೆ, ಅದರ ಬಗ್ಗೆ ಕಳೆದ ಎರಡು ವರ್ಷಗಳಿಂದ ಅನೇಕ ಜನರಿಗೆ ಸತಾಯಿಸುತ್ತಿದ್ದರು. ಹೊಸ ಸರ್ಕಾರ ಏನು ಮಾಡಿದೆ ಗೊತ್ತೇನು ? ಈ ವರ್ಗದಲ್ಲಿ ಯಾರ್ಯಾರು ಇದ್ದಾರೆ ಅಂದರೆ, ಅವರು ವಿಧವೆಯರು ಇರಬಹುದು, ಅಥವಾ ಬೇರೆ ಯಾರೇ ಇರಬಹುದು ಅವರಿಗೆ ಮನೆಬಾಗಿಲಿಗೇ ಚೆಕ್ ಮುಖಾಂತರ ಹಣ ಕಳಿಸಿಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಅವರು ಇದಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಹೋಗಬೇಕಾಗಿಲ್ಲ. ಆಮೇಲೆ ಶ್ರೀಮಾನ್ ಬಂಗಾರಪ್ಪನವರು ಈಚೆಗೆ ಮಾಡಿದ ಭಾಷಣವನ್ನು ಕೇಳಿದ್ದೇನೆ, ಅವರು ಕೊಟ್ಟಂತಹ ಹೇಳಿಕೆಗಳನ್ನು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.-- ಭೂಸುಧಾರಣೆ ವಿಚಾರದಲ್ಲಿ ಲ್ಯಾಂಡ್ ಲಾರ್ಡ್‌ಗಳ ಬಗ್ಗೆ ತಾವು ಹೇಳಿದ್ದೀರಿ; ಆದರೆ ಗೇಣಿದಾರರಿಗೆ ಪರಿಹಾರ ಕೊಡತಕ್ಕಂಥ ಇನ್‌ವೆಸ್ಟ್‌ಮೆಂಟ್ ಬಗ್ಗೆ ಹೇಳಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.--ತಾವು ಈಗ ಹೇಳುತ್ತಿದ್ದೀರಿ. ಆದರೆ ಇದಕ್ಕೂ ಹಿಂದೆ ಶ್ರೀಮತಿ ಇಂದಿರಾ ಗಾಂಧಿಯವರೊಬ್ಬರಿಂದಲೇ ಬಡವರ ಬಡತನವನ್ನು ನಿರ್ಮೂಲನ ಗೊಳಿಸುವುದಕ್ಕೆ ಸಾಧ್ಯ, ಅವರೊಬ್ಬರಿಗೆ ಆ ಅಧಿಕಾರ ಇದೆ ಎಂದು ಇವರೇ ವರ್ಣನೆ ಮಾಡಿದ್ದರು. ಆದರೆ ಅದು ಅವರಿಂದ ಆಗಲಿಲ್ಲ ಎನ್ನುವ ಮಾತನ್ನು ಇದೇ ಬಂಗಾರಪ್ಪನವರು ಹೇಳಿದ್ದರು ಇದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಬಹುದು. ಏಕೆಂದರೆ ಈ ದೇಶದಲ್ಲಿ ಯಾವುದೇ ಒಂದು ಸಮಸ್ಯೆಯಾಗಲಿ, ಒಬ್ಬ ವ್ಯಕ್ತಿಯಿಂದ ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಯಾವ ಒಂದು ರೋಗ ಪ್ರಧಾನ ಮಂತ್ರಿಗಳಿಗೆ ತಗಲಿದೆ ಎಂದು ಶ್ರೀಮಾನ್ ಬಂಗಾರಪ್ಪನವರು ಪ್ರಸ್ತಾಪ ಮಾಡಿದರೋ, ದುರ್ದೈವವಶಾತ್ ಅವರಿಗೂ ಕೂಡ ಇದೇ ರೋಗ ಬಡಿದು, ಇವರು ರೋಗ ಗ್ರಸ್ತರಾಗಿರುವಂತೆ ಕಾಣುತ್ತದೆ. ಮೊನ್ನೆ ಅವರು ಭಾಷಣ ಮಾಡಿದ್ದಾಗ ನಾನು ಇದ್ದೆ. ಅವರು ಹೇಳಿದರು ಹಿಂದುಳಿದವರನ್ನು ಮೇಲೆತ್ತಲು ಅದಕ್ಕೆ ಹೃದಯಬೇಕು ಎಂದು ಈ ಹೃದಯ ಯಾರ ಹತ್ತಿರ ಇದೆ ? ತನ್ನೊಬ್ಬರಲ್ಲೇ ಆ ಹೃದಯ ಇದೆಯೆಂದು ಅವರು ಸೂಚ್ಯವಾಗಿ ಹೇಳಿದರು.

ಶ್ರೀ ಎಸ್. ಬಂಗಾರಪ್ಪ.--ಇದು ನಿಮ್ಮ ವ್ಯಾಖ್ಯಾನ.

ಶ್ರೀ ರಾಮಕೃಷ್ಣ ಹೆಗಡೆ.--ಈ ವ್ಯಾಖ್ಯಾನ ನನ್ನದಲ್ಲ. ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ, ಇದನ್ನು ಮಾನ್ಯ ಬಂಗಾರಪ್ಪನವರು ತಿಳಿದುಕೊಳ್ಳಬೇಕು. ಏನೆಂದರೆ, ಹಿಂದುಳಿದವರ ಏಳಿಗೆ ಎನ್ನುವುದು ಯಾವುದೇ ಒಬ್ಬ ವ್ಯಕ್ತಿಯ ಗುತ್ತಿಗೆ ಅಲ್ಲ. ಇದು ಕೇವಲ ಸಮಾಜ ಸುಧಾರಣೆ ತತ್ವ, ಅಥವಾ

ನೀತಿಯೆಂದು ನಾನು ಹೇಳುತ್ತಿಲ್ಲ ಸಮಾಜದ ಶಾಂತಿಯನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವೂ ಹೌದು. ಇವತ್ತು ಬಡವ ಮತ್ತು ಶ್ರೀಮಂತನ ನಡುವೆ ಏನೊಂದು ಅಂತರ ಇತ್ತು, ಅದು ಆರ್ಥಿಕವಾಗಿ ಅಂತರವಾಗಿರಲೀ, ಅಥವಾ ಸಾಮಾಜಿಕವಾದ ಅಂತರವಾಗಿರಲೀ—ಅದು ಎಂದಿಗೂ ಶಾಶ್ವತವಾಗಿ ನಮ್ಮ ಸಮಾಜದಲ್ಲಿ ಇರಲು ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಶತಶತಮಾನಗಳಿಂದಲೂ ಹೇಳುತ್ತಲೇ ಬಂದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸಂದರ್ಭದಲ್ಲಿ ನಾನು ದಿವಂಗತ ದೇವರಾಜ ಅರಸುರವರನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರು ಸ್ವತ: ಹಿಂದುಳಿದವರು ಆಗಿರಲಿಲ್ಲ.

ಶ್ರೀ ಧರ್ಮಸಿಂಗ್.—ಯಾರು ದೇವರಾಜ್ ಅರಸುರವರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದರೋ ಇವತ್ತು ಅವರ ಬೆಂಬಲವನ್ನು ನೀವು ಪಡೆದಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಟೀಕೆ ಮಾಡುವಾಗ ಯಾವುದನ್ನು ಟೀಕೆ ಮಾಡಬೇಕೋ ಅದನ್ನು ಟೀಕೆ ಮಾಡಬೇಕು. ಯಾವುದನ್ನು ಒಪ್ಪಬೇಕೋ ಅದನ್ನು ಒಪ್ಪಬೇಕು. ಆದ್ದರಿಂದ ನಾನು ನೆನಪು ಮಾಡಿಕೊಳ್ಳುತ್ತಿದ್ದೇನೆ, ದಿವಂಗತ ದೇವರಾಜ ಅರಸುರವರು...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥವರನ್ನು ಲೀಡ್ ಮಾಡಿದರೆ ತೊಂದರೆಯಾಗುತ್ತದೆ

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಒಬ್ಬರ ಗುಣವನ್ನು ಮೆಚ್ಚಿದಾಗ ಅವರು ಹೇಳಿದ ಪ್ರತಿಯೊಂದನ್ನೂ ಪಾಲನೆ ಮಾಡಬೇಕು ಎಂದು ಅಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇವರು ಹಿಂದೆ ಕೂಡ ಅಧಿಕಾರದಲ್ಲಿ ಇದ್ದರು ಹಿಂದೆ ಅಧಿಕಾರದಲ್ಲಿದ್ದವರಿಂದ ಹರಿಜನರ ಗಿರಿಜನರ ಉದ್ಧಾರ ಎಷ್ಟು ಆಯಿತೆಂಬುದು ಇಡೀ ದೇಶಕ್ಕೇ ಗೊತ್ತಿದೆ. ಹೊಸ ಭಾಷಣವೇನೂ ಅಲ್ಲ ನಿಮ್ಮದು ಹಳೆಯ ಭಾಷಣವೇ.

ಶ್ರೀ ಬಿ. ರಾಚಯ್ಯ.—ನೀವು ಹಿಂದೆ ಪಿ. ಡಬ್ಲ್ಯೂ.ಡಿ ಮಂತ್ರಿಯಾಗಿದ್ದಾಗ ಹರಿಜನರಿಗೆ, ಅಸ್ಪೃಶ್ಯರಿಗೆ ಏನೇನು ಮಾಡಿದ್ದೀರಿ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ನಿಮ್ಮ ವಿಷಯ ನಮಗೆ ಗೊತ್ತು ಬಿಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಪಿ ಡಬ್ಲ್ಯೂ. ಡಿ ಮಂತ್ರಿಯಾಗಿದ್ದಾಗ ಕಾರ್ಯಕ್ರಮಗಳ ಉದ್ಘಾಟನೆಯನ್ನು ಹರಿಜನರ ಕೈಯಿಂದ ಮಾಡಿಸಿದ್ದೆ. ನೀವು ಮಂತ್ರಿಯಾದ ಮೇಲೆ ಒಬ್ಬರಾದರೂ ಹರಿಜನರಿಂದ ಉದ್ಘಾಟನೆ ಮಾಡಿಸಿಲ್ಲ.

ಕೆಲವು ಯೋಜನೆಗಳನ್ನು ಏತಕ್ಕಾಗಿ ಹಾಕಿಕೊಂಡಿಲ್ಲವೆಂದು ನಾವು ಕೇಳಿದರೆ, ನೀವು ಹಿಂದಿನವಲ್ಲ. ಕೆದಕುವುದಾದರೆ ನಾವೂ ಕೂಡ ನಿಮ್ಮನ್ನು ಕೆದಕಬೇಕಾಗುತ್ತದೆ. ನಿಮ್ಮನ್ನು ಹಾಗೇ ಬಿಡುವುದಕ್ಕಾಗುವುದಿಲ್ಲ. ಕೆಲವು ಯೋಜನೆಗಳನ್ನು ಏಕೆ ಮಾಡಿಲ್ಲವೆಂದು ಹೇಳಿದರೆ ನಿಮಗೆ ಸಿಟ್ಟು ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಏತಕ್ಕಾಗಿ ಎಂದರೆ, ಮಾನ್ಯ ಅಧ್ಯಕ್ಷರೆ,....

ಶ್ರೀ ಜಿ. ಎಂ. ಕಾನಡೆ.—ಪ್ರಪೋಸಲ್‌ನಲ್ಲಿ ಪ್ರತಿಯೊಂದರಲ್ಲೂ ಹರಿಜನರ ಹೆಸರು ಮೇಲೆ ಇರುತ್ತದೆ ಆದರೆ ಪ್ರಮೋಷನ್ ಕೊಡುವಾಗ ಅವರ ಹೆಸರು 100 ರ ಮೇಲೆ ಇರುತ್ತದೆ. ಇನ್ನು ಏಕೆ ಸ್ವಾಮಿ? ಬರೀ ಹರಿಜನ–ಗಿರಿಜನ ಎಂಬುದಾಗಿ ಹೇಳುತ್ತಿದ್ದೀರಾ? ಬೀದಿಯಲ್ಲಿ ಬಿದ್ದಂತಹ ಎಂಜಲನ್ನು ತಿನ್ನುವಂತಹ ಜನ ಈಗಲೂ ಇದ್ದಾರೆ. ಅವರನ್ನು ಯಾರೂ ನೋಡುವ ಹಾಗೇ ಇಲ್ಲ.

ಉಪಾಧ್ಯಕ್ಷರು.—ನೀವು ಹೇಳುತ್ತಿರುವುದು ರೆಕಾರ್ಡಿಗೆ ಹೋಗುತ್ತಿಲ್ಲ. ನೀವು ಕುಳಿತುಕೊಳ್ಳದಿದ್ದರೆ I will have to take action. If you do not sit I will have to name

ಶ್ರೀ ಎಚ್. ಗಂಗಾಧರನ್.—ಸ್ವಾಮಿ ಏನು ಇದು? ಈ ಸದನ ಕ್ರಮವಾಗಿ ನಡೆಯುತ್ತಿದೆಯೆ? ತಾವು ಹೇಳಿದ ಮೇಲೂ ಮಾನ್ಯ ಸದಸ್ಯರು ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಜಿ. ನಾರಾಯಣ್ ಕುಮಾರ್.—ಅವರು ಮಾತನಾಡುವುದಕ್ಕೆ ಹಕ್ಕು ಇಲ್ಲವೇ? ಅವರಿಗೂ ಮಾತನಾಡುವಂತಹ ಹಕ್ಕು ಇದೆ.

ಉಪಾಧ್ಯಕ್ಷರು.—ತಾವು ಕುಳಿತುಕೊಳ್ಳಿ, ಇಲ್ಲದಿದ್ದರೆ I will have to take action ...

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಧರ್ಮಸಿಂಗ್ ಅವರು ....

ಶ್ರೀ ಧರ್ಮಸಿಂಗ್.—ಅಲ್ಲ ಅಲ್ಲ. ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ....

ಶ್ರೀ ಆರ್. ಎಲ್. ಜಾಲಪ್ಪ.---ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿ ಪದೇ ಪದೇ ಎದ್ದು ನಿಂತು ಉತ್ತರಕ್ಕೆ ಅಡ್ಡಿ ಪಡಿಸುವುದು ಸರಿಯಲ್ಲ. ಅವರು ಮಾತನಾಡುವಾಗಲೂ ಅನೇಕ ರೀತಿಯ ಟೀಕೆ ಗಳನ್ನು ಮಾಡಿದ್ದಾರೆ. ಅವರು ಆ ರೀತಿಯ ಟೀಕೆಗಳನ್ನು ಮಾಡುವಾಗ ನಾವು ಸುಮ್ಮನೆ ಕುಳಿತು ಕೇಳಿ ದ್ದೇವೆ. ಈಗ ನಾವು ಅದಕ್ಕೆ ಉತ್ತರ ಕೊಡುವಾಗ ಅವರೂ ಸುಮ್ಮನೆ ಕುಳಿತು ಕೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.---ನಾನು ಈಗ ಆಡತಕ್ಕಂತಹ ಮಾತುಗಳಿಂದ ಶ್ರೀ ಧರ್ಮಸಿಂಗ್ ರವರಿಗೆ ಚುಚ್ಚಿದರೆ ಅವರು ಎದ್ದು ಆಚೆ ಹೋಗಬಾರದು. ಕುಳಿತು ಕೇಳಬೇಕು. ನಾನು ಏನು ಹೇಳುತ್ತಿದ್ದೇನೆಂದರೆ, ನಾನು ದಿವಂಗತ ದೇವರಾಜ ಅರಸ್‌ರವರನ್ನು ಟೀಕೆ ಮಾಡಿದ್ದೇನೆ. ಆದರೆ ನಾನು ಅವರಿಗೆ ಮೋಸ ಮಾಡಿಲ್ಲ. ಬೆನ್ನಿನಲ್ಲಿ ಚೂರಿ ಹಾಕಿಲ್ಲ. ಆದರೆ 1980 ನೇ ಇಸವಿಯಲ್ಲಿ ಚುನಾವಣೆಯಾದಾಗ

ಶ್ರೀ ಧರ್ಮ ಸಿಂಗ್ ---ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೇನೆಂದರೆ

ಶ್ರೀ ರಾಮಕೃಷ್ಣ ಹೆಗಡೆ.---ನಾವಿಬ್ಬರೂ ಒಟ್ಟಿಗೇ ಕೆಲಸ ಮಾಡಿದ್ದೇವೆ. ಒಬ್ಬರಿಗೊಬ್ಬರು ಹೊಡೆ ದಾಡಿದ್ದೇವೆ. ಆದರೆ ದೇವರಾಜ ಅರಸ್ ರವರಿಗೆ ಮೋಸ ಮಾಡಿದಂತಹವನು ನಾನಲ್ಲ. ಇದು ಎಲ್ಲರಿಗೂ ಗೊತ್ತಿದೆ.

ಶ್ರೀ ಧರ್ಮಸಿಂಗ್.---ಯಾರು ನಿಮ್ಮ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದಾರೋ ಅವರೇ ಇವತ್ತು ದೇವರಾಜ ಅರಸ್‌ರವರನ್ನು ಟೀಕೆ ಮಾಡುತ್ತಿದ್ದರೂ ನೀವು ಸುಮ್ಮನೆ ಕುಳಿತಿದ್ದೀರಲ್ಲಾ ಅಂತ ನಾನು ಕೇಳಿದ್ದು.

ಶ್ರೀ ರಾಮಕೃಷ್ಣ ಹೆಗಡೆ.---1980 ನೇ ಇಸವಿಯಲ್ಲಿ ಲೋಕಸಭಾ ಚುನಾವಣೆ ಮುಗಿದ ತಕ್ಷಣ ಯಾರ ಬಣ್ಣ ಏನಾಯಿತು ?

ಶ್ರೀ ಎಚ್. ಗಂಗಾಧರನ್.---ಬಿ. ಜೆ. ಪಿ. ಸದಸ್ಯರು ಏಕೆ ಈ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದೇ ವೆಂದರೆ Because this congress has done irreparable damage. That is why we have given support.....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.---ಪಾಯಿಂಟ್ ಆಫ್ ಆರ್ಡರ್ ....

(ಗೊಂದಲ)

Mr. Deputy Speaker.—It will not go into the record.

ಶ್ರೀ ಪಂಪಾಪತಿ.---ಸದಸ್ಯರು ಇಲ್ಲಿ ಬರತಕ್ಕಂತಹದ್ದು ಗೌರವಕ್ಕೋಸ್ಕರ. "ಹೇ" ಎಂಬುದಾಗಿ ಸಂಭೋದನೆ ಮಾಡುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.---ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಪಂಪಾಪತಿಯವರು ....

ಶ್ರೀ ಪಂಪಾಪತಿ ---ಯಾರೇ ಸದಸ್ಯರಾಗಿರಲಿ ಇಲ್ಲಿಗೆ ಬಂದಿರುವುದು ಗೌರವದಿಂದ ನಡೆದುಕೊಳ್ಳು ವುದಕ್ಕೋಸ್ಕರ. ಸದನದ ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. "ಹೇ" ಅಂದರೆ ಏನರ್ಥ ?

ಶ್ರೀ ಎಂ. ವೀರಪ್ಪ ಮೊಯ್ಲಿ.---ಸನ್ಮಾನ್ಯ ಅಧ್ಯಕ್ಷರೇ, ಈಗ ಸಭೆಯಲ್ಲಿ ಏನೊಂದು ನಡವಳಿಕೆ ನಡೆದಿದೆ ಅದು ಬಹುಶ: ಸರಿಯಾದುದಲ್ಲ. ಏಕೆಂದರೆ ಸದನದಲ್ಲಿ ಇದುವರೆಗೂ ಇದ್ದಂತಹ ಪರಿಸ್ಥಿತಿಯ ಜೊತೆಗೆ ಬಿಜಾಪುರದ ಸದಸ್ಯರು ನನ್ನ ಸದಸ್ಯರ ಕಡೆ ಮುಖ ಮಾಡಿ ಕೈತೋರಿಸಿ....

Sri K. H. RANGANATH.--Gestures are not allowed....

ಕೈ ತೋರಿಸಿ ನೇರವಾಗಿ ಮತ್ತೊಬ್ಬ ಸದಸ್ಯರ ಕಡೆ ತಿರುಗಿ ಮಾತನಾಡತಕ್ಕಂತಹದ್ದು ಸರಿಯಾದುದಲ್ಲ. ಒಂದು ವೇಳೆ ಮಾನ್ಯ ಸದಸ್ಯರು ಅದಕ್ಕೆ ತಯಾರಾಗಿದ್ದರೆ, ನಾವೂ ತಯಾರಾಗಿದ್ದೇವೆ. ಆದರೆ ಆ ರೀತಿ ತಾವು ತಿಳಿದುಕೊಳ್ಳಬೇಡಿ. It is not like that. What is this ? ಸುಮ್ಮನೆ ಕುಳಿತು ಕೊಂಡಿದ್ದೇವೆಂದು ಯಾರು ತಿಳಿದುಕೊಳ್ಳಬಾರದು. ಒಂದು ವೇಳೆ ಅದು ಆಗುವುದಿದ್ದರೆ ಅದೂ ನಡೆದು ಹೋಗಲಿ. ಇದು ತಮಾಷೆ ಏನು ?

ಉಪಾಧ್ಯಕ್ಷರು.---ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

Sri K. H. RANGANATH.—Point of Order..... He cennot make gesture with threatening attitude. He cannot do that.

Mr. Deputy Speakar. That is correct.

ಶ್ರೀ ಕೆ. ಎಚ್. ರಂಗನಾಥ್.---ಅವರು ಸಭೆಯಲ್ಲಿ ಕ್ಷಮೆ ಕೇಳಬೇಕು.

ಉಪಾಧ್ಯಕ್ಷರು.—ಅವರು ಹೊಸ ಸದಸ್ಯರಾಗಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.- ಹೊಸ ಸದಸ್ಯರಾಗಿದ್ದರೆ ಯಾವ ರೀತಿ ಸದನದಲ್ಲಿ ನಡೆದುಕೊಳ್ಳಬೇಕೆಂಬ ಬಗ್ಗೆ ಇರತಕ್ಕಂಥಹ ಪುಸ್ತಕವನ್ನು ಓದಿಕೊಂಡು ಬರಬೇಕು. ಅವರು ಈ ಮನೆಯ ಸದಸ್ಯರಾಗಿ ಈಗಾಗಲೇ 2 ತಿಂಗಳಾಗಿದೆ. ಇದು ತಮಾಷೆ ಏನು ? ಅವರು ಸದನದಲ್ಲಿ ಕ್ಷಮೆ ಕೇಳಬೇಕು. **He should apologise for his behaviour, to this House.**

ಉಪಾಧ್ಯಕ್ಷರು —ಬಿಜಾಪುರದ ಸದಸ್ಯರು ಹಾಗೂ ಈ ಸಭೆಗೆ ಬಹುಶಃ ಇಲ್ಲಿಗೆ ಬಂದಿರತಕ್ಕಂತಹ ಅನೇಕ ಸದಸ್ಯರು ಬಹಳಷ್ಟು ಹೊಸಬರಾಗಿದ್ದಾರೆ. ಕೆಲವು ವಿಚಾರಗಳ ಬಗ್ಗೆ ಮಾತನಾಡತಕ್ಕಂತಹ ಉದ್ವೇಗದಲ್ಲಿ ಆ ರೀತಿ ಹೇಳಿರಬಹುದು ಉದ್ದೇಶಪೂರ್ವಕವಾಗಿ ಆ ರೀತಿ ಮಾತನಾಡಿಲ್ಲವೆಂದು ನನಗನ್ನಿಸುತ್ತದೆ. ಎಲ್ಲ ಸದಸ್ಯರೂ ಅಷ್ಟೇ ಉದ್ವೇಗದಲ್ಲಿ ಮಾತನಾಡಿದ್ದಾರೆಯೇ ಹೊರತು ಉದ್ದೇಶ ಪೂರ್ವಕವಾಗಿ ಯಾರೂ ಮಾತನಾಡಿಲ್ಲ. ಅವರ ಭಾವನೆಗಳನ್ನು ಇಲ್ಲಿ ವ್ಯಕ್ತಮಾಡುವಾಗ ಆ ಉದ್ವೇಗದಲ್ಲಿ ಆ ರೀತಿ ಕೈ ತೋರಿಸಿ, ಆ ಕಡೆ ತಿರುಗಿ ಹೇಳಿರಬಹುದು. ಬಹುಶಃ ಅವರು ಹೊಸದಾಗಿ ಬಂದಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಅದು ಮಾತೇ ? ಆ ರೀತಿ ಇಲ್ಲಿ ಹೇಳಿದರೆ ಸಭೆಗೆ ಗೌರವ ಬರುತ್ತದೆಯೇ ?

ಉಪಾಧ್ಯಕ್ಷರು —ತಾವು ಅಧ್ಯಕ್ಷರಾಗಿ ಕೆಲಸ ಮಾಡಿದಂತಹವರು. ಆದ್ದರಿಂದ ನೀವು ಸಹ ಮಧ್ಯೆ ಪ್ರವೇಶ ಮಾಡಿದರೆ ಹೇಗೆ ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ.—ಈ ಸದನದಲ್ಲಿ ನಡೆದಂತಹ ನಡವಳಿಕೆಯ ಬಗ್ಗೆ ಹೇಳುವುದಾದರೆ, ನಿಮ್ಮ ಹಿಂದೆ ಇರತಕ್ಕಂತಹ ಹಲವಾರು ಸದಸ್ಯರು ಹೇಳಿರತಕ್ಕಂತಹದ್ದು ನಿಮಗೆ ಕಾಣಿದೇ ಇರಬಹುದು. ಆ ಕಡೆಯ ಸದಸ್ಯರೂ ಅಷ್ಟೇ ಉಗ್ರವಾಗಿ ಹಾಗೂ ಉದ್ವೇಗದಲ್ಲಿ ಮಾತನಾಡಿದ್ದಾರೆ. ಈ ಕಾರಣದಿಂದ ಮಾನ್ಯ ಗೆಳೆಯರಾದಂತಹ ಮುನಿಯಪ್ಪನವರು ಸಿಟ್ಟು ಬಂದು ಹೊಡೆಯುವುದಕ್ಕೆ ಹೊರಟರು ನಾನು ಇಲ್ಲೇ ಕುಳಿತು ಎಲ್ಲವನ್ನೂ ನೋಡಿದ್ದೇನೆ' ಅಸತ್ಯ ಹೇಳಬೇಕಾದುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್—ಆ ರೀತಿ ಇಲ್ಲೇ ನಡೆಯಬೇಕೆಂದು ಹೇಳುತ್ತೀರಾ ? ನಡೆಯಬೇಕೆಂದು ಹೇಳುವುದಾದರೆ ನಡೆಸೋಣ.

11-20 a.m.

ಶ್ರೀ ಹೆಚ್ ಡಿ. ದೇವೇಗೌಡ.— ತಾವು ಹೇಳಿದಹಾಗೆ ಪ್ರತಿಯೊಬ್ಬ ಸದಸ್ಯರೂ ಕೂಡ ಸೌಮ್ಯವಾಗಿ ಮಾತನಾಡಬೇಕಾಗುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಅದರಂತೆ ಎಲ್ಲರೂ ನಡೆದುಕೊಳ್ಳಬೇಕು ಅನ್ನುವುದನ್ನೂ ಸಹ ನಾನು ಒಪ್ಪುತ್ತೇನೆ ಆದರೆ...

ಶ್ರೀ ಎಂ. ವೀರಪ್ಪಮೊಯ್ಲಿ —ಬಿಜಾಪುರದ ಮಾನ್ಯ ಸದಸ್ಯರು ಈ ಸಭೆಯಲ್ಲಿ ಯಾವರೀತಿ ಮಾತನಾಡಿದ್ದಾರೆ ಅನ್ನುವುದನ್ನೂ ನಾವೂ ನೋಡಿದ್ದೇವೆ, ನೀವೂ ನೋಡಿದ್ದೀರಿ ಬಿಜಾಪುರದ ಮಾನ್ಯ ಸದಸ್ಯರು ಮಾತನಾಡಿದಂಥಾ ವರ್ತನೆಯನ್ನು ತಾವು ಸರಿ ಎಂದು ಹೇಳುವುದಾದರೆ, ತಮಗೆ ಅದು ಸರಿ ಎಂದು ಅನಿಸುವುದಾದರೆ ನಾವೂ ಒಪ್ಪೋಣ

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನದೊಂದು ವಿನಂತಿ. ಏನೆಂದರೆ ನಾನು 20 ವರ್ಷದಿಂದಲೂ ಕೂಡ ಈ ಮನೆಯ ಸದಸ್ಯನಾಗಿದ್ದೇನೆ. ಈ ಮನೆಯಲ್ಲಿ 20 ವರ್ಷದಿಂದ ನಡೆದಂಥಾ ಇತಿಹಾಸವನ್ನೂ ಸಹ ನೋಡಿದ್ದೇನೆ. ಎಲ್ಲ ವಿಚಾರಗಳನ್ನೂ ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್ಟಿನ ಮೇಲೆ ಈಗ ಉತ್ತರ ಕೊಡುತ್ತಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳೂ ಸಹ ಉತ್ತರ ಕೊಡುತ್ತಿದ್ದುದನ್ನು ನಾನು ನೋಡಿದ್ದೇನೆ. 1972 ರಿಂದ 78ರವರೆಗೆ ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅವರು ಈ ರಾಜ್ಯಕ್ಕೆ ಯಾವ್ಯಾವ ಪ್ರಗತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅನ್ನುವುದರ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಿದ್ದ ಎಲ್ಲಾ ಹಂತದಲ್ಲೂ ಕೂಡ ನಾವು ಬೇಷರತ್ತಾಗಿ ನಮ್ಮ ಬೆಂಬಲವನ್ನು ಸೂಚಿಸಿದ್ದೇವೆ. ಇದು ಮಾನ್ಯ ಕೆ. ಹೆಚ್. ರಂಗನಾಥ್‌ರವರಿಗೂ ಗೊತ್ತು. ತಮಗೆ ಉದಾಹರಣೆಗೆ ಹೇಳಬೇಕಾದರೆ, ಭೂಸುಧಾರಣೆ ಬಗ್ಗೆ ಮಸೂದೆ ತಂದಾಗ ಅವಿರೋಧವಾಗಿ ಬೆಂಬಲವನ್ನು ಸೂಚಿಸಿದ್ದೇವೆ. ಅವೊತ್ತಿನ ದಿವಸ ಶ್ರೀ ಎಸ್. ಆರ್. ಬೊಮ್ಮಾಯಿ ಅವರು ವಿರೋಧಪಕ್ಷದ ನಾಯಕರಾಗಿದ್ದರು. ಹಾಗೆಯೇ ಈ ರಾಜ್ಯದ ಪ್ರಗತಿಯ ಬಗ್ಗೆ ಪ್ರಮೋಷನ್ ಕೊಡಬೇಕು ಎಂದು ಒಂದು ನಿರ್ಣಯವನ್ನು ಮಂಡನೆ ಮಾಡಿದಾಗ ಅದಕ್ಕೂ ಕೂಡ ನಾವು ಸ್ವಾಗತ ಮಾಡಿದ್ದೇವೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಕೇವಲ ಒಂದು ವರ್ಗದ ಹೆಸರನ್ನು ಹೇಳುವುದಾಗಲಿ

ಅಥವಾ ಒಂದು ಪಕ್ಷದ ಹೆಸರನ್ನಾಗಲಿ ಹೇಳಿಕೊಂಡು ಮಾಡಿಕೊಂಡು ಹೋಗುವ ವ್ಯಕ್ತಿಯ ಗುತ್ತಿಗೆ ಅಲ್ಲ. ಶ್ರೀಮಾನ್ ದೇವರಾಜ ಅರಸ್‌ರವರು ಆಡಳಿತದಲ್ಲಿ ಏನಾದರೂ ಲೋಪ ಇದ್ದರೆ ಅವರ ಬಗ್ಗೆಯೂ ಸಹ ಬೇಕಾದಷ್ಟು ಟೀಕೆ ಮಾಡಿದ್ದೇವೆ. ವಾದ ವಿವಾದವನ್ನು ಮಾಡಿದ್ದೇವೆ. ಆದರೆ ಆ ಸಂದರ್ಭದಲ್ಲಿ ಪ್ರಗತಿಪರವಾದ ಯಾವ ಕಾರ್ಯಕ್ರಮಗಳು ಬಂದರೂ ಅದಕ್ಕೆ ನಾವು ಎಂದಿಗೂ ಅಡ್ಡಿ ಮಾಡುತ್ತಿರಲಿಲ್ಲಾ. ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಎಷ್ಟೋ ವಿಷಯಗಳ ಬಗ್ಗೆ ಅವರ ಜೊತೆ ಚರ್ಚೆ ಮಾಡಿದ್ದೇನೆ; ಅದಕ್ಕೆ ಪ್ರತಿ ಚರ್ಚೆಯೂ ಆಗಿದೆ, ಹಾಗೆಯೇ ಈಗ ತಾವು ನಮ್ಮನ್ನು ಕುರಿತು ನಾವು ರೈತರಿಗೆ ಮೋಸ ಮಾಡಿದ್ದೇವೆ, ಹಾಗೆ ಮಾಡಿದ್ದೇವೆ ಹೀಗೆ ಮಾಡಿದ್ದೇವೆಂದು ಏನೆಲ್ಲಾ ಹೇಳಿದ್ದೀರಿ, ಅದಕ್ಕೆ ನಾವು ತಮಗೆ ಸರಿಯಾದ ಉತ್ತರ ಕೊಡಬೇಕಲ್ಲಾ. ನಮ್ಮ ಮೇಲೆ ಏನೆಲ್ಲಾ ಹೇಳಿದ್ದೀರಿ ಅವೆಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಹೀಗೆ ಯಾವುದನ್ನೇ ಆಗಲಿ ಚರ್ಚೆ ಮಾಡುವಾಗ ಅದಕ್ಕೆ ಪ್ರತಿ ಚರ್ಚೆ, ವಾದ ವಿವಾದಗಳು ಆಗಲೇಬೇಕಾಗುತ್ತದೆ ಆದರೆ ಹಾಗೆ ಮಾತನಾಡುವಾಗ ಯಾವ ಸದಸ್ಯರೇ ಆಗಲಿ ಈ ಸಭೆಗೆ ಗೌರವ ಆಗುವ ರೀತಿಯಲ್ಲಿ ಮಾತನಾಡಬೇಕೇ ವಿನಾ ಅಗೌರವವಾಗುವ ರೀತಿಯಲ್ಲಿ ಮಾತನಾಡಬಾರದು. ಅದಕ್ಕೆ ಹೋಗಬಾರದು. ಈಗ ತಾವು ಬಿಜಾಪುರದ ಎಂ.ಎಲ್.ಎ. ಒಬ್ಬರು "ಏ" ಅಂತ ಹೇಳಿ ಕೈತೋರಿಸಿದರು ಅಂತ ಏನು ಹೇಳಿದಿರಿ, ಅದು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ. ಅತ್ತ ಕಡೆಯು ಸಹ ಒಬ್ಬೊಬ್ಬ ಸದಸ್ಯರು ಕೈತೋರಿಸಿದರು....

ಶ್ರೀ ಕೆ. ಹೆಚ್. ರಂಗನಾಥ್.—ಬಿಜಾಪುರದ ಮಾನ್ಯ ಸದಸ್ಯರು ಆ ರೀತಿಯಾಗಿ ಕೈ ತೋರಿಸಿ "ಏ" ಅಂತ ಕೂಗಿದರಲ್ಲಾ, ಹಾಗೆ ಕೂಗಬಹುದೇ? ಅದು ಈ ಮನೆಗೆ ಸರಿಯಾದ ಗೌರವ ತರತಕ್ಕಂಥಾದ್ದಲ್ಲ ಹಾಗೆ ಕೂಗುವುದು ಸರಿಯಲ್ಲ ಆದುದರಿಂದ ಅವರು ಕ್ಷಮಾಪಣೆ ಕೇಳಬೇಕು. ಅವರು ಹಾಗೆ ಕ್ಷಮಾಪಣೆ ಕೇಳಿದರೆ ತಪ್ಪೇನೂ ಆಗುವುದಿಲ್ಲ. ಒಂದೊಂದು ಸಾರಿ ಮಾತನಾಡುವಾಗ ಉದ್ವೇಗ ಬರುತ್ತದೆ, ಇಲ್ಲ ಅಂತ ನಾನು ಹೇಳುವುದಿಲ್ಲ. ಹಾಗೆ ಮಾಡಿದ ಸದಸ್ಯರು ಕ್ಷಮಾಪಣೆ ಕೇಳಿಕೊಳ್ಳಬೇಕಾಗುತ್ತದೆ. ತಪ್ಪು ಮಾಡಿದ್ದನ್ನು ತಪ್ಪು ಅಂತ ಒಪ್ಪಿಕೊಂಡರೆ ಏನೂ ಆಗುವುದಿಲ್ಲ. ಅದೇನೂ ಪ್ರಿಸ್ಟೇಜ್ ಇಷ್ಯೂ ಅಲ್ಲ, ಇಲ್ಲದೇ ಹೋದರೆ ಅದು ಒಂದು ಪ್ರಿಸ್ಟೇಜ್ ಇಷ್ಯೂ ಆಗಿ ತೆಗೆದುಕೊಂಡರೆ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಸದಸ್ಯರು ಮತ್ತೊಬ್ಬ ಸದಸ್ಯರನ್ನು 'ಎ' ಅಂತ ಕೂಗುವುದು ಸರಿಯಲ್ಲ ಆದುದರಿಂದ ಅವರು ಆ ಬಗ್ಗೆ ಕ್ಷಮಾಪಣೆ ಕೇಳಿಕೊಳ್ಳಬೇಕು.

ಒಬ್ಬ ಸದಸ್ಯರು.—ಒಬ್ಬ ಸದಸ್ಯರು ಸ್ಕ್ಯಾಂಡ್ರಲ್ ಅಂತ ಹೇಳಿದ್ದಾರಲ್ಲಾ ಅದು ರೆಕಾರ್ಡ್‌ಗೆ ಹೋಗಿದೆಯೆಲ್ಲಾ ಅದು ಸರಿಯೇ?

ಉಪಾಧ್ಯಕ್ಷರು.—ಅವರು ಆ ರೀತಿ ಹೇಳಿಲ್ಲಾ, ಆದರೆ ಮಾನ್ಯ ಸದಸ್ಯರು ಮಾಡಿದಂಥಾ ವರ್ತನೆ ಏನು ಇದೆ ಅದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂತುಕೊಳ್ಳಿ.

ಶ್ರೀ ಗಜ್ಜಿನಮಠ್ ಚಂದ್ರಶೇಖರ್ ಗುರುಪಾದಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರನ್ನು ಅವಹೇಳನ ಮಾಡಬೇಕು ಅಂತ ಉದ್ದೇಶ ಇಟ್ಟುಕೊಂಡು ಹಾಗೆ ಹೇಳಿದ್ದಲ್ಲ. ನಾನು ಮಾತನಾಡತಕ್ಕಂಥಾ ರೀತಿಯೇ ಹಾಗೆ ಅಲ್ಲದೆ ನಮ್ಮ ಬಿಜಾಪುರದ ಕಡೆ ಯಾರನ್ನಾದರೂ ಕುರಿತು ಮಾತನಾಡಬೇಕಾದರೆ ಏಕವಚನದಲ್ಲೇ 'ಎ' ಅಂತ ಮಾತನಾಡುತ್ತೇವೆ. ನಾನು ಈ ಮನೆಯಲ್ಲಿ 'ಎ' ಅಂದದ್ದು ನಿಜ, ಆದರೆ ಉದ್ದೇಶಪೂರ್ವಕವಾಗಿ ಮಾನ್ಯ ಸದಸ್ಯರನ್ನು ಕುರಿತು ಸಭೆಗೆ ಅಗೌರವ ತರತಕ್ಕಂಥಾ ರೀತಿಯಲ್ಲಿ ಹೇಳಿಲ್ಲ. ಒಂದು ವೇಳೆ ಅವರ ಮನಸ್ಸಿಗೆ ಇದರಿಂದ ನೋವಾಗಿದ್ದರೆ ಕ್ಷಮಿಸಬೇಕು, ನಮ್ಮ ಭಾಗದಲ್ಲಿ ಈ ರೀತಿಯಾದ ಭಾಷೆ ಬಳಸುವುದರಿಂದ, ಆ ದೃಷ್ಟಿ ಇಟ್ಟುಕೊಂಡು ಹೇಳಿದನೆ ವಿನಹ ಬೇರೆ ಇನ್ನಾವ ದೃಷ್ಟಿಯಿಂದ ಆ ಮಾತನ್ನು ಹೇಳಿದ್ದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಉಪಾಧ್ಯಕ್ಷರೇ, ಈ ಬಜೆಟ್‌ನಲ್ಲಿ ನಾನು ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ಮೊದಲನೆಯದಾಗಿ ಹಿಂದುಳಿದ ವರ್ಗದವರ ಮತ್ತು ಹರಿಜನರ ಬಗ್ಗೆ ತೆಗೆದುಕೊಂಡಂಥಾ ಕಾರ್ಯಕ್ರಮಗಳ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಎಲ್ಲಾ ಯೂನಿವರ್ಸಿಟಿಗಳ ಎಂ.ಎ., ಎಂ.ಎಸ್.ಸಿ., ಎಂ.ಕಾಂ., ಎಂ.ಬಿ.ಬಿ.ಎಸ್., ಬಿ.ಎಸ್.ಸಿ. ಮತ್ತು ಬಿ.ವಿ.ಎಸ್.ಸಿ. ಈ 5-6 ಕೋರ್ಸ್‌ಗಳಲ್ಲಿ ಹರಿಜನ ಗಿರಿಜನ ವರ್ಗದವರು ಏನು ಓದುತ್ತಿದ್ದಾರೆ, ಇವರಲ್ಲಿ ಯಾರು ಹೆಚ್ಚು ಅಂಕಗಳನ್ನು ಗಳಿಸುತ್ತಾರೋ ಅವರಿಗೆ ನೇರವಾಗಿ ಸರ್ಕಾರದಲ್ಲಿ ನೌಕರಿಯನ್ನು ಕೊಡತಕ್ಕಂಥಾ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಪ್ರತಿಯೊಂದು ಸಬ್ಜೆಕ್ಟಿನಲ್ಲೂ ಮೂವ

ರಿಗೆ ಆ ರೀತಿ ಕೊಡುತ್ತೇವೆ. ಇವರ ಬಗ್ಗೆ ತಾವು ಒಂದು ಶಬ್ದವನ್ನೂ ಆಡಿಲ್ಲಾ ಮತ್ತು ಇದನ್ನು ತಾವು ಸ್ವಾಗತ ಮಾಡಿಯೂ ಇಲ್ಲ ಇದು ಒಂದು ಹೊಸ ಸ್ಕೀಂ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾವು ಹೋದ ಸಲ ಮಾಡಿದ್ದೇವೆ. ಹೋದ ಸಲದ ಬಡ್ಜೆಟ್ಟನ್ನು ತಾವು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಇದೇನೂ ಹೊಸ ಸ್ಕೀಂ ಏನೂ ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.--ನಿಮ್ಮ ಹೋದಸಲದ ಬಡ್ಜೆಟ್ಟನಲ್ಲಿ ಇದು ಇಲ್ಲ. ನಾನು ನೋಡಿದ್ದೇನೆ. ಅವರಿಗೆ ಡೈರೆಕ್ಟ್ ಆಗಿ ಅಪಾಯಿಂಟ್‌ಮೆಂಟ್ ಕೊಡುವುದು ಹೋದ ಸಲದ ಬಡ್ಜೆಟ್ ಭಾಷಣದಲ್ಲಿ ಇಲ್ಲ ನೀವೇ ಆ ಬಡ್ಜೆಟ್ ಭಾಷಣ ತಯಾರು ಮಾಡಿದ್ದೀರಿ. ಬೇಕಾದರೆ ಹೋದಸಲದ ಬಡ್ಜೆಟ್ಟಿನ ಭಾಷಣದ ಒಂದು ಕಾಪಿಯನ್ನು ತಮಗೆ ಕಳುಹಿಸಿಕೊಡಲೇ ? ನೋಡುತ್ತೀರಾ ? ಇದುವರೆಗೆ ಯಾವ ಹಿಂದಿನ ಸರ್ಕಾರವೂ ಕೂಡ ಈ ರೀತಿ ಮಾಡಿಲ್ಲಾ. ಈ ವೊತ್ತಿನ ದಿವಸ ಯಾವ ವಿಶ್ವವಿದ್ಯಾನಿಲಯದಲ್ಲೇ ಆಗಲಿ ಈ ಹರಿಜನ ಗಿರಿಜನ ಯುವಕರು ಓದಿಕೊಂಡು ಉತ್ತಮವಾದ ಮಾರ್ಕ್ಸ್ ಅನ್ನು ಪಡೆದಿದ್ದರೂ ಕೂಡ ಕೆಲಸ ಇಲ್ಲದೆ ವರ್ಷಗಟ್ಟಲೆ ಕಾಯುತ್ತಿದ್ದಾರೆ. ಅವರಿಗೆ ರಿಸರ್ವೇಷನ್ ಇದರೂ ಕೂಡ ತಕ್ಷಣ ನೌಕರಿ ಸಿಕ್ಕುವುದಿಲ್ಲ. ಅವರಿಗೆ ನೌಕರಿ ಸಿಗಬೇಕಾದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗೆ ಹೋಗಿ ಹೆಸರು ರಿಜಿಸ್ಟರ್ ಮಾಡಿಸಿಕೊಳ್ಳಬೇಕು ಆದಾದ ಮೇಲೆ ಎಲ್ಲಿ ಅರ್ಜಿಗಳನ್ನು ಕರೆಯುತ್ತಾರೋ ಅಲ್ಲಿಗೇ ಅರ್ಜಿಗಳನ್ನು ಹಾಕಬೇಕು ; ಆಮೇಲೆ ಇಂಟರ್‌ವ್ಯೂ ಬಂದಾಗ ಅಲ್ಲಿಗೆ ಹೋಗಬೇಕು, ಅಲ್ಲಿ ಏನಾದರೂ ರಿಟನ್ ಎಕ್ಸಾಮಿನೇಷನ್ ಇದ್ದರೆ ಅದಕ್ಕೆ ಕೂತುಕೊಂಡು ಪಾಸು ಮಾಡಬೇಕು. ಹೀಗೆಲ್ಲಾ ಇದೆ. ಇದರ ಬಗ್ಗೆ ಹಿಂದಿನ ಸರ್ಕಾರ ಒಂದು ಶಬ್ದವನ್ನೂ ಆಡಿಲ್ಲ. ಈಗ ನಾವು ಏನು ಮಾಡಿದ್ದೇವೆ ಎಂದರೆ, ಕೇವಲ ಹಿಂದುಳಿದವರ ವರ್ಗದವರಿಗಾಗಿ ಕಾಮನ್ ಇಂಡಸ್ಟ್ರಿಯಲ್ ಷೆಡ್ ಕಟ್ಟಿಸಿಕೊಡಬೇಕೆಂದು ಇದ್ದೇವೆ. ಈಗ ಡೇನಿಷ್ ಸ್ಕೀಂ ಏನು ಇದೆ, ಅದೂ ಸಹ ಬರುತ್ತಾ ಇದೆ: ಈ ಹಿಂದುಳಿದ ವರ್ಗದವರು ಪ್ರತಿಯೊಂದು ಹಳ್ಳಿಯಲ್ಲಿ ಏನು ಇದ್ದಾರೆ, ಅವರು ಕಮ್ಮಾರರೇ ಆಗಿರಬಹುದು, ಕುಂಬಾರರೇ ಆಗಿರಬಹುದು, ಚಮ್ಮಾರ ಕೆಲಸ ಮಾಡುವವರೇ ಆಗಿರಬಹುದು, ಇನ್ನು ಬೇರೆ ಬೇರೆ ಕೆಲಸ ಮಾಡುವವರೇ ಆಗಿರಬಹುದು, ಅವರುಗಳು ತಮ್ಮ ತಮ್ಮ ಮನೆಗಳಲ್ಲಿ ಕೂತುಕೊಂಡು ಕೆಲಸ ಮಾಡುವುದು ಕಷ್ಟ. ಅವರೇ ಒಂದೊಂದು ಷೆಡ್ ಅನ್ನು ಕಟ್ಟಿಸಿಕೊಂಡು ಅಲ್ಲಿ ಕೆಲಸ ಮಾಡುವ ಶಕ್ತಿ ಇಲ್ಲ, ಅದಕ್ಕಾಗಿ ಇವರಿಗೆ ನಾವು ಕಾಮನ್ ಷೆಡ್‌ಗಳನ್ನು ಕಟ್ಟಿಸಿ ಕೆಲಸವನ್ನು ಕೊಡಬೇಕೆಂದಿದ್ದೇವೆ.

11-30 A. M

ಇನ್ನು ಪ್ರೊಡಕ್ಷನ್ ಎಂಪ್ಲಾಯ್‌ಮೆಂಟ್ ಬಗ್ಗೆ ಕೂಡ ನಾವು ಏನು ಮಾಡಿದ್ದೇವೆಂದು ಹೇಳಿದ್ದೇವೆ. ನಮ್ಮ ಬಡ್ಜೆಟ್ ಭಾಷಣವನ್ನು ಓದಿದ್ದರೆ ಅಥವಾ ನಾನೂ ಹೇಳುವಾಗ ಲಕ್ಷ್ಯ ಕೊಟ್ಟು ಕೇಳಿದ್ದರೆ ಈ ಬಗ್ಗೆ ಯಾರೂ ಕೇಳುತ್ತಾ ಇರಲಿಲ್ಲ. ಮತ್ತೊಂದು ಹೊಸ ಸ್ಕೀಂ ವಿಚಾರದಲ್ಲಿ ಕೆನರಾ ಬ್ಯಾಂಕ್‌ನವರು ಒಪ್ಪಿಕೊಂಡಿದ್ದಾರೆ, ನಾನು ಬ್ಯಾಂಕುಗಳ ಪ್ರತಿನಿಧಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಪ್ರತಿಯೊಂದು ಶಾಖೆಯಲ್ಲಿ 5-10ರವರೆಗೆ ಅಭ್ಯರ್ಥಿಗಳನ್ನು ಸೆಲ್ಫ ಎಂಪ್ಲಾಯಮೆಂಟ್ ಮೂಲಕ ತೆಗೆದುಕೊಳ್ಳುವುದಕ್ಕೆ ಒಂದು ಸ್ಕೀಂನ್ನು ಜಾರಿ ಮಾಡಲಿಕ್ಕೆ ಅವರ ಸಹಾಯವನ್ನು ಕೇಳಿದ್ದೇವೆ. ಅವರು ಒಪ್ಪಿಕೊಂಡಿದ್ದಾರೆ. ಯಾವ ಯಾವ ಬಾಬಿನಲ್ಲಿ ಯಾವ ರೀತಿಯ ಕೆಲಸ ಆಗಬೇಕು, ಎಂಥ ಕೆಲಸಗಳನ್ನು ನಾವು ಇವರಿಗೆ ಕೊಡಬೇಕು ಎನ್ನುವಂಥ ಯೋಜನೆ ಇದೆ. ಸರ್ಕಾರದಲ್ಲಿ ಅನೇಕ ಕಾರ್ಯಕ್ರಮಗಳು ಇವೆ ಕಾರ್ಯಕ್ರಮಗಳಿಗೇನೂ ಕಡಿಮೆ ಇಲ್ಲ. ಈ ಕಾರ್ಯಕ್ರಮಗಳಲ್ಲಿ ನಾವು ಖರ್ಚುಮಾಡತಕ್ಕ ಹಣ, ಯಾವ ಉದ್ದೇಶಕ್ಕಾಗಿ ಮಾಡುತ್ತಿದೇವೆ, ಆ ಉದ್ದೇಶಕ್ಕೆ ಹಣ ಖರ್ಚಾಗುತ್ತದೆಯೇ ಇಲ್ಲವೇ ಎನ್ನುವುದೇ ಪ್ರಶ್ನೆ. ಇವತ್ತಿನವರೆಗೆ ಬಂದಂಥ ಅಭಿಪ್ರಾಯದಲ್ಲಿ ಒಂದುಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಸಂಬಂಧಪಟ್ಟ ಸ್ಕೀಂನಿಂದ ಜನರಿಗೆ ಮುಟ್ಟತಕ್ಕದ್ದು ಶೇಕಡ 10ಪರ್ಸೆಂಟಿಗಿಂತ ಕಡಿಮೆ. ಅದಕ್ಕಾಗಿ ನಾನು ಈ ಲ್ಯಾಂಡ್ ಆರ್ಮಿಯನ್ನು ಪುನರ್ ಸಂಘಟನೆ ಮಾಡಿದಂಥ ಉದ್ದೇಶ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಯಾರು ಯಾರಿಗೆ ಕೆಲಸ ಇಲ್ಲವೋ ಅವರಿಗೆ ಕೆಲಸ ಕೊಡತಕ್ಕದ್ದು ಮೊದಲನೆಯದು ಎರಡನೆಯದು, ಅರಣ್ಯವನ್ನು ಬೆಳೆಸುವುದು ರಸ್ತೆಯ ಕೆಲಸಗಳನ್ನು ಮಾಡಿಸುವುದು, ಸಣ್ಣ ಪುಟ್ಟ ಕಾಲುವೆಗಳನ್ನು ತೋಡಿಸುವುದು, ಮತ್ತು ಬೇರೆ ಬೇರೆ ಲೋಕೋಪಯೋಗಿ ಇಲಾಖೆಯ ಕೆಲಸಗಳನ್ನು ಮಾಡುವುದು. ಈ ಒಂದು ಅನುಭವದಿಂದ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಈ ಕಂಟ್ರ್ಯಾಕ್ಟರ್ಸ್ ಮತ್ತು ರಾಜಕೀಯ ಪುಢಾರಿಗಳು, ಯಾರಿದ್ದಾರೆ ಇವರನ್ನು ತೆಗೆದುಹಾಕುವುದಕ್ಕೆ ನಾವು ಪ್ರಯತ್ನ ಪಟ್ಟಿದ್ದೇವೆ. ನನ್ನ ದೃಷ್ಟಿಯಲ್ಲಿ ಪ್ರತಿಯೊಂದು ಕೆಲಸಕ್ಕೆ ಖರ್ಚು ಮಾಡುವ ಹಣ ಅಷ್ಟೇ ಮಹತ್ವವಾದದ್ದು ಮತ್ತು ಬೆಲೆಯುಳ್ಳದ್ದು, ಆದ್ದರಿಂದ ನೂರಕ್ಕೆ ನೂರರಷ್ಟು ಯಾರಿಗಾಗಿ ಖರ್ಚಾಗುತ್ತದೆಯೋ ಅದು ಅವರಿಗೆ ತಲುಪಬೇಕು,

ಅದಕ್ಕಾಗಿಯೇ ನಾವು 2-3 ಹೊಸ ಸ್ಕೀಂಗಳನ್ನು ಮಾಡಿದ್ದೇವೆ. ಅದನ್ನು ಮಾನ್ಯ ಸದಸ್ಯರುಗಳು ಅಪ್ರಿಷಿಯೇಟ್ ಮಾಡಬೇಕಾಗಿತ್ತು.

ಇನ್ನು ಈ ಬಾಂಡೆಡ್ ಲೇಬರ್ ವಿಚಾರ, ಇದು ನಮ್ಮ ರಾಜ್ಯದಲ್ಲಿ ನೂರಾರು ವರ್ಷಗಳಿಂದ ಬೆಳೆದು ಬಂದಿದೆ ಇದುವರೆಗೂ, ನಾವು ನೋಡುತ್ತಿದ್ದೇವೆ, ಇದರ ಬಗ್ಗೆ ಒಂದು ತುಲನಾತ್ಮಕವಾದ, ಕಾಂಕ್ರೀಟ್ ಆದ ಹಾಗೂ ಟೈಂಬಾಂಡ್ ಕಾರ್ಯಕ್ರಮವನ್ನು ಹಿಂದಿನ ಸರ್ಕಾರದವರು ಹಾಕಿಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಸಭೆಗೆ ಒಂದು ವಚನವನ್ನು ಕೊಡುತ್ತಿದ್ದೇನೆ ಏನೆಂದರೆ, ಬಾಂಡೆಡ್ ಲೇಬರ್ ಎಂದು ಹೇಳತಕ್ಕ ಒಬ್ಬ ವ್ಯಕ್ತಿಯೂ ಸಹ ಎರಡು ವರ್ಷದ ನಂತರ ಈ ರಾಜ್ಯದಲ್ಲಿ ಇರುವುದಿಲ್ಲ. ಈ ವಚನವನ್ನು ನಾನು ನಿಮಗೆ ಕೊಡುತ್ತಿದ್ದೇನೆ. ಅವರು ಎಲ್ಲಿಯೇ ಇರಲಿ, ಅವರನ್ನು ಪುನರ್ವಸತಿ ಮಾಡುವ ಬಗ್ಗೆಯಾಗಲೀ, ಅವರಿಗೆ ಕೆಲಸ ಕೊಡುವ ಬಗ್ಗೆಯಾಗಲೀ ಸರ್ಕಾರ ಆಸ್ಥೆ ವಹಿಸುತ್ತದೆ. ಬಾಂಡೆಡ್ ಲೇಬರ್ ಎಂದು ಹೇಳುವುದು ಸಮಾಜಕ್ಕೆ ಮತ್ತೊಂದು ಕಳಂಕ. ಈ ಒಂದು ಗುಲಾಮಗಿರಿಯ ಪದ್ಧತಿಯಿಂದ ಕುಟುಂಬದಿಂದ ಕುಟುಂಬಕ್ಕೆ, ಪೀಳಿಗೆಯಿಂದ ಪೀಳಿಗೆಗೆ, ದಾಸಾನು ದಾಸರಾಗಿ ಏನು ಕೆಲಸ ಮಾಡುತ್ತಿದ್ದಾರೆ. ಈ ಪದ್ಧತಿ ಹೋಗಬೇಕು. ಯಾವ ವ್ಯಕ್ತಿ ಆಗಲಿ ತಾನು ಯಾವ ಕೆಲಸ ಮಾಡಬೇಕು ಎನ್ನುವಂಥ ಅಧಿಕಾರ ಹಕ್ಕನ್ನು ಹೊಂದಿದ್ದಾನೆ, ಆ ರೀತಿಯಾಗಿ ಅವನು ಆರಿಸಿಕೊಂಡಾಗ ಆ ಕೆಲಸವನ್ನು ಮಾಡುವುದಕ್ಕೆ ಸೂಕ್ತ ಅವಕಾಶವನ್ನು ನಾವು ಒದಗಿಸಿಕೊಡಬೇಕು ಇದು ನಮ್ಮ ಉದ್ದೇಶ.

ಇನ್ನು ಹೌಸಿಂಗ್ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಬಹಳ ಟೀಕೆ ಮಾಡಿದ್ದಾರೆ. ಈ ಸಭೆಯಲ್ಲಿ ಹಿಂದಿನ ಸರ್ಕಾರದಲ್ಲಿ ಹಣಕಾಸಿನ ಮಂತ್ರಿಗಳಾಗಿದ್ದ ವೀರಪ್ಪಮೊಯಿಲಿಯವರೂ ಇದ್ದಾರೆ. ಈಗ ನಾವು ಈ ಯೋಜನೆಗೆ ಕೇವಲ ಹನ್ನೊಂದೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೇವೆ ನಿಜ. ಇಲ್ಲಿ ನಾವು ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಹಿಂದಿನ ಸರ್ಕಾರದವರು 1981-82ನೇ ಇಸವಿಯಲ್ಲಿ ಒಂದು ಲಕ್ಷ ಮನೆಗಳನ್ನು ರಾಜ್ಯದಲ್ಲಿ ಕಟ್ಟಬೇಕು ಎಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಇದರಲ್ಲಿ 23 ಸಾವಿರ ಮನೆಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ, ದುಡ್ಡು ಕೊಟ್ಟಿದ್ದು ಎಷ್ಟಕ್ಕೆ ? ಕೇವಲ 23 ಸಾವಿರ ಮನೆಗಳಿಗೆ ದುಡ್ಡನ್ನು ಕೊಟ್ಟಿದ್ದಾರೆ. ಬಾಕಿ 77 ಸಾವಿರ ಮನೆಗಳಿಗೆ ದುಡ್ಡನ್ನು ರಿಲೀಸ್ ಮಾಡಿದ್ದು ಯಾವಾಗ ಎಂದರೆ 82-83ರಲ್ಲಿ. ಇದು ಚುನಾವಣೆಯ ವರ್ಷವಾದ್ದರಿಂದ, ಹೊಸ ಮನೆಗಳನ್ನು ಕಟ್ಟಿಸಬೇಕು ಎಂದು ಕಾರ್ಯಕ್ರಮ ಹಾಕಿಕೊಂಡರು. ಇದರ ಬಗ್ಗೆ ಹಿಂದಿನ ಸರ್ಕಾರದವರು ಒಂದು ಕಾಸು ಕೂಡ ಕೊಡಲಿಲ್ಲ ಒಂದು ಲಕ್ಷ ಚಿಲ್ಲರೆ ಮನೆಗಳನ್ನು ಕಟ್ಟಿಸುತ್ತೇವೆಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಸ್ಯಾಂಕ್ಷನ್ ಮಾಡಿ, ಅದಕ್ಕೆ ಇವರು ಹಣ ಕೊಡಲಿಲ್ಲ. ಆದ್ದರಿಂದ ಹಿಂದೆ ಹಾಕಿಕೊಂಡ ಕಾರ್ಯಕ್ರಮ ಏದು ಅಪೂರ್ಣಗೊಂಡಿತು ಅದನ್ನು ಪೂರ್ಣಮಾಡಲಿಕ್ಕೆ...

ಶ್ರೀ ಧರ್ಮಸಿಂಗ್.—ಮಾನ್ಯ ಮುಖ್ಯಮಂತ್ರಿಗಳು ನಾವು ಈ ಕಾರ್ಯಕ್ರಮಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೇವೆಂದು ಸರಿಯಾಗಿ ಲೆಕ್ಕ ಹಾಕಿಕೊಳ್ಳಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ನಂತರ ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ರಾಮಕೃಷ್ಣ ಹೆಗಡೆ,—ಆಮೇಲೆ ತಾವು ಹೇಳಬಹುದು.

ಶ್ರೀ ಧರ್ಮಸಿಂಗ್ --ನಾವು ಈ ಕೆಲಸಕ್ಕೆ 13 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.--ನಾನು ಇಲ್ಲಿ ಯಾವುದು ಕಟ್ಟು ಕಥೆಯನ್ನು ಹೇಳುತ್ತಿಲ್ಲ. ನಾನು ಹೇಳುವ ಕಥೆಯನ್ನು ತಾವು ಪೂರಾ ಕೇಳಬೇಕು. ಇದು ಖಾಸಗೀ ಸಭೆಯಲ್ಲ. ಸರ್ಕಾರದಲ್ಲಿ ಎಲ್ಲಾ ಕಾಗದ ಪತ್ರಗಳು ಇವೆ, ಇದು ಪ್ರತಿಯೊಬ್ಬ ಸದಸ್ಯರಿಗೂ ಸಿಕ್ಕುತ್ತದೆ. ನಾನು ಯಾರಿಗೂ ಹಾರಿಕೆ ಉತ್ತರ ಕೊಡುವುದು ಬೇಕಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ --ತಾವು ಹಾರಿಕೆ ಪರಿಹಾರ ಕೊಡುತ್ತೀರೆಂದು ನಮ್ಮ ಭಾವನೆ.

ಶ್ರೀ ರಾಮಕೃಷ್ಣ ಹೆಗಡೆ.--ಹಾರಿಕೆಯ ಉತ್ತರ ನಾನು ಕೊಡುತ್ತಿದ್ದೇನೆಯೇ ? ಹಾರಿಕೆ ಪರಿಹಾರ ಕೊಟ್ಟವರು ನೀವು ನಾನು ಹೇಳುತ್ತಿದ್ದೇನೆ, 1981-82ರಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿ ನೀವು ಹಣ ಕೊಟ್ಟಿದ್ದು ಕೇವಲ 23 ಸಾವಿರ ಮನೆಗಳಿಗೆ ಮಾತ್ರ. ಇದರಲ್ಲಿ ಬಾಕಿಯದ್ದು

(ಗೊಂದಲ)

ಶ್ರೀ ಧರ್ಮಸಿಂಗ್.--ಮಾನ್ಯ ಮುಖ್ಯಮಂತ್ರಿಗಳು ಸುಳ್ಳು ಹೇಳುತ್ತಿದ್ದಾರೆ. ಮತ್ತು ಸಭೆಯನ್ನು ಮಿಸಲೀಡ್ ಮಾಡುತ್ತಿದ್ದಾರೆ.

ಶ್ರೀ ಎಂ ಸೂರ್ಯನಾರಾಯಣರಾವ್.--ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮಿಸ್‌ಲೀಡ್ ಮಾಡಿದ್ದರೆ ನಂತರ ಅದನ್ನು ಪ್ರಿವಿಲೇಜ್ ರೂಪದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬಹುದಲ್ಲವೆ ?

ಉಪಾಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಮಾನ್ಯ ಸದಸ್ಯರುಗಳು ಮಧ್ಯ ಮಧ್ಯ ಕ್ಲಾರಿಫಿಕೇಷನ್ ಕೇಳುವುದು ಬೇಡ ಅವರ ಉತ್ತರ ಮುಗಿದ ಮೇಲೆ ಮಾನ್ಯ ಸದಸ್ಯರುಗಳು ಯಾವ ಕ್ಲಾರಿಫಿಕೇಷನ್ ಬೇಕಾದರೂ ಕೇಳಬಹುದು. ಪದೇ ಪದೇ ಎದ್ದು ಮಾತನಾಡುವುದು ಎಂದರೆ ಸಭೆಗೆ ಅಗೌರವ ತರತಕ್ಕ ರೀತಿಯಲ್ಲಿ ಸದಸ್ಯರು ಮಾತನಾಡಿದಂತಾಗುತ್ತದೆ. ನಂತರ ಕ್ಲಾರಿಫಿಕೇಶನ್ ಕೇಳಲು ಅವಕಾಶವಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸಭೆಯನ್ನು ತಪ್ಪುದಾರಿಗೆ ಎಳೆಯುವುದೇ ಆಗಿದ್ದರೆ, ಕಂಟೆಂಪ್ಟ್ ಆಫ್ ಹೌಸ್ ನನ್ನ ಮೇಲೆ ತರಬಹುದಲ್ಲವೆ ? ನಾನು ಇಲ್ಲಿ ಸುಳ್ಳು ಅಂಕಿಸಂಖೆಗಳನ್ನು ಹೇಳಲಿಕ್ಕೆ ಬಯಸುವುದಿಲ್ಲ 1981-82ರಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿ ಹಿಂದಿನ ಸರ್ಕಾರದವರು ಹಣ ಕೊಟ್ಟಿದ್ದು 23ಸಾವಿರ ಮನೆಗಳಿಗೆ ಮಾತ್ರ. ಬಾಕಿ ಮನೆಗಳಿಗೆ 1982-83ರಲ್ಲಿ ದುಡ್ಡನ್ನು ರಿಲೀಸ್ ಮಾಡಿದ್ದಾರೆ. ಅದು ಚುನಾವಣೆಯ ವರ್ಷವಾದ್ದರಿಂದ ಫೈನಾನ್ಸಿಯಲ್ ಏಜೆನ್ಸಿಗಳಿಂದ ಮತ್ತಿತರ ಕಡೆಯಿಂದ 13 ಕೋಟಿ ರೂಪಾಯಿಗಳನ್ನು ಹಣ ಒದಗಿಸುತ್ತೇವೆಂದು ಹೇಳಿದ್ದಾರೆ ಇದನ್ನು ಬಹಿರಂಗವಾಗಿ ಚುನಾವಣೆಯಲ್ಲಿ ಭಾಷಣ ಮಾಡಿ ಹೇಳಿದ್ದರು. ಹೋದ ಸಲ 1 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಮತ್ತು ಈ ವರ್ಷ 1 ಲಕ್ಷ 2 ಸಾವಿರ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದರು. ಆದರೆ ಈ ವರ್ಷ ಅವರು ಹೇಳಿರತಕ್ಕಂಥಾದಕ್ಕೆ ಒಂದು ಕಾಸೂ ಕೂಡ ಕೊಟ್ಟಿಲ್ಲ. ಅದಕ್ಕಾಗಿ ನಾನು ಹೇಳಿದೆ, ನಾವು 11½ ಕೋಟಿ ರೂಪಾಯಿಗಳನ್ನು ಬರುವ ವರ್ಷಕ್ಕೆ ಏನು ತೆಗೆದು ಇಟ್ಟಿದ್ದೇವೆ. ಅದರಲ್ಲಿ ಹೊಸ ಮನೆಗಳನ್ನು ಕಟ್ಟತಕ್ಕಂಥ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ಸ್ಪಷ್ಟಪಡಿಸಬೇಕಾಗಿದೆ. ಏಕೆಂದರೆ ಹಿಂದೆ ಅವರು ಅನೌನ್ಸ್ ಮಾಡಿರತಕ್ಕಂಥ ಮನೆಗಳಿಗೆ ದುಡ್ಡು ಕೊಟ್ಟಿಲ್ಲ. ಅದಕ್ಕೆ ನಾವು ಈಗ ದುಡ್ಡು ಕೊಡಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಈ 3 ತಿಂಗಳಲ್ಲಿ ನೀವು ಎಷ್ಟು ಮನೆಗಳನ್ನು ಕಟ್ಟಿದ್ದೀರಿ ಎಂಬುದನ್ನು ಹೇಳಿ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ —ಎಲ್ಲಕ್ಕೂ ಕುಳಿತಲ್ಲೇ ಕೈ ಎತ್ತುತ್ತೀರಿ, ಏನು ಮಾಡಿದ್ದೀರಿ ಹೇಳಿ.

ಶ್ರೀ ವೈ. ಕೆ. ರಾಮಯ್ಯ —ಕೈ ಎತ್ತುವ ಬುದ್ಧಿ ನಮಗೆ ಇಲ್ಲ. ನಮಗೆ ವೈಯಕ್ತಿಕವಾದ ವ್ಯಕ್ತಿತ್ವ ಇದೆ. ಮಾನ್ಯ ಅಧ್ಯಕ್ಷರೇ, ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ. ಅವರ್ಮಾವರಿಗೆ ಇವರು ಕೈ ಎತ್ತತಕ್ಕಂಥ ಕೆಲಸವನ್ನು ನಾವು ಮಾಡುವುದಿಲ್ಲ. ಅವರಿಗೆ ಕೈ ಎತ್ತುವ ಕೆಲಸ ಇರುವುದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮತ್ತೊಂದು ಟೀಕೆ ಈ ಕ್ಯಾಪಿಟೇಷನ್ ಫೀ ವಿಚಾರದಲ್ಲಿ ಇದೆ. ಈ ಖಾಸಗೀ ವೈದ್ಯಕೀಯ ಕಾಲೇಜುಗಳಲ್ಲಿ ಏನು ಈ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳತಕ್ಕಂಥ ವಿಚಾರದಲ್ಲಿ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ವಿಚಾರದಲ್ಲಿ ಅವರು ಹೇಳಿದ್ದಾರೆ. ನಿಜ, ನಾವು ಈ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಈ ಕ್ಯಾಪೀಯಟೇಷನ್‌ನ್ನು ರದ್ದು ಮಾಡುತ್ತೇವೆಂದು ಹೇಳಿದೇವೆ. ಮತ್ತು ಈಗಲೂ ನಾನು ಹೇಳುತ್ತಿದ್ದೇನೆ, ಸರ್ಕಾರದ ನೀತಿ ಇದನ್ನು ರದ್ದು ಮಾಡಬೇಕೆಂಬುದಾಗಿ ಇದೆ, ಈ ನೀತಿಯಲ್ಲಿ ಏನೂ ವ್ಯತ್ಯಾಸ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹಿಂದಿನ ಮಂತ್ರಿಮಂಡಲದ ಸದಸ್ಯರಾಗಿದ್ದಾಗ ಇದೇ ಒಂದು ನೀತಿಯನ್ನು ಬಹಿರಂಗಪಡಿಸಿದರು. ಅವರು ಈ ಒಂದು ನೀತಿಯನ್ನು ಬಹಿರಂಗಪಡಿಸಿದಮೇಲೂ ಕೂಡ ಈ ವಿಭಿನ್ನ ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಏನು ಮಂಜೂರಾದ ಸಂಖ್ಯೆ ಇದೆ ಅದಕ್ಕಿಂತ 2 ರಿಂದ 35 ರವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳನ್ನು ಕೊಟ್ಟಿದ್ದಾರೆ, ಅಂದರೆ ಸರ್ಕಾರದ ನೀತಿಯನ್ನು ಇವರು ಘೋಷಣೆ ಮಾಡಿ, ಇನ್ನು ಮುಂದೆ 5 ವರ್ಷಗಳಲ್ಲಿ ಹಂತಹಂತವಾಗಿ ಈ ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಏನು ಕ್ಯಾಪಿಟೇಷನ್ ಫೀ ತೆಗೆದುಕೊಳ್ಳತಕ್ಕಂಥಾದ್ದು ಇದೆ ಅದನ್ನು ನಾವು ನಿಲ್ಲಿಸುತ್ತೇವೆ ಎಂದು ಹೇಳಿದಮೇಲೆ ಕೂಡ ಸೀಟ್‌ಗಳನ್ನು ಹೆಚ್ಚಿಸಿದ್ದು ನೋಡಿದರೆ ಇವರ ಕಾರ್ಯಗಳನ್ನು ನೋಡಿದಾಗ ನನಗೆ ಇನ್ನೂ ಇವರ ನೀತಿ ಅರ್ಥವಾಗಿಲ್ಲ. 1982-83 ರ ಅಕಾಡೆಮಿಕ್ ವರ್ಷದಲ್ಲಿ ಬೇರೆ ಬೇರೆ ಮೆಡಿಕಲ್ ಕಾಲೇಜುಗಳಲ್ಲಿ ಅಪ್ರೂವ್ಡ್ ಸ್ಟ್ರೆಂತ್ ಏನಿದೆ ಅದಕ್ಕಿಂತ 2ರಿಂದ 35 ರವರೆಗೆ ಸೀಟುಗಳನ್ನು ಹೆಚ್ಚು ಕೊಟ್ಟಿದ್ದಾರೆ ಮೊದಲು ಎಷ್ಟು ಸೀಟು ಕೊಡಬೇಕು ಎಂದು ನಿರ್ಧಾರವಾಗಿತ್ತೋ ಅದಕ್ಕಿಂತ ಸೀಟುಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕಾಗಿತ್ತೇ ಹೊರತು ಇವರು ಅದನ್ನು ಏತಕ್ಕಾಗಿ ಹೆಚ್ಚು ಮಾಡಿದರೋ ಗೊತ್ತಿಲ್ಲ. ಯಾವ ಕಾರಣದಿಂದ ಸೀಟುಗಳ ಸಂಖ್ಯೆಯನ್ನು ಹೆಚ್ಚು ಮಾಡಿದರೋ ಗೊತ್ತಿಲ್ಲ. ಮಾನ್ಯ ಬಂಗಾರಪ್ಪನವರು ಮಾತನಾಡತಕ್ಕಂಥ ಕಾಲದಲ್ಲಿ ನಾವು ಇದರಲ್ಲಿ ಶಾಮೀಲು ಆಗಿದ್ದೇವೆಂದು ಹೇಳಿದರು. ಈ ಸರ್ಕಾರದಲ್ಲಿ ಯಾರಾದರೂ ಇದರಲ್ಲಿ

ಶಾಮೀಲು ಆಗಿದ್ದರೆ ಎಂಬುದು ಅವರಿಗೆ ಹೇಗೆ ಕಂಡು ಬಂತೋ ದೇವರಿಗೇ ಗೊತ್ತು, ಇವತ್ತು ನಾವು ಈ ಖಾಸಗೀ ಮೆಡಿಕಲ್ ಕಾಲೇಜುಗಳವರ ಜೊತೆಯಲ್ಲಿ ಶಾಮೀಲು ಆಗಿದ್ದೇವೆ ಎಂದು ಅವರು ಹೇಳಿದರು, ನಾಳೆ ಮತ್ತೊಬ್ಬರ ಜೊತೆಯಲ್ಲಿ ಶಾಮೀಲು ಆಗಿದ್ದೇವೆಂದು ಅವರು ಹೇಳುತ್ತಾರೆ. ನಾವು ಇನ್ನೂ ಯಾರ್ಯಾರ ಜೊತೆಯಲ್ಲಿ ಶಾಮೀಲು ಆಗಿದ್ದೇವೆ ಎಂಬುದನ್ನು ಅವರು ಈಗಲೇ ಹೇಳಲಿ.

ಶ್ರೀ ಎಸ್. ಬಂಗಾರಪ್ಪ.—ಆ ಕಾಲ ಬಂದಾಗ ಹೇಳೋಣ.

ಶ್ರೀ ರಾಮಕೃಷ್ಣ ಹೆಗಡೆ.—ಆ ಕಾಲ ನಿಮಗೆ ಬಹಳ ಬೇಗ ಬರುವುದು ಎಂದು ನಮಗೆ ಗೊತ್ತುಂಟು ಏಕೆಂದರೆ ....

ಶ್ರೀ ಎಸ್. ಬಂಗಾರಪ್ಪ.—ಯಾವ ವಿಚಾರ ಎಂಬುದನ್ನು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ನಾನು ಹೇಳುತ್ತೇನೆ, ಮಾನ್ಯ ಅಧ್ಯಕ್ಷರೇ, ಇಂದು ಒಟ್ಟು ಇರತಕ್ಕಂಥ 43 ಇಂಜಿನಿಯರಿಂಗ್ ಕಾಲೇಜುಗಳಲ್ಲಿ 29 ಪ್ರೈವೇಟ್ ಇಂಜಿನಿಯರಿಂಗ್ ಕಾಲೇಜುಗಳು ಇವೆ. ಇವತ್ತು 8 ಮೆಡಿಕಲ್ ಕಾಲೇಜುಗಳು ಇವೆ. ಇವತ್ತು ಅದನ್ನು ರಾಷ್ಟ್ರೀಕರಣ ಮಾಡಬೇಕೆಂಬ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಒಂದು ಮನೆತನದ್ದೇ ಒಂದು ಮೆಡಿಕಲ್ ಕಾಲೇಜು ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದೂ ನನಗೆ ಗೊತ್ತುಂಟು. ಇದೊಂದು ಲಾಭದಾಯಕವಾದ ವ್ಯವಹಾರ ಅಥವಾ ಲಾಭದಾಯಕವಾದ ವ್ಯಾಪಾರ ಎಂದು ಹೇಳಿದರೂ ತಪ್ಪಿಲ್ಲ. ಆದರೆ ಇದು ಹೇಗೋ ನಡೆದುಕೊಂಡು ಬಂದಿದೆ. ಇದನ್ನು ನಿಲ್ಲಿಸುವ ಬಗೆ ಹೇಗೆ ? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ಇವನ್ನೆಲ್ಲಾ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು ಎಂದರೆ ಸುಮಾರು 100 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಖರ್ಚು ಬರುತ್ತವೆ. ಈ ಬಗ್ಗೆ ನಾನು ಒಂದು ಅಂದಾಜನ್ನು ಹೇಳುತ್ತಿದ್ದೇನೆ ಅಷ್ಟೆ. ಇದನ್ನು ವರ್ಕ್ಔಟ್ ಮಾಡಿಲ್ಲ. ಇದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡೋಣ ಎಂದರೂ ಕೂಡ ಅಲ್ಲಿ 2ನೇ ವರ್ಷದಲ್ಲಿ, 3ನೇ ವರ್ಷದಲ್ಲಿ ಹಾಗೂ 4ನೇ ವರ್ಷದಲ್ಲಿ ಓದತಕ್ಕಂಥ ವಿದ್ಯಾರ್ಥಿಗಳು ಇದ್ದಾರೆ. ಅವರನ್ನು ನಾವು ಎಲ್ಲಿಗೆ ಕಳಿಸಬೇಕು ? ಒಂದು ವಿಚಾರವನ್ನು ನಾನು ಹೇಳುತ್ತೇನೆ-ಈ ಖಾಸಗೀ ಮೆಡಿಕಲ್ ಕಾಲೇಜುಗಳನ್ನು ನಡೆಸತಕ್ಕಂಥವರ ಮೇಲೆ ಈ ಸರ್ಕಾರಕ್ಕೆ ವ್ಯಾಮೋಹವಿಲ್ಲ. ಇವನ್ನು ನಿಲ್ಲಿಸತಕ್ಕಂಥ ವಿಚಾರದಲ್ಲಿ ನಾವು ಸ್ವಲ್ಪ ಹಂತಹಂತವಾಗಿ ಹೋಗಬೇಕಾಗಿದೆ. ಕಾರಣವಿಷ್ಟೇ ಅಲ್ಲಿ ಓದತಕ್ಕಂಥ ವಿದ್ಯಾರ್ಥಿಗಳನ್ನೂ ನಾವು ನೋಡಬೇಕು ಮತ್ತು ಟೋಟಲ್ ಕಮಿಟ್‌ಮೆಂಟ್ ಎಷ್ಟು ಬರುತ್ತದೆ ಎಂಬುದನ್ನು ಸಹ ನಾವು ನೋಡಬೇಕು. ಒಂದು ಮೆಡಿಕಲ್ ಕಾಲೇಜಿಗೆ ಅದು ಸರಿಯಾಗಿ ನಡೆಯುವುದಾದರೆ 700 ಬೆಡ್ ಇರುವ ಆಸ್ಪತ್ರೆ ಬೇಕು. ಹೀಗೆ 700 ಬೆಡ್ ಇರುವ ಆಸ್ಪತ್ರೆಯನ್ನು ಮೈನ್‌ಟೈನ್ ಮಾಡುವುದಕ್ಕೆ ಸುಮಾರ 80 ಲಕ್ಷ ರೂಪಾಯಿಗಳು ವರ್ಷಕ್ಕೆ ಬೇಕಾಗುತ್ತದೆ. ಒಂದೊಂದು ಆಸ್ಪತ್ರೆಯನ್ನು ಮೈನ್‌ಟೈನ್ ಮಾಡುವುದಕ್ಕೆ 75ರಿಂದ 80 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಈ ಸರ್ಕಾರ ಮಾಡಿದ್ದೇನೂ ಅಲ್ಲ, ಹಿಂದಿನ ಸರ್ಕಾರ ಮಾಡಿದ್ದು ಇದೆ. ಹಿಂದಿನಸರ್ಕಾರ ಯಾವ ಆಧಾರದಮೇಲೆ ಅನುಮತಿ ಕೊಟ್ಟಿತ್ತೋ ಗೊತ್ತಿಲ್ಲ. ಅವಶ್ಯಕತೆ ಆಧಾರದಮೇಲೋ ಅಥವಾ ರಾಜಕೀಯ ಒತ್ತಡದ ಆಧಾರದಮೇಲೋ ಅಥವಾ ಆರ್ಥಿಕ ಆಕರ್ಷಣೆಯ ಆಧಾರದಮೇಲೋ-ಅದು ನನಗೆ ಗೊತ್ತಿಲ್ಲ. ಅಂತೂ ಅವರು ಕೊಟ್ಟಿದ್ದಾರೆ. ಕಳೆದ 2-3 ವರ್ಷಗಳಲ್ಲಿ 3-4 ಕಾಲೇಜುಗಳು ಅಸ್ತಿತ್ವಕ್ಕೆ ಬಂದಿವೆ. ಹೀಗೆ ಅಸ್ತಿತ್ವಕ್ಕೆ ಬಂದಿರುವುದನ್ನು ನಾವು ಸಂಪೂರ್ಣವಾಗಿ ಇವತ್ತು ತೆಗೆದುಹಾಕುವುದಕ್ಕೆ ಸಾಧ್ಯವಾಗಲಾರದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ತಾವು ಯಾವ ಆಕರ್ಷಣೆಯ ಮೇಲೆ ಈ ಕ್ಯಾಪಿಟೇಷನ್ ಫೀಯನ್ನು ಮುಂದುವರಿಸುತ್ತಿದ್ದೀರಿ ? ಆರ್ಥಿಕ ಆಕರ್ಷಣೆಯ ಮೇಲೋ ಅಥವಾ ರಾಜಕೀಯ ಆಕರ್ಷಣೆಯ ಮೇಲೋ ? ಏನು ಎಂಬುದನ್ನು ತಾವು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಏನು ಮಾತನಾಡುತ್ತಿದ್ದೀರಿ ? ಇವತ್ತು ನಾವು ಅವನ್ನೆಲ್ಲಾ ನಿಲ್ಲಿಸುವುದಕ್ಕೆ ತಯಾರು ಇದ್ದೇವೆ. ಆದರೆ ಆ ವಿದ್ಯಾರ್ಥಿಗಳನ್ನು ಏನು ಮಾಡಬೇಕು ನಾವು ? ನೀವು ಮಾಡಿದಂತಹ ಪಾಪಕ್ಕೆ ನಾವು ಎಷ್ಟು ಪರಿಹಾರ ಕೊಡಬೇಕು ? ನೀವು ಮಾಡಿದ ಪಾಪಕ್ಕೆ ಆ ವಿದ್ಯಾರ್ಥಿಗಳನ್ನು ಗುರಿ ಮಾಡುತ್ತಿದ್ದೀರಿ, ಈ ಸಮಾಜವನ್ನು ಗುರಿ ಮಾಡುತ್ತಿದ್ದೀರಿ, ಶಿಕ್ಷಣ ಸಂಸ್ಥೆಗಳನ್ನು ಗುರಿ ಮಾಡುತ್ತಿದ್ದೀರಿ, ಇದಕ್ಕೆಲ್ಲಾ ಈ ಸರ್ಕಾರವನ್ನು ನೀವು ಗುರಿ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಆ ಪಾಪವನ್ನು ನಾವು ತೊಳೆಯುತ್ತೇವೆ ಎಂದು ಜನತೆಯ ಮುಂದೆ ಭಾಷೆ ಕೊಟ್ಟು ಬಂದಿರಲ್ಲ ಅದಕ್ಕೆ ಏನು ಉತ್ತರ ಕೊಡುತ್ತೀರಿ ಈಗ ? ಅದಕ್ಕೆ ಮೊದಲು ಉತ್ತರ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕಾಗಿ ನಾನು ಹೇಳುತ್ತಿದ್ದೇನೆ-ಇನ್ನು ಮುಂದೆ ಎಂದೆಂದಿಗೂ ಕೂಡ ಆ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಿಲ್ಲ, ಗೊತ್ತಾಯಿತೇ.

ಶ್ರೀ ಎನ್. ಹುಚ್ಚಮಾಸ್ತಿಗೌಡ.---ಒಂದು ವಿಚಾರ ಕೇಳಬೇಕು. ಈ ಖಾಸಗೀ ಮೆಡಿಕಲ್ ಕಾಲೇಜುಗಳವರಿಂದ ಮತ್ತು ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳವರಿಂದ ಈ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳತಕ್ಕಂಥಾದ್ದನ್ನು ವಜಾ ಮಾಡಿಸುತ್ತೇವೆ ಎಂದು ಒಂದು ಯೋಜನೆಯನ್ನು ತಯಾರು ಮಾಡಿದರಲ್ಲ, ಆ ಸಂದರ್ಭದಲ್ಲಿ ಚುನಾವಣೆಗೋಸ್ಕರ ಈ ಸಂಸ್ಥೆಗಳಿಂದ ಹಿಂದಿನಸರ್ಕಾರದವರು ದುಡ್ಡು ತೆಗೆದುಕೊಂಡಿದ್ದಾರೆ ಎನ್ನುವ ದೂರು ತಮಗೆ ಏನಾದರೂ ಬಂದಿದೆಯೇ ಸ್ವಾಮಿ ? ಸುಮಾರು 2 ಕೋಟಿ ರೂಪಾಯಿಗಳನ್ನು ಆ ಖಾಸಗೀ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳವರಿಂದ ತೆಗೆದುಕೊಂಡಿದ್ದಾರೆಂದು ನಮಗೆ ದೂರು ಬಂದಿದೆ. ಈ ವಿಷಯದಲ್ಲಿ ತಮಗೆ ಏನಾದರೂ ದೂರು ಬಂದಿದೆಯೇ ?

ಶ್ರೀ ಧರ್ಮಸಿಂಗ್.---ಮಾನ್ಯ ಅಧ್ಯಕ್ಷರೇ, ನಾವು ಏನಾದರೂ ಕೇಳಿದರೆ ಇಂಟರ್‌ಪೆಷನ್ ಬೇಡ ಎಂದು ಹೇಳುತ್ತೀರಿ. ಅವರಿಗಾದರೆ ಅವಕಾಶ ಕೊಡುತ್ತೀರಿ, ನಮಗೆ ಮಾತ್ರ ಏತಕ್ಕೆ ಹೀಗೆ ಮಾಡುತ್ತೀರಿ.

(ಗೊಂದಲ)

ಉಪಾಧ್ಯಕ್ಷರು.---ಕುಳಿತುಕೊಳ್ಳಿ ಎಂದು ಎಲ್ಲರಿಗೂ ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.---ಮಾನ್ಯ ಉಪಾಧ್ಯಕ್ಷರೇ, ಈಗ ಕೆಲವು ಕಾಲೇಜುಗಳ ವಿಚಾರ ಹೇಳುತ್ತೇನೆ ಅಲ್ಲಿ ಸ್ಯಾಂಕ್ಷನ್ ಸ್ಟ್ರೆಂತ್ ಎಷ್ಟು ? 1982-83ನೇ ವರ್ಷದಲ್ಲಿ ಕೊಟ್ಟಂತಹ ಸೀಟು ಎಷ್ಟು ? ಯಾವ ಕಾರಣಕ್ಕಾಗಿ ಕೊಟ್ಟರು ಎಂಬುದನ್ನು ನಾನು ಮಾನ್ಯ ಸದಸ್ಯರ ಊಹೆಗೇ ಬಿಡುತ್ತೇನೆ.

	Name of the Medical College	Intake capacity	Actual Admission
1	M.S. Ramaiah Medical College	100	125
2	Ambedkar Medical College	100	110
3	K. G. Medical College	100	130
4	Kasthurba Medical College (Mangalore Section)	100	130
	(Manipal Section)	100	150
5	J. J. Medical College, Davanagere	125	130
6	J. N. Medical College, Belgaum	100	114

ಇದನ್ನು ಯಾವ ಆಧಾರದ ಮೇಲೆ ಕೊಟ್ಟರಿ. ಅಲ್ಲಿ ಈ ರೀತಿ ಅಡ್ಮಿಟ್ ಮಾಡಿದಂಥ ಸ್ಟೂಡೆಂಟ್ಸ್ ನಾಳೆ ಡಾಕ್ಟರ್ ಆದ ಮೇಲೆ ಅವರ ಸಲಹೆ ಕೇಳಕ್ಕೆ ಹೋದರೆ ನಮ್ಮ ಮಕ್ಕಳ ಗತಿ ಏನಾಗಬೇಕು ಹೀಗಾದರೆ ಅಲ್ಲಿ ಯಾವ ತರಹ ಶಿಕ್ಷಣ ಸಿಗಬಹುದು. ಇವತ್ತು ಸ್ಟಾಂಡರ್ಡ್ ಇದೆಯೋ ಇಲ್ಲವೋ, ಸ್ಥಳ ಕೊಡಿ ದುಡ್ಡು ಕೊಟ್ಟು ಹೋಗುತ್ತೇವೆ ಅಂದರೆ ಯಾವ ತರಹ ಶಿಕ್ಷಣ ಸಿಕ್ಕಬಹುದು. ಕೆಲವು ಕಡೆಗಳಲ್ಲಿ ಅವರದೇ ಆಸ್ಪತ್ರೆ ಇದ್ದು ನಾವೇ ಸ್ವತಂತ್ರವಾಗಿ ಮಾಡಿಕೊಂಡು ಹೋಗುತ್ತೇವೆಂದರೆ ಆ ಮಾತು ಬೇರೆ. ಇವತ್ತು ಸರ್ಕಾರದ ಆಸ್ಪತ್ರೆ ಬೇಕು, ಬೇರೆ ಬೇರೆ ರೀತಿಯಲ್ಲಿ ಸರ್ಕಾರದ ಸಹಾಯಬೇಕು ಎನ್ನುವಾಗ ಹೀಗಾದರೆ ಹೇಗೆ ? ಆದ್ದರಿಂದ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡುವಾಗ ಯಾವ ರೂಲ್ಸ್ ಇದೆ. ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಬಗ್ಗೆ ಮಾನ್ಯ ಬಂಗಾರಪ್ಪನವರಿಗೆ ಹೇಳಲಿಕ್ಕೆ ಬಯಸುತ್ತೇನೆ. ಏನೆಂದರೆ, ಈಗ ಸ್ಯಾಂಕ್ಷನ್ಡ್ ಸ್ಟ್ರೆಂತ್ ಏನಿದೆಯೋ ಅದರಲ್ಲಿ ಇನ್ನು ಮುಂದೆ ಒಂದು ಸೀಟನ್ನೂ ಹೆಚ್ಚು ಮಾಡಲಿಕ್ಕೆ ನಾವು ಬಿಡುವುದಿಲ್ಲ. ಅಷ್ಟೇ ಅಲ್ಲ, ಈ 5 ವರ್ಷಗಳಲ್ಲಿ ಕ್ಯಾಪಿಟೇಷನ್ ಫೀ ತೆಗೆದುಕೊಂಡು ಭರ್ತಿಮಾಡತಕ್ಕಂಥ ಸಂಖ್ಯೆ ಏನಿದೆ ಆ ಸಾಧನವನ್ನು ಕಡಿಮೆಮಾಡುತ್ತಾ 5 ವರ್ಷದ ನಂತರ ಕ್ಯಾಪಿಟೇಷನ್ ಫೀ ಇಲ್ಲದಂತೆ ಮಾಡುತ್ತೇವೆ. ಅಲ್ಲದೆ ಸರ್ಕಾರ ಯಾರ ಜೊತೆಗೂ ಶಾಮೀಲು ಆಗಿಲ್ಲ. ಮಾನ್ಯ ಬಂಗಾರಪ್ಪನವರಿಗೆ

ಆ ಒಂದು ಭ್ರಮೆ ಬೇಕಾಗಿಲ್ಲ, ಇರಬೇಕಾಗಿಲ್ಲ. ಇವತ್ತು ಈ ವಿಚಾರ ಕೋರ್ಟಿನಲ್ಲಿದೆ, ಅಲ್ಲಿ ಏನಾಗುತ್ತದೋ ನಾವು ಕಾದು ನೋಡಬೇಕಾಗಿದೆ.

ಕೊನೆಯದಾಗಿ, ಪ್ರೊಫೆಷನಲ್ ಟ್ಯಾಕ್ಸ್ ವಿಚಾರದಲ್ಲಿ ಬಹಳ ಜನರ ವಿರೋಧವಿದೆ. ಅದೂ ಕೂಡ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರತಕ್ಕ ವಿಚಾರ. ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ನಾನು ಹೇಳಿದೆ, ಏನೆಂದರೆ, ನಾವು ಏನೇನು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಅದೆಲ್ಲವನ್ನೂ ಒಂದೇ ವರ್ಷ ಒಟ್ಟಿಗೆ ಜಾರಿಗೆ ತರುತ್ತೇವೆಂದು ಹೇಳಲಿಲ್ಲ, ಆದು ಸಾಧ್ಯವೂ ಆಗುವುದಿಲ್ಲ. ಯಾವ ಪಕ್ಷಕ್ಕೂ ಸಾಧ್ಯವಾಗುವುದಿಲ್ಲ. 5 ವರ್ಷಗಳ ಅವಕಾಶವಿದೆ, ಇದರಲ್ಲಿ ವ್ಯಾವಹಾರಿಕವಾಗಿ ತಕ್ಷಣ ಮಾಡಲಿಕ್ಕೆ ಯಾವುದು ಸಾಧ್ಯವೋ ಅದನ್ನು ಮಾಡುತ್ತೇವೆ. ನಂತರ ಯಾವುದನ್ನು ಮಾಡಬೇಕೋ ಅದನ್ನು ಮಾಡುತ್ತೇವೆ ಇದನ್ನು ಅಬಾಲಿಷ್ ಮಾಡುವುದಿಲ್ಲ ಎನ್ನುವುದರ ಬಗೆ ಯಾವ ಒಂದು ಸೂಚನೆ ಕೂಡ ಕೊಟ್ಟಿಲ್ಲ. ಇದರ ಪರವಾಗಿಯೂ ಸರ್ಕಾರ ಇದೆಯೆಂದು ಹೇಳಲಿಲ್ಲ. ನಾನು ಏನು ಹೇಳಿದೆ ಅಂದರೆ, ಈ ಬಾಬಿನಿಂದ ಬರತಕ್ಕಂಥಾದ್ದು ಈ ವರ್ಷ 15 ಕೋಟಿ, ಹೋದವರ್ಷ 13 ಕೋಟಿ ರೂಪಾಯಿಗಳು. ಈ ಹಣ ನಮ್ಮ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು,' ಲೋಕಲ್ ಅಥಾರಿಟೀಸ್ ಏನಿದೆ, ಅದು ಕಾರ್ಪೊರೇಷನ್ ಇರಬಹುದು, ಮುನಿಸಿಪಾಲಿಟಿ ಇರಬಹುದು ಅವುಗಳಿಗೆ ಹೋಗುತ್ತಾ ಇದೆ. ಈ ರೀತಿ ಅವರಿಗೆ ಸಲ್ಲತಕ್ಕ ಹಣದ ಬಗೆ ಸರ್ಕಾರವೇ ಒಂದು ನಿರ್ಣಯ ತೆಗೆದುಕೊಳ್ಳುವುದು ಸಮಂಜಸವಾಗಿ ಕಾಣುವುದಿಲ್ಲ ಎಂದು ಅಷ್ಟೇ ಹೇಳಿದೆ. ಅದರ ಅರ್ಥ ಮುಂದೆ ಅದನ್ನು ತೆಗೆದುಹಾಕುವಂಥಾದ್ದು ಇಲ್ಲವೇ ಇಲ್ಲ ಎಂದು ಅಲ್ಲ. ಅದರಲ್ಲೂ ಮುಖ್ಯವಾಗಿ ಇನ್ನು ಕೆಲವೇ ತಿಂಗಳಲ್ಲಿ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಆಗುತ್ತಾ ಇರುವುದರಿಂದ, ನಾಳೆ ಚುನಾವಣೆಯಾಗಿ ಚುನಾಯಿತ ಸದಸ್ಯರು ಬಂದಾಗ ಒಂದು ಮಾತು ಕೇಳಿದರು ಎಂದು ಇಟ್ಟುಕೊಳ್ಳೋಣ. ಈ ದುಡ್ಡು ನಮ್ಮದಾಗಿತ್ತು, ನಿಮ್ಮದಲ್ಲ. ನಮ್ಮನ್ನು ಕೇಳದೆ ಏಕೆ ಬಿಟ್ಟಿರಿ ಎಂದು ಟೀಕೆ ಮಾಡಿದರೆ ಅದಕ್ಕೆ ಏನೂ ಉತ್ತರ ಕೊಡಬೇಕು ? ಆ ಕಾರಣದಿಂದ ಈ ವಿಚಾರದಲ್ಲಿ ಏನೂ ಹೇಳಲಿಲ್ಲ. ಆದರೂ ನನಗನ್ನಿಸುತ್ತದೆ. ಈ ಚರ್ಚೆಯಲ್ಲಿ ಭಾಗವಹಿಸಿದಂಥ ಪ್ರತಿಯೊಬ್ಬ ಸದಸ್ಯರೂ, ಆ ಕಡೆ ಇರತಕ್ಕಂಥ ಸದಸ್ಯರಾಗಲಿ, ಈ ಕಡೆ ಇರತಕ್ಕಂಥ ಸದಸ್ಯರಾಗಲಿ ಪ್ರತಿಯೊಬ್ಬರೂ ಇದನ್ನು ವಿರೋಧಮಾಡಿದ್ದಾರೆ. ಮತ್ತು ಈ ಚರ್ಚೆಯಲ್ಲಿ ಭಾಗವಹಿಸಿದಂಥ ಸದಸ್ಯರು ನನ್ನ ಹತ್ತಿರ ಬಂದು ಇದನ್ನು ತೆಗೆದುಹಾಕಬೇಕು ಎಂದು ಹೇಳಿದ್ದಾರೆ. ನಾನು ಈ ವಿಚಾರದಲ್ಲಿ ಮಾನ್ಯ ಸಭೆಗೆ ಇಷ್ಟು ಹೇಳಬಯಸುತ್ತೇನೆ. ಇದರಲ್ಲಿ ಮುಖ್ಯವಾಗಿ ತೊಂದರೆಯಾಗತಕ್ಕಂಥಾದ್ದು ಸರ್ಕಾರದ ಕೆಳದರ್ಜೆ ನೌಕರರಿಗೆ ಮತ್ತು ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸಮಾಡತಕ್ಕಂಥ ಕಾರ್ಮಿಕರಿಗೆ. ಅವರು ಇದಕ್ಕೆ ಹೆಚ್ಚು ವಿರುದ್ಧವಾಗಿದ್ದಾರೆ. ಯಾರಿಗೆ ತಿಂಗಳಿಗೆ 10 ಸಾವಿರ, 5 ಸಾವಿರ, 3 ಸಾವಿರ ರೂಪಾಯಿ ಸಂಬಳ ಬರುತ್ತದೆ ಅಥವಾ ಆದಾಯ ಇದೆ ಅಂತಹವರು ವರ್ಷಕ್ಕೆ 250 ರೂಪಾಯಿಗಳನ್ನು ಕೊಡಲಿಕ್ಕೆ ಏನಿದೆ ? ಇವರು ಕೇವಲ 250 ರೂಪಾಯಿ ಮಾತ್ರ ಕೊಡಬೇಕು, ಇದಕ್ಕಿಂತ ಹೆಚ್ಚು ಇಲ್ಲ. ನನ್ನ ಆದಾಯ ತಿಂಗಳಿಗೆ 10 ಸಾವಿರ ರೂಪಾಯಿಗಳಿದ್ದರೂ ನಾನು ವರ್ಷಕ್ಕೆ ಕೊಡಬೇಕಾಗಿರತಕ್ಕಂಥಾದ್ದು ಕೇವಲ 250 ರೂಪಾಯಿ ಮಾತ್ರ, ಇದಕ್ಕಿಂತ ಹೆಚ್ಚಿಗೆ ಕೊಡುವುದಿಲ್ಲ. ಅದನ್ನು ಸಂಪೂರ್ಣವಾಗಿ ಸರ್ಕಾರ ಟ್ರಸ್ಟಾಗಿ ತೆಗೆದುಕೊಳ್ಳುತ್ತದೆ, ಈ ಹಣವನ್ನು ಪೂರ್ಣವಾಗಿ ಸ್ಥಾನಿಕ ಸಂಸ್ಥೆಗಳಿಗೋಸ್ಕರ ಇಟ್ಟಿರತಕ್ಕಂಥಾದ್ದು. ಸಾಮಾನ್ಯವಾಗಿ ಇದರ ಬಗೆ ವಿರೋಧ ಬಂದಿರುವುದರಿಂದ, ಮುಖ್ಯವಾಗಿ ಕಾರ್ಮಿಕರು ಮತ್ತು ಸರ್ಕಾರಿ ಕೆಳದರ್ಜೆ ನೌಕರರಿಗೆ ತೊಂದರೆಯಾಗುತ್ತದೆ ಎಂದು ತಿಳಿದು ಬಂದಿರುವುದರಿಂದ ಯಾರಿಗೆ ತಿಂಗಳಿಗೆ 1,200 ರೂಪಾಯಿಗಳ ಆದಾಯವಿದೆ ಅವರನ್ನು ಹೊರತುಪಡಿಸಿ ಬಾಕಿಯವರಿಗೆ ಇದನ್ನು ಲಾಗು ಮಾಡಬೇಕು ಎಂದು ಇದ್ದೇನೆ ಇದು ಶೇಕಡ 80ರಷ್ಟು ನೌಕರರು ಮತ್ತು ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಅನ್ವಯವಾಗುತ್ತದೆ ಇದೇ ಒಂದು ಅಳತೆಗೋಲನ್ನು ಇಟ್ಟುಕೊಂಡು ಶಾಸಕರಿಗೂ ಇದನ್ನು ಹಾಕಿದೆ ಮೊದಲು ಶಾಸಕರಿಗೆ ವೃತ್ತಿ ತೆರಿಗೆ ಇರಲಿಲ್ಲ. ಶಾಸಕರದು ವೃತ್ತಿ ಅಲ್ಲ. ಇದು ಹೆಸರಿಗೆ ವೃತ್ತಿ ತೆರಿಗೆ, ಕೂಡ ಆದಾಯದ ಮೇಲೆ ಹಾಕತಕ್ಕಂಥಾದಾಗಿದೆ. ಯಾವ ಶಾಸಕರಿಗೆ ತಿಂಗಳಿಗೆ 1200 ರೂಪಾಯಿಗಳಿಗಿಂತ ಕಡಿಮೆ ಉತ್ಪನ್ನ ಇದೆಯೋ ಅಂತಹವರು ಕೂಡ ಇದರಿಂದ ಮುಕ್ತರಾಗುತ್ತಾರೆ. ಶಾಸಕರನ್ನೂ ಇದರಲ್ಲಿ ಸೇರಿಸಿದ್ದೇನೆ, ಏಕೆಂದರೆ, ಕೇವಲ ಇದು ಒಂದು ನೀತಿ. ಯಾವಾಗ 4ನೇ ದರ್ಜೆ ನೌಕರರು ವೃತ್ತಿ ತೆರಿಗೆ ಕೊಡಬೇಕು ಎಂದು ಹೇಳುತ್ತೇವೋ, ಕಾರ್ಖಾನೆಯಲ್ಲಿ ಕೆಲಸಮಾಡತಕ್ಕ ಕಾರ್ಮಿಕರು ಕೊಡಬೇಕು ಎಂದು ಹೇಳುತ್ತೇವೋ, ಸಣ್ಣಪುಟ್ಟ ಅಂಗಡಿ ಇಟ್ಟುಕೊಂಡಿರುವವರು ಕೊಡಬೇಕೆಂದು ಹೇಳುತ್ತೇವೋ ಆ ಕಾಯಿದೆಯನ್ನು ಮಾಡತಕ್ಕ ನಾವು, ಶಾಸಕರು ಇದರಿಂದ ಮುಕ್ತರಾಗಬೇಕು ಅಂದರೆ ಆದು ನೀತಿಗೆ ಸಂಬಂಧಪಟ್ಟ ವಿಚಾರವಲ್ಲ. ಇದು ನೀತಿಯ ಆಧಾರದ ಮೇಲೆ ಇರುವಂಥಾದ್ದು. ಈ ವಿಚಾರದಲ್ಲೂ ಕೂಡ ಯಾರೋ ಕೋರ್ಟಿಗೆ ಹೋಗಿದ್ದಾರೆ. ನಾಳೆ ಅಲ್ಲಿ ಯಾವ ರೀತಿಯಲ್ಲಿ ತೀರ್ಮಾನ ಬರುತ್ತದೋ ಗೊತ್ತಿಲ್ಲ.

ಇನ್ನು ರೇಷ್ಮೆ ವಿಚಾರದಲ್ಲಿ ನಾವು ಏನು ಬದಲಾವಣೆ ಮಾಡಿದ್ದೇವೆ, ಅದರ ಬಗ್ಗೆಯೂ ಕೂಡ ಮಾನ್ಯ ಸದಸ್ಯರು ಹೇಳಿದರು. ನೀವು ಎರಡೂ ಕಡೆಗೆ ಬರೆದಿದ್ದರಿಂದ ಒಂದಕ್ಕೊಂದು ವಿರುದ್ಧವಾಗಿದೆ ಎಂದು ಹೇಳಿದರು, ಅದು ವಿರುದ್ಧವಾಗಿಲ್ಲ, ಸರ್ಕಾರದ ಉದ್ದೇಶ, ಸರ್ಕಾರದ ನಿರ್ಣಯ ಇದರ ಬಗ್ಗೆ ಏನು ಎನ್ನುವುದನ್ನು ಹೇಳುತ್ತಿದ್ದೇವೆ. ಎರಡು ಪರ್ಸೆಂಟ್ ಏನು ಸೇಲ್ಸ್ ಟ್ಯಾಕ್ಸ್ ಹಾಕಿದ್ದೇವೆ ಅದು ಯಾವ ರೀತಿಯಲ್ಲೂ ಕೂಡ ನೇಕಾರರಿಂದ ವಸೂಲಾಗುತ್ತಾ ಇರತಕ್ಕಂಥಾದ್ದು ಅಲ್ಲ. ಈ ವಿಚಾರವನ್ನು ನಾನು ಸ್ಪಷ್ಟಪಡಿಸುವುದಾದರೆ, ಕೈಮಗ್ಗಕ್ಕಂತೂ ಸಂಪೂರ್ಣ ತೆರಿಗೆವಿನಾಯಿತಿ ಇದೆ. ಯಾರು 10ಕ್ಕಿಂತ ಕಡಿಮೆ ಪವರ್‌ಲೂಮ್ಸ್ ಇಟ್ಟುಕೊಂಡಿದ್ದಾರೆ ಅವರು ಯಾವುದೇ ರೀತಿಯ ಸೇಲ್ಸ್ ಟ್ಯಾಕ್ಸ್ ಕೊಡತಕ್ಕಂಥಾದ್ದು ಇಲ್ಲ. ಇದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅದು ಫ್ಯಾಕ್ಟರಿ ಆಕ್ಟ್‌ನಲ್ಲಿ ಬರುವುದಿಲ್ಲವೇ, 1958ರಲ್ಲಿ ಅಮೆಂಡ್‌ಮೆಂಟ್ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—1958ನೇ ಇಸವಿಯಲ್ಲಿ ಅಮೆಂಡ್‌ಮೆಂಟ್ ಆದದ್ದು ಬೇರೆ, ನಂತರ ಬಂದದ್ದು ಬೇರೆ ವಿದ್ಯುಚ್ಛಕ್ತಿ ಇದ್ದರೆ ಅದರಲ್ಲಿ ಒಬ್ಬ ದುಡಿದರೂ ಕೂಡ ಫ್ಯಾಕ್ಟರಿ ಆಕ್ಟ್‌ನೊಳಗೆ ಬಂದು ಬಿಡುತ್ತದೆ. ಅದನ್ನು ನಾನು ಸ್ಪಷ್ಟಪಡಿಸುತ್ತಾ ಇದ್ದೇನೆ. ಇಷ್ಟೆಲ್ಲಾ ಸೇಲ್ಸ್ ಟ್ಯಾಕ್ಸ್ ಏನಿದೆ ಇದು, ನೀವೂ ನಾವು ಅಂಗಡಿಗೆ ಹೋಗಿ ರೇಷ್ಮೆ ಬಟ್ಟೆಯನ್ನು ಕೊಳ್ಳಲು ಹೋದರೆ 2 ಪರ್ಸೆಂಟ್ ಮಾತ್ರ ಕೊಡುವಂಥಾದ್ದು ಬರುತ್ತದೆ ಎಂದು ಸರ್ಕಾರಿ ಭಾಷೆಯಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

12-00 Noon.

ಇನ್ನು ಸ್ಟೈಫಂಡರಿ ಪದವೀಧರರ ವಿಚಾರದಲ್ಲಿ ಬಹಳ ಜನ ಹೇಳಿದರು. ಅಧ್ಯಕ್ಷರೇ ತಮ್ಮ ಮುಖಾಂತರ. ಈ ಮಾನ್ಯ ಸಭೆಗೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳವುದಕ್ಕೆ ಬಯಸುತ್ತೇನೆ. ಏತಕ್ಕೆಂದರೆ ಸರ್ಕಾರದ ಔದಾರ್ಯವನ್ನು, ಸಹಾನುಭೂತಿಯನ್ನು ಸರ್ಕಾರದ ಒಂದು ಮೈತ್ರಿಯನ್ನು ನಿಲುವೆಯನ್ನು ಯಾರೂ ತಪ್ಪು ಭಾವನೆಯಿಂದ ನೋಡಕೂಡದು. ಮತ್ತೆ ಯಾರೂ ದುರುಪಯೋಗ ಮಾಡಿಕೊಳ್ಳಕೂಡದು, ಇವತ್ತು ಒಂದು ದುರ್ದೈವದ ವಿಚಾರವೆಂದರೆ ಸ್ಟೈಫಂಡರಿ ಗ್ರ್ಯಾಜ್ಯುಯೇಟ್ಸ್‌ಗೆ ಏನು ತೊಂದರೆಯಾಗಿದೆ ಆ ತಪ್ಪನ್ನು ನಾವು ಮಾಡಿದ ತಪ್ಪೇ ? ಈ ಸರ್ಕಾರ ಮಾಡಿದ ತಪ್ಪೇ ? ನಿನ್ನೆ ನಡೆದಂಥ ಘಟನೆ ನಿಜಕ್ಕೂ ಈ ಸದನದಲ್ಲಿ ಆಗಕೂಡದಾಗಿತ್ತು. ಇಷ್ಟೆ ಅಲ್ಲ, ಸ್ಟೈಫಂಡರಿ ಗ್ರ್ಯಾಜ್ಯುಯೇಟ್ಸ್‌ಗಳು ನಾಳೆ ಹೋಗಿ ಸರ್ಕಾರದ ಬೇರೆ ಬೇರೆ ಇಲಾಖೆಯಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕೂತು ಕೆಲಸ ಮಾಡತಕ್ಕವರಿಗೆ ಇದು ಭೂಷಣವಲ್ಲ. ಅವರಿಂದ ಈ ರೀತಿಯಾಗಿ ನಾವು ನಿರೀಕ್ಷಣೆ ಮಾಡುವುದಿಲ್ಲ. ಸರ್ಕಾರದ ನಿಲುವೆ ಇದರ ಬಗ್ಗೆ ಏನಿದೆ ಎಂಬುದು ತಮಗೆಲ್ಲಾ ಗೊತ್ತೇ ಇದೆ. ನಾವು ಇದಕ್ಕಾಗಿ ಪ್ರಯತ್ನ ಮಾಡುತ್ತಲೇ ಇದ್ದೇವೆ. ಹೈಕೋರ್ಟಿನಲ್ಲಿ ಮೊನ್ನೆ ತಾನೇ ಒಂದು ಭಾಗವನ್ನು ತಳ್ಳಿಹಾಕಿ ಮತ್ತೊಂದು ಭಾಗವನ್ನು ಆಗಬಹುದೆಂದು ಹೇಳಿದ್ದಾರೆ. ಅದರ ಪ್ರಕಾರವಾಗಿ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿ ಅರ್ಜಿಯನ್ನು ಕರೆಯಬೇಕಾಗಿರುತ್ತದೆ. ಆದರೆ ಇವತ್ತು ಈ ರೀತಿಯಾಗಿ ಚಳುವಳಿ ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆಯೇ ? ಆ ರೀತಿ ಚಳುವಳಿಯನ್ನು ಮಾಡುವುದಾದರೆ ನಾವು ಅದನ್ನು ಎದುರಿಸುವುದಕ್ಕೆ ತಯಾರಿದ್ದೇವೆ. ಇದರಲ್ಲಿ ನಾನು ಹೇಳುತ್ತೇನೆ. ಸ್ಟೈಫಂಡರಿ ಗ್ರ್ಯಾಜ್ಯುಯೇಟ್ಸ್ ಏನಿದ್ದಾರೆ, ಅವರಿಗೆ ನೀವು ಬೇರೆಯವರ ಸಪೋರ್ಟ್‌ನ್ನು ಪಡೆಯಬೇಡಿ ಎಂದು ಅವರಿಗೆ ಹೇಳಬಯಸುತ್ತೇನೆ. ಬೇರೆಯವರ ಹತ್ತಿರ ನೀವು ಸಹಾಯವನ್ನು ಯಾಚನೆ ಮಾಡಬೇಡಿ. ನನಗೆ ಗೊತ್ತುಂಟು, ಕೆಲವರು ಈ ಸಂದರ್ಭವನ್ನು ಎಕ್ಸ್‌ಪ್ಲಾಯಿಟ್ ಮಾಡಿಕೊಂಡು ಸುಲಿಗೆ ಮಾಡಬಹುದು ಅದರ ದುರ್ಲಾಭವನ್ನು ಪಡೆಯಬಹುದು, ಅದಕ್ಕೆ ಅವಕಾಶ ಕೊಡಬೇಡಿ ಎಂದು ಅವರಿಗೆ ಹೇಳುತ್ತೇನೆ. ಇದಕ್ಕಿಂತ ಹೆಚ್ಚಾಗಿ ಸಹಾನುಭೂತಿವುಳ್ಳ ಸರ್ಕಾರ ನಿಮಗೆ ಹಿಂದೆ ಸಿಕ್ಕಿರಲಿಕ್ಕೆ ಇಲ್ಲವೆಂದು ಹೇಳಬಯಸುತ್ತೇನೆ. ನಮ್ಮ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಸ್ಟೈಫೆಂಡರಿ ಗ್ರ್ಯಾಜ್ಯುಯೇಟ್ಸ್ ಯಾರೇ ಆಗಲೀ ಚಳುವಳಿ ಮಾಡಿದರೆ ನಾವು ಅವರ ಮೇಲೆ ದುಂಡಾವರ್ತಿ ಮಾಡುವುದಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಆದರೆ ನಮಗೆ ಶಕ್ತಿ ಇಲ್ಲವೆಂದು ಅಲ್ಲ, ಆದರೆ ನಮ್ಮ ಸರ್ಕಾರದ ನೀತಿ ಬದಲಾವಣೆಯಾಗಿದೆ. ಈ ಸಮಸ್ಯೆಗೆ ನಾವು ಪರಿಹಾರ ಮಾಡಬೇಕೆಂದರೆ ನಿಮ್ಮೆಲ್ಲರ ಸಹಕಾರ ಸಹಾಯ ಬೇಕಾಗಿರುತ್ತದೆ. ಸಮಸ್ಯೆ ಬಂದ ತಕ್ಷಣವೇ ಅದನ್ನು ಪರಿಹಾರ ಮಾಡಬೇಕೆಂದರೆ ಆಗುವುದಿಲ್ಲ. ಆದುದರಿಂದ ನಾನು ಅವರಿಗೆ ಹೇಳುತ್ತೇನೆ. ನಿಮ್ಮ ಬಗ್ಗೆ ನಮ್ಮ ಸರ್ಕಾರಕ್ಕೆ ಸಂಪೂರ್ಣವಾದ ಸಹಾನುಭೂತಿ ಇದೆ, ಹಿಂದೆ ಹೇಗೆ ಇತ್ತೋ ಹಾಗೆ ಅಂದರೆ ನಮಗೆ ಅಧಿಕಾರ ಇಲ್ಲದೇ ಇರುವಾಗ ನಿಮ್ಮ ಬಗ್ಗೆ ಎಷ್ಟು ಸಹಾನುಭೂತಿ ಇತ್ತೋ ಅಷ್ಟೇ ಸಹಾನುಭೂತಿ ಈಗಲೂ ಕೂಡ ಇದೆ. ಆದರೆ ಕಾಯಿದೆ ಅಡ್ಡ ಬಂದು ನಮ್ಮ ಕೈ ಸ್ವಲ್ಪ ಕಚ್ಚುತ್ತಿದೆ. ಹೈಕೋರ್ಟಿನಲ್ಲಿ ತೀರ್ಮಾನ

ವಾಗುವವರೆಗೆ ನಾವು ಏನೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಅಥವಾ ಸಮಾರೋಪ ಭಾಷಣಮಾಡುವುದಾದರೆ, ಈ ಸಲದ ಬಡ್ಜೆಟನ್ನು ನಾನು ಆಗಲೀ ಅಥವಾ ನನ್ನ ಸಹೋದ್ಯೋಗಿಗಳಾಗಲೀ ಸರ್ಕಾರದ ಪರವಾಗಿ ಮಾತನಾಡಿದ ಯಾರೇ ಆಗಲೀ ಇದು ಒಂದು ಜಾಡೂ ಬಡ್ಜೆಟ್ ಎಂದು ಕರೆಯುವುದಿಲ್ಲ. ಆದರೆ ವಾಸ್ತವಿಕ ದೃಷ್ಟಿಯಿಂದ ನಮಗೆ ಇರತಕ್ಕಂಥ ಅಡಚಣೆಗಳನ್ನು ನಿವಾರಿಸಿಕೊಂಡು ಸೀಮಿತ ಸಂಪನ್ಮೂಲಗಳ ದೃಷ್ಟಿಯಲ್ಲಿ ಎಷ್ಟರಮಟ್ಟಿಗೆ ನಾವು ಹೆಚ್ಚು ಕೆಲಸಗಳನ್ನು ಜಾರಿಗೊಳಿಸುವುದಕ್ಕೆ ಸಾಧ್ಯವೋ ಅದನ್ನು ಮಾಡಬೇಕೆಂದು ಹೇಳತಕ್ಕ ಒಂದು ನಿರ್ಧಾರದ ಒಂದು ಚಿತ್ರಪಟವಿದು. ಪ್ರತಿಯೊಂದು ಬಾಬಿಗೂ ಹಣವನ್ನು ಹೆಚ್ಚು ಮಾಡಿದ್ದೇವೆ. ಆದುದರಿಂದ ಇದು ಏನು ಅಂಥಾ ದೊಡ್ಡ ಕೊರತೆಯ ಬಡ್ಜೆಟ್ ಎಂದು ಕಾಣುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಈ ಕೊರತೆ ಶಾಶ್ವತವಾಗಿರುವುದಿಲ್ಲ. ಇದಕ್ಕಾಗಿ ನಾವು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಆಮೇಲೆ ಮಾನ್ಯ ಬಂಗಾರಪ್ಪನವರು ಹೇಳಿದ ಕೆಲವು ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡತಕ್ಕ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ ಅವರ ಅಭಿಪ್ರಾಯದಲ್ಲಿ ಈ ಸರ್ಕಾರ ಜನತಾ ಸರ್ಕಾರವಲ್ಲ ಜನತಾರಂಗ ಸರ್ಕಾರವೆಂದು ಹೇಳಿ ಇರಬೇಕು ಎಂದು ಏನು ಹೇಳಿದರು ಅದು ಅವರವರ ವೈಯಕ್ತಿಕ ಅಭಿಪ್ರಾಯ. ಜನತೆಯ ಅಭಿಪ್ರಾಯವೇನೂ ಅಲ್ಲ ಅವರು ಈಗಲೂ ಸಹ ಸರ್ಕಾರಕ್ಕೆ ಸಹಕಾರ ಕೊಡುವುದಿಲ್ಲವೆಂದು ಹೇಳಿಲ್ಲ, ಮುಂದಕ್ಕೂ ಸಹ ಏನು ಹೇಳಿದರು ಎಂದರೆ ನಾವು ಸರಿಯಾದ ರೀತಿಯಲ್ಲಿ ಕೆಲಸ ಮಾಡದಿದ್ದರೆ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳತಕ್ಕ ಪ್ರಸಂಗ ಬರಬಹುದೆಂದು ಹೇಳಿದರು. ನಾವು ಸರಿಯಾದ ರೀತಿಯಲ್ಲಿ ಕೆಲಸಮಾಡದಿದ್ದರೆ – ಸರಿ. ಅಲ್ಲಿಯವರೆಗೂ ಅವರು ಬೆಂಬಲವನ್ನು ಕೊಡುತ್ತೇವೆಂದು ಹೇಳಿರುವುದರಿಂದ ಅದನ್ನು ನಾನು ಸ್ವಾಗತಿಸುತ್ತೇನೆ. ಮತ್ತೆ ಚುನಾವಣೆಯ ಮೊದಲು ಚುನಾವಣೆಯಾದ ನಂತರ ಯಾವ ರೀತಿಯಾದ ಒಂದು ಅಪೇಕ್ಷೆ ಇವತ್ತೂ ಕೂಡ ನಮಗಿದೆ, ಆದರೆ ಬೆಂಬಲ ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡತಕ್ಕಂಥ ಅಗತ್ಯವಿರಲಿಲ್ಲ. ಈ ಸರ್ಕಾರಕ್ಕೆ ಜನತೆಯ ಬೆಂಬಲವಿದೆ, ಜನತೆಯ ಬೆಂಬಲ ಇಲ್ಲದೇ ಇದ್ದರೆ ನಾವು ಹೋಗುತ್ತೇವೆ. ಈ ಸರ್ಕಾರದ ಪರೀಕ್ಷೆ ಜನತೆಯಿಂದ ಆಗಬೇಕು ಮತ್ತೆ ಜನತೆಯ ಮುಂದೆ ಹೋಗುವುದಕ್ಕೆ ನಾವು ಯಾವಾಗಲೂ ತಯಾರಾಗಿದ್ದೇವೆ. ಅದಕ್ಕೆ ಎಂದೆಂದಿಗೂ ನಾವು ಹಿಂದುಮುಂದು ನೋಡುವುದಿಲ್ಲ. ಇನ್ನು ಚರ್ಚೆಯಲ್ಲಿ ಭಾಗವಹಿಸಿ ಅನೇಕ ರೀತಿಯ ಉಪಯುಕ್ತವಾದ ಸಲಹೆಯನ್ನು ಕೊಟ್ಟಂಥ ಮಾನ್ಯ ಅನೇಕ ಸದಸ್ಯರುಗಳ ಹೆಸರನ್ನು ಹೇಳುವುದಕ್ಕೆ ಆಗುವುದಿಲ್ಲ, ಅದಕ್ಕಾಗಿ ದಯವಿಟ್ಟು ಕ್ಷಮಿಸಬೇಕು. ಅವರು ಕೊಟ್ಟಂಥ ಪ್ರತಿಯೊಂದು ರಚನಾತ್ಮಕವಾದ ಸಲಹೆಗೆ ನಾನು ಕೃತಜ್ಞನಾಗಿದ್ದೇನೆ.

ಒಬ್ಬ ಸದಸ್ಯರು.—ಪಟ್ಟಣ ಆಸ್ತಿಮಿತಿ ಬಗ್ಗೆ ಪ್ರಸ್ತಾಪ ಮಾಡಿದ್ದೆವು, ಈ ಬಗ್ಗೆ ಆಯವ್ಯಯ ಪಟ್ಟಿಯಲ್ಲೂ ಹೇಳಿಲ್ಲ, ತಮ್ಮ ಉತ್ತರದಲ್ಲಿಯಾದರೂ ದಯಮಾಡಿ ವಿವರಣೆ ನೀಡಿ.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾ ಸೂಚನೆಗಳಿಗೂ ಸಹ ನಮ್ಮ ಸರ್ಕಾರ ಅಷ್ಟೇ ಮಹತ್ವ ಕೊಟ್ಟು ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆಂದು ಹೇಳಿ ನಾನು ತಮಗೆ ವಂದಿಸಿ ತಮ್ಮ ಮುಖಾಂತರವಾಗಿ ಮಾನ್ಯ ಸದಸ್ಯರುಗಳಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಬಡ್ಜೆಟ್ ಭಾಷಣದ ಮೇಲೆ ಉತ್ತರ ಕೊಡುವಾಗ ನಮ್ಮ ಸದಸ್ಯರನೇಕರು ಎತ್ತಿದಂಥ ಪ್ರಶ್ನೆಗೆ ಉತ್ತರವನ್ನು ಕೊಡದೇ ಇರುವುದರಿಂದ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಮೊದಲನೆಯದಾಗಿ ರೈತರಿಗೆ ಕೆಲವು ರಿಯಾಯಿತಿಗಳನ್ನು ಹಾಗೂ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದರು, ಆದರೆ ಅದನ್ನು ಮಾಡಿಲ್ಲ. ಇಂತಿಷ್ಟು ನಿಗದಿಯಾದ ಸಮಯದೊಳಗೆ ಸಾಲ ಸಂದಾಯ ಮಾಡಿದರೆ ಪರಿಹಾರ ಸಿಗುತ್ತದೆಂದು ಹೇಳಿ ಷರತ್ತು ಹಾಕಿದ್ದಾರೆ. ಈಗ ಬರಗಾಲ 16 ಜಿಲ್ಲೆಗಳಲ್ಲೂ ಇರುವಾಗ ನಿಮ್ಮ ಸಮೀಕ್ಷೆ ಪ್ರಕಾರವಾಗಿ ಎಷ್ಟರಮಟ್ಟಿಗೆ ರೈತರು ಪರಿಹಾರವನ್ನು ಪಡೆಯುವುದಕ್ಕೆ ಸಾಧ್ಯವಿದೆ ? ಹಿಂದಿನ ಸರ್ಕಾರದವರು ರೈತರಿಗೆ ಪರಿಹಾರವಾಗಿ ಆಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಗ್ಗೆ ಮತ್ತು ಪಂಪ್‌ಸೆಟ್‌ಗಳಿಗೆ ರಿಯಾಯಿತಿ ಕೊಟ್ಟಿರುವ ಬಗೆ ಇನ್ನಿತರ ಕೆಲವು ಐಟಂಗಳಲ್ಲಿ ಒಟ್ಟು 83 ಕೋಟಿ ರೂಪಾಯಿಗಳ ಸವಲತ್ತುಗಳನ್ನು ಒದಗಿಸಿದ ಬಗೆ ಹಾಗೂ ಒಟ್ಟು 3 ವರ್ಷಗಳಲ್ಲಿ ರೈತರಿಗೆ ಎಷ್ಟರ ಮಟ್ಟಿಗೆ ಹಾಗೂ ಎಷ್ಟು ಮೊತ್ತದ ಪರಿಹಾರದ ರಿಯಾಯಿತಿಯನ್ನು ಸರ್ಕಾರ ಕೊಟ್ಟಿದೆ ಎಂಬುದರ ಅಂಕಿ ಸಂಖ್ಯೆಗಳೇನಾದರೂ ನಿಮ್ಮ ಹತ್ತಿರವಿದೆಯೋ ? ಇನ್ನು 1983–84ರ ಯೋಜನೆಯ ಪ್ರಕಾರವಾಗಿ ಎಷ್ಟು ಹಣವನ್ನು ಗ್ರಾಮಾಂತರ ಪ್ರದೇಶಗಳಿಗೆ ಖರ್ಚು ಮಾಡುತ್ತೀರಿ ?

ಏಕೆಂದರೆ 1981,82 ಹಾಗೂ ಸಾಲುಗಳಲ್ಲಿ 83ನೇ ದಾಮಾಶ ಪ್ರಕಾರವಾಗಿ ಗ್ರಾಮಾಂತರ ಪ್ರದೇಶಗಳಿಗೆ ಖರ್ಚು ಮಾಡಲಾಗಿದೆ ? ಇನ್ನು ಮನೆ ಕಟ್ಟುವ ಬಗ್ಗೆ ಹೇಳುವುದಾದರೆ, 1973ನೇ ಜನವರಿಯಿಂದ 1980ನೇ ಜನವರಿವರೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿತ್ತು, ಎಷ್ಟು ಮನೆಗಳನ್ನು ಕಟ್ಟಿದ್ದರು. ಜನವರಿ 80 ರಿಂದ ಡಿಸೆಂಬರ್ 1982ರವರೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿತ್ತು ಹಾಗೂ ಅದರಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದಾರೆ ? ನಮ್ಮ ಲೆಕ್ಕದ ಪ್ರಕಾರವಾಗಿ ಸುಮಾರು 3 ಲಕ್ಷ ಮನೆಗಳನ್ನು ಜನವರಿ 80 ರಿಂದ 1982 ರವರೆಗೆ ಕಟ್ಟಿದ್ದೇವೆ.

ಕಳೆದ 3 ವರ್ಷಗಳಲ್ಲಿ ಮನೆ ಕಟ್ಟಲಿಕ್ಕೆ ಎಷ್ಟು ಹಣ ಖರ್ಚಾಗಿತ್ತು ಮತ್ತು ನೀವು ಜನವರಿ 1983 ರಿಂದ ಮಾರ್ಚ್ 1983 ರವರೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಎಷ್ಟು ಮನೆಗಳನ್ನು ಕಟ್ಟಿ ಪೂರೈಸಿದ್ದೀರಿ ಎಂಬ ವಿವರಗಳು ಬೇಕು. ಕಳೆದ ವರ್ಷ ಅಂದರೆ ಏಪ್ರಿಲ್ 1982 ರಿಂದ ಡಿಸೆಂಬರ್ 1982ರವರೆಗೆ ಎಷ್ಟು ಹಣ ಖರ್ಚಾಗಿತ್ತು ? ಈಗ ತಾವು ಎಷ್ಟು ಹಣ ಕೊಟ್ಟಿದ್ದೀರೆಂಬ ವಿವರಗಳುಬೇಕು. ಇನ್ನು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಹೇಳಿದ್ದೀರಿ. ಇವತ್ತು ಸರ್ಕಾರ ಕೊಟ್ಟಂತಹ ಆಜ್ಞೆ ಮೇಲೆ ರಿಟ್ ಇದೆ. ಆದ್ದರಿಂದ, ಆ ಬಗ್ಗೆ ಶಾಸನ ಮಾಡಲಿಕ್ಕೆ ಏನಾದರೂ ಅಡೆತಡೆ ಇದೆಯೇ ? ಸ್ಟೈಪೆಂಡರಿ ಪದವೀಧರರನ್ನು ಮುಂದುವರಿಸಿರತಕ್ಕದ್ದು ಸಂತೋಷದ ವಿಚಾರ. ನಿನ್ನೆ ದಿವಸ ತಮ್ಮ ಪರವಾಗಿ ಮಾನ್ಯ ಬೊಮ್ಮಾಯಿಯವರು ಭಾಷಣ ಮಾಡಿ ಈಗ ಹೈಕೋರ್ಟ್ ಜಡ್ಜ್‌ಮೆಂಟ್ ಬಂದಿದೆ, ಅವರನ್ನು ಎಷ್ಟು ದಿವಸದ ಒಳಗಡೆ ಖಾಯಂಮಾಡುತ್ತಿದ್ದೇವೆ ಎಂಬುದನ್ನು ಹೇಳಿದ್ದಾರೆ ಅವರ ಸಂಬಳದ ಬಗ್ಗೆ ಹೇಳುವಾಗ ನಾನು ಇರಲಿಲ್ಲ. ಅವರನ್ನು ಖಾಯಂ ಆಗಿ ಮುಂದುವರಿಸುವ ವಿಚಾರದಲ್ಲಿ ಅಡೆತಡೆ ಇದ್ದರೆ ಅವರು ಯಾವ್ಯಾವ ಸ್ಥಳಗಳಲ್ಲಿದ್ದಾರೆ ಅಲ್ಲೇ ತಾತ್ಕಾಲಿಕವಾಗಿ ಮುಂದುವರಿಸಿ ಹೆಚ್ಚಿಗೆ ಸಂಬಳ ಕೊಡಲಿಕ್ಕೆ ಏನು ತೊಂದರೆ ಇದೆ ? ಸ್ಟೈಪೆಂಡರಿ ಪದವೀಧರರನ್ನು ರಾಜಕೀಯಕ್ಕೆ ಉಪಯೋಗ ಮಾಡತಕ್ಕ ಉದ್ದೇಶ ನಮಗೆ ಯಾರಿಗೂ ಇಲ್ಲ. ತಾವು ಒಂದು ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು, ನಾವು ಮೊದಲೂ ಹೇಳಿದ್ದೇವೆ, ಈಗಲೂ ಹೇಳುತ್ತೇವೆ. ಅವರು ಚನ್ನಾಗಿ ಕೆಲಸ ಮಾಡಬೇಕು ಮತ್ತು ಶಿಸ್ತನ್ನು ಕಾಪಾಡಬೇಕು. ಈ ತರಹ ಮುಷ್ಕರ ಮತ್ತೊಂದು ಪ್ರವೃತ್ತಿಗೆ ಹೋಗಬೇಕಾದ ಅಗತ್ಯ ಇಲ್ಲ. ಅವರ ನ್ಯಾಯವಾದ ಬೇಡಿಕೆಗೆ ಬೆಂಬಲ ಕೊಡುವುದಕ್ಕೆ ನಾವಿದ್ದೇವೆ ಇದನ್ನು ನಾವು ಈ ಸದನದಲ್ಲಿ ಸ್ಪಷ್ಟಪಡಿಸಬೇಕಾಗಿದೆ ತಾವು ಉತ್ತರ ಕೊಡುವಾಗ ಮತ್ತೊಂದು ಮಾತನ್ನು ಹೇಳಿದಿರಿ. ಅದೇನೆಂದರೆ ರೈತರ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿದಿರಿ, ಆದರೆ ಅವರ ಬೇಡಿಕೆಗಳು ಪ್ರಗತಿಗೆ ವಿರುದ್ಧದಾಗಿದ್ದರೆ ಅವನ್ನು ಒಪ್ಪುವುದಕ್ಕೆ ತಯಾರಿಲ್ಲವೆಂದು ಹೇಳಿದ್ದೀರಿ. ಈಗ ಶ್ರೀಮಾನ್‌ರಾಗಿರುವ ರುದ್ರಪ್ಪನವರು ಅಧ್ಯಕ್ಷ ರೈತ ಸಂಘದವರು ತಮ್ಮ ಮುಂದೆ ಮಂಡಿಸಿರುವ ಬೇಡಿಕೆಗಳಲ್ಲಿ ಯಾವುವು ಪ್ರಗತಿಗೆ ವಿರೋಧವಾಗಿವೆ ಎಂಬುದನ್ನು ತಾವು ಹೇಳಬೇಕು. ನಾನು ಬಿ. ಡಿ. ಎ. ಬಗ್ಗೆ ಪ್ರಸ್ತಾಪ ಮಾಡಿದೆ. ಆದರೆ ತಾವು ನನ್ನ ಆರೋಪದ ಅಂಶಕ್ಕೆ ಹೋಗಲಿಲ್ಲ 32 ಕೋಟಿ ರೂಪಾಯಿಗಳ ಸ್ವಂತ ಹಣಕಾಸಿನ ಯೋಜನೆಯಲ್ಲಿ ಇಬ್ಬರಿಗೆ ಲೆಟರ್ ಆಫ್ ಇಂಡೆಂಟ್ಸ್ ಕೊಡುವ ಉದ್ದೇಶ ಏನು ? ಅದೂ ಕೂಡ ಎಸ್. ಆರ್. ರೇಟಿಗಿಂತ ಜಾಸ್ತಿ ಕೊಟ್ಟು 2 ಕೋಟಿ ರೂಪಾಯಿ ಮುಂಗಡ ಕೊಟ್ಟಿದ್ದಾರೆ. 5 ಲಕ್ಷಕ್ಕಿಂತ ಯಾವುದೇ ಒಂದು ಕಂಟ್ರಾಕ್ಟ್ ಕೊಡಬೇಕಾದರೂ ಅದು ಸರ್ಕಾರಕ್ಕೆ ಬರಬೇಕು. ಆ ರೀತಿ ಬಾರದೆ ಬಿ. ಡಿ. ಎ. ಯವರು ಲೆಟರ್ ಆಫ್ ಇಂಡೆಂಟ್ಸ್ ಕೊಟ್ಟಿದ್ದು ಸರಿಯೆ ? ಈ ವಿಷಯದ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಕಳೆದ ವರ್ಷ ಇದ್ದಂತಹ ಬಡವರಿಗೆ ಅನುಕೂಲವಾದ ಕಾರ್ಯಕ್ರಮಗಳಾದ ಮುನ್ನಡೆ ಸಾಗರದೀಪ, ಗೃಹಕಲ್ಯಾಣ, ಆಶಾಕಿರಣ ಇತ್ಯಾದಿ ಕಾರ್ಯಕ್ರಮಗಳನ್ನು ಮುಂದುವರಿಸುತ್ತೀರಾ ಅಥವಾ ನಿಲ್ಲಿಸುತ್ತೀರಾ? ಏಕೆಂದರೆ ಅದರ ಪ್ರಸ್ತಾಪವನ್ನು ಬಜೆಟ್ಟನಲ್ಲಿ ಸಹ ಮಾಡಿಲ್ಲ ಮತ್ತು ಉತ್ತರ ಕೊಡುವಾಗ ಕೂಡ ಪ್ರಸ್ತಾಪ ಮಾಡಲಿಲ್ಲ. ಇನ್ನು ಕೊರತೆ ಏನು ಶಾಶ್ವತವಾದದ್ದಲ್ಲ, ಅದನ್ನು ತುಂಬಿಸ್ತೇವೆಂದು ಹೇಳಿದಿರಿ. ಆದರೆ ಯಾವ ರೀತಿಯಾಗಿ ಈ ದೊಡ್ಡ ಕೊರತೆಯ ಬಜೆಟ್ಟನ್ನು ಸುಧಾರಿಸಿಕೊಂಡು ಹೋಗುತ್ತೀರೆಂಬ ಬಗ್ಗೆ ನಮಗೆ ಸಮಜಾಯಿಸಿ ನೀಡಬೇಕಾದುದು ಅಗತ್ಯವಾಗಿದೆ ಆ ಕೊರತೆಯನ್ನು ಭರ್ತಿ ಮಾಡುತ್ತೇನೆಂದು ತಾವು ಸಮಾಧಾನ ಮಾಡಿಕೊಂಡರಾಗಲೀ ಅಥವಾ ತಮ್ಮಲ್ಲಿ ಅಂಥ ಒಂದು ದೃಢತೆ ಇದ್ದರೆ ಸಾಕಾಗುವುದಿಲ್ಲ. ಈ ಸದನದ ಇತಿಹಾಸದಲ್ಲೇ ಇಲ್ಲದೆ ಇರತಕ್ಕ ಕೊರತೆ ಬಜೆಟ್ಟನ್ನು ಹೇಗೆ ಭರ್ತಿಮಾಡುತ್ತೀರಿ ಎಂಬ ಸಂಶಯ ಈ ರಾಜ್ಯದ ಜನತೆಗೆ ಮತ್ತು ನಮಗೆ ಇದೆ. ಕೊರತೆ ತುಂಬುವ ಬಗ್ಗೆ ಇನ್ನೊಮ್ಮೆ ಉತ್ತರಿಸುತ್ತೇನೆಂದು ಹೇಳಿದಿರಿ; ಆದರೆ ಯಾವ ರೂಪು ರೇಖೆಗಳನ್ನು, ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡು ಭರ್ತಿ ಮಾಡುತ್ತೀರಿ ?

ಶ್ರೀ ಭೀಮಣ್ಣ ಖಂಡ್ರೆ—ಮಾನ್ಯ ಅಧ್ಯಕ್ಷರೇ, ಮದ್ಯಪಾನ ನಿಷೇದದ ಬಗ್ಗೆ ಈ ಸರ್ಕಾರದ ಪಾಲಿಸಿ ಏನು ಎಂಬುದು ರಾಜ್ಯಪಾಲರ ಭಾಷಣದಲ್ಲೂ ಇಲ್ಲ, ಆಯವ್ಯಯದ ಪತ್ರದಲ್ಲೂ ಇಲ್ಲ ಆದ್ದರಿಂದ ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಈ ಬಗ್ಗೆ ಶ್ರೀ ಶಾಂತಮೂರ್ತಿಯವರು ಕೇಳಿದರೂ ಉತ್ತರಿಸಿಲ್ಲ.

ಸೀಲಿಂಗ್ ಲಿಮಿಟ್ ಬಗ್ಗೆ ತಮ್ಮ ನಿಲುವು ಏನು ? ಇವತ್ತು ಗ್ರಾಮಾಂತರ ಪ್ರದೇಶಗಳ ಬಗ್ಗೆ ಸೌಜನ್ಯತೆ ತೋರಿಸಿದ್ದೀರಿ ಸಂತೋಷ. ಆದರೆ ಅರ್ಬನ್ ಸೀಲಿಂಗ್ ಬಗ್ಗೆ ಒಂದು ಪದ ಕೂಡ ಹೇಳಲಿಲ್ಲ. ಈ ಪ್ರಶ್ನೆಯನ್ನು ಕೇಳಿದರೂ ಉತ್ತರ ಕೊಡಲಿಲ್ಲ. ಇವತ್ತು ಕೋಟ್ಯಾಂತರ ರೂಪಾಯಿಗಳ ಆಸ್ತಿ ಇದ್ದರೂ ಅದಕ್ಕೆ ಸೀಲಿಂಗ್ ಲಿಮಿಟ್ ಹಾಕಿಲ್ಲ. ತಮ್ಮದು ಒಳ್ಳೆಯ ಸರ್ಕಾರವೆಂದು ಹೇಳುತ್ತೀರಿ. ಆದರೆ ಇದರ ಬಗ್ಗೆ ಏನು ಧೋರಣೆ ತಾಳಿದ್ದೀರೆಂದು ಕೇಳುತ್ತೇನೆ. ಶ್ರೀ ಬಂಗಾರಪ್ಪ ಕಮಿಟಿ ವರದಿಯ ಪ್ರಕಾರ ಅನೇಕ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದೇವೆಂದು ಹೇಳಿದಿರಿ. ಉಳಿದದ್ದನ್ನು ಮುಂದೆ ಕೊಡುವುದಾಗಿ ಹೇಳಿದ್ದೀರಿ. ಬೆಟರ್ ಮೆಂಟ್ ಲೆವಿಯನ್ನು ವಸೂಲ್ಮಾಡಲಾಗುತ್ತಿತ್ತು; ಅದನ್ನು ಇವತ್ತು ಕೈಬಿಟ್ಟಿದ್ದೀರಿ; ಅದಕ್ಕೆ ನಾನು ಮೆಚ್ಚಿಗೆ ವ್ಯಕ್ತಪಡಿಸುತ್ತೇನೆ ಪಾರಿಟ್ ಪ್ರೈಸ್ ಬಗ್ಗೆ ಜನತಾ ಪಕ್ಷದ ಮ್ಯಾನಿಪೆಸ್ಟೋದಲ್ಲಿ ಹೇಳಿದ್ದೀರಿ; ಅಲ್ಲದೆ ಎಷ್ಟೋ ಭಾಷಣಗಳಲ್ಲಿ ಕೂಡ ಹೇಳಿದ್ದೀರಿ. ಪ್ಯಾರಿಟ್ ಪ್ರೈಸನ್ನು ಕೊಡುತ್ತೇವೆಂದು ಹೇಳಿರುವ ಬಗ್ಗೆ ತಮ್ಮ ಪಾಲಿಸಿ ಏನು ? ಕ್ರಾಪ್ ಇನ್‌ಶೂರೆನ್ಸ್ ಬಗ್ಗೆ ಏನು ಹೇಳುತ್ತೀರಿ? ಅದಕ್ಕೆ ರಿಸರ್ವ್ ಬ್ಯಾಂಕ್‌ನಿಂದ 3 ಪರ್ಸೆಂಟ್ ಕೊಟ್ಟರೆ ಸರ್ಕಾರ 3 ಪರ್ಸೆಂಟ್ ಕೊಡಬೇಕು ಅಲ್ಲಿಗೆ 6 ಪರ್ಸೆಂಟ್ ಆಗುತ್ತದೆ. ಯಾರ್ಯಾರಿಗೆ ಆ ಸೌಲಭ್ಯ ಬೇಕೋ ಅವರಿಗೆ ಕೊಡುತ್ತೇವೆಂದು ತಾವು ಹೇಳಬೇಕು. ಪ್ರಾಯೋಗಿಕವಾಗಿ 5-6 ತಾಲ್ಲೂಕುಗಳನ್ನು ತೆಗೆದುಕೊಂಡರೆ ಅದರಿಂದ ಇಡೀ ರಾಜ್ಯಕ್ಕೆ ಲಾಭ ಮಾಡಿದಂತಾಗುತ್ತದೆಯೆ? ಒಟ್ಟಿನಲ್ಲಿ ಪ್ಯಾರಿಟ್ ಪ್ರೈಸ್, ಬೆಳೆವಿಮೆ ಇಂಟರೆಸ್ಟ್ ಪರ್ಸೆಂಟೇಜ್, ಅರ್ಬನ್ ಪ್ರಾಪರ್ಟಿ ಸೀಲಿಂಗ್ ಲಿಮಿಟ್ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ --ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಳನ್ನು ತ್ವರಿತಗೊಳ್ಳಿಸುವ ಕಾರ್ಯಕ್ಕೆ 4 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಇಟ್ಟಿದ್ದೇವೆಂದು ಏನು ಹೇಳಿದ್ದೀರಿ ಇದು ಬಹಳ ಅನ್ಯಾಯವೆಂದು ಅನೇಕ ಜನ ಮಿತ್ರರು ಹೇಳಿದ್ದಾರೆ. ಈ ಬಗ್ಗೆ ಉತ್ತರ ಕೊಡತಕ್ಕ ಕಾಲದಲ್ಲಿ ಮುಖ್ಯಮಂತ್ರಿಗಳು ಇದು ಸತ್ಯಕ್ಕೆ ದೂರವಾದ ಮಾತು ಎಂದರು ಇದರ ಹಿನ್ನೆಲೆಯನ್ನು ಅವರ ಸಂಪುಟದ ಸಹೋದ್ಯೋಗಿಗಳು ಅವರಿಗೆ ಹೇಳಿಲ್ಲ. 1981ನೇ ನವೆಂಬರ್ 27 ರಂದು ಮೈಸೂರಿನಲ್ಲಿ ನಡೆದಂತಹ ಮಂತ್ರಿಮಂಡಲದ ಸಭೆಗೆ ಒಂದು ದಿವಸ ಮುಂಚಿತವಾಗಿ ಮೈಸೂರು ವಿಭಾಗದ 6 ಜಿಲ್ಲೆಯ ಶಾಸಕರನ್ನು ಅಂದಿನ ಮುಖ್ಯ ಮಂತ್ರಿಗಳು ಕರೆದು ದೀರ್ಘವಾಗಿ ಚರ್ಚೆ ಮಾಡಿದರು. ಅಂದು ನೀರಾವರಿ ಮಂತ್ರಿಗಳು ಕೂಡ ಹಾಜರಿದ್ದರು. ಆಗ ಏನು ತೀರ್ಮಾನ ಆಯಿತು ಎಂದರೆ ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಳನ್ನು, ಬೇರೆ ಯಾವ ಬಾಬುಗಳಿಗೆ ಹಣ ಕಡಿಮೆಯಾದರೂ ಅವನ್ನು ತ್ವರಿತಗೊಳಿಸಬೇಕೆಂದು ತೀರ್ಮಾನವಾಗಿತ್ತು. ಆ ಕಾಮಗಾರಿಗಳನ್ನು ಪೂರೈಸಿ ತಮಿಳ್ನಾಡಿನ ಜೊತೆ ಏನು ವ್ಯಾಜ್ಯ ಇದೆ ಅದನ್ನು ಜಾಗ್ರತೆ ಪರಿಹರಿಸಬೇಕೆಂಬ ದೃಷ್ಟಿಯಿಂದ ಆ ಒಂದು ತೀರ್ಮಾನದ ಹಿನ್ನೆಲೆಯಲ್ಲಿ 1982-83 ನೇ ಸಾಲಿನಲ್ಲಿ 12 ಕೋಟಿ ರೂಪಾಯಿಗಳನ್ನು ಹೆಚ್ಚು ಮಂಜೂರ್ಮಾಡಿದರು. ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. 1981-82 ರಲ್ಲಿ 28 ಕೋಟಿ ರೂಪಾಯಿಗಳು ಇದ್ದುದನ್ನು 1982-83 ರಲ್ಲಿ 12 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿ 40 ಕೋಟಿ ರೂಪಾಯಿಗಳನ್ನು ಮಾಡಬೇಕಾದರೆ ಅದರ ಉದ್ದೇಶ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ವರ್ಷ ನೀವು ಅದಕ್ಕೆ ಸರಿಸಮನಾಗಿ 60-65 ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕಾಗಿತ್ತು ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು.

12-20 P.M

ಒಂದು ವೇಳೆ ತಾವು ಇದೇ ಧಾಟಿಯಲ್ಲಿ 44 ಕೋಟಿ ರೂಪಾಯಿಗಳನ್ನು ವರ್ಷೇ ವರ್ಷೇ ಇಟ್ಟುಕೊಂಡು ಹೋದರೆ ಇನ್ನು 10-15 ವರ್ಷಗಳಾದರೂ ಕೂಡ ಈ ಕಾಮಗಾರಿಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ, ಮತ್ತು ನೀರಿನ ಪ್ರಯೋಜನವನ್ನೂ ಪಡೆಯುವುದಕ್ಕಾಗುವುದಿಲ್ಲ. ಅದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಿಕೊಳುತ್ತೇನೆ ರಾಷ್ಟ್ರೀಕೃತ ಬ್ಯಾಂಕಿನ ಪ್ರತಿಯೊಂದು ಶಾಖೆಯಲ್ಲಿ 5 ಜನ ನಿರುದ್ಯೋಗಿ ವಿದ್ಯಾವಂತರಿಗೆ ಸೌಲಭ್ಯ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ತಾವು ಆಯವ್ಯಯ ಪತ್ರದಲ್ಲಿ ಹೇಳಿದ್ದೀರಿ ತಮ್ಮ ಭಾಷಣದಲ್ಲಿ ಕೂಡ ಇದನ್ನು ಹೇಳಿದ್ದೀರಿ ರಾಷ್ಟ್ರೀಕೃತಬ್ಯಾಂಕುಗಳು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೆ ಎಂಬ ಅನುಮಾನ ನನಗೆ ಇದೆ ಮೊನ್ನೆ ನನಗೊಂದು ಕಹಿ ಅನುಭವ ಆಯಿತು. ಐ. ಆರ್. ಡಿ. ಲೋನ್ ಕೊಡಬೇಕಾದರೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖಾಂತರ ಡಿ. ಆರ್. ಡಿ. ಎಸ್. ನಿಂದ ಸಬ್ಸಿಡಿ ಅಮೌಂಟನ್ನು ಅವರಿಗೆ ಅಡ್ಜಸ್ಟ್ ಮಾಡುತ್ತಾರೆ ಆದರೆ ಸಬ್ಸಿಡಿ ಅಮೌಂಟ್ ಅಡ್ಜಸ್ಟ್ ಆಗಿ 6 ತಿಂಗಳು, 4 ತಿಂಗಳು, 3 ತಿಂಗಳಾದರೂ ಜನರಿಗೆ ಲೋನ್ ಕೊಡುತ್ತಿಲ್ಲ. ನನ್ನ ಕ್ಷೇತ್ರವಾದ ಕೆರೆಗೋಡಿನಲ್ಲಿ ವಿಜಯ ಬ್ಯಾಂಕ್ ಇದೆ. ಜನ ನಮ್ಮ ಹತ್ತಿರ ಬಂದು ಹೀಗಾಗಿದೆ ಎಂದಾಗ ವಿಜಯ ಬ್ಯಾಂಕಿನ ಮ್ಯಾನೇಜರ್ ಅವರಿಗೆ ನಾನು ಫೋನು ಮಾಡಿ ಏತಕ್ಕೆ ಹೀಗೆ ಮಾಡುತ್ತೀರಿ ಎಂದು ಕೇಳಿದರೆ ಇನ್ನೂ ಮೂರು ತಿಂಗಳು ಬೇಕು ಸಾರ್ ಎಂದು ಹೇಳಿದರು. ಸಬ್ಸಿಡಿ ಅಮೌಂಟ್ ಅಡ್ಜಸ್ಟ್ ಆಗಿ

ಮೂರು ತಿಂಗಳಾದರೂ ಸಾಲ ಕೊಡುವುದಕ್ಕೆ ಇನ್ನೂ ಮೂರು ತಿಂಗಳು ಕೇಳುತ್ತಾರೆ. ಈ ರೀತಿಯ ಧೋರಣೆ ಎಲ್ಲ ಬ್ಯಾಂಕುಗಳಲ್ಲೂ ಇದ್ದು, ಇದು ಬದಲಾವಣೆಯಾಗಬೇಕು. ಇದಕ್ಕೆ ಸರ್ಕಾರದವರು ಬಿಗಿಯಾದ ಕ್ರಮವನ್ನು ಕೈಗೊಳ್ಳಬೇಕು. ಇಲ್ಲದೇಹೋದರೆ ತಮ್ಮ ಆಯವ್ಯಯ ಪತ್ರದಲ್ಲಿ ತಿಳಿಸಿರುವಂತೆ ಉದ್ಯೋಗ ಸೌಲಭ್ಯ ಒದಗಿಸುವ ಯೋಜನೆ ಬರೀ ಪೇಪರ್‌ನಲ್ಲಿ ಮಾತ್ರ ಇರುತ್ತದೆ. ಜನತಾ ಹೌಸಿಂಗ್ ಸ್ಕೀಮಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾ 81-82ರಲ್ಲಿ 1 ಲಕ್ಷ ಮನೆ ಕಟ್ಟಿಸಬೇಕೆಂದಿದ್ದು 83-84ರಲ್ಲಿ ಇದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದರೆ 1983-84 ರಲ್ಲಿ ಒದಗಿಸಿರುವ ಹಣ ಹಳೇ ಬಾಕಿಗೇ ಸಾಕಾಗುತ್ತದೆಯೋ ಅಥವಾ 83-84 ರಲ್ಲಿ ಮನೆಗಳನ್ನು ಹೊಸದಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೋ ಎಂದು ತಿಳಿಸಬೇಕು. ಅವಕಾಶ ಇಲ್ಲದೇ ಹೋದರೆ ಅವಕಾಶ ಮಾಡುವುದಕ್ಕೆ ಸಾಧ್ಯವೇ ? ನಾವು ಜನರಿಗೆ ಹೇಳಿದ್ದೇವೆ. ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಹೇಳಿದರು.

ಶ್ರೀ ವಿ. ಎಲ್. ಪಾಟೀಲ್ — ಇದು ಭಾಷಣ ಆಯಿತು.

ಶ್ರೀ ಎಚ್. ಡಿ ಚೌಡಯ್ಯ.--ಇದು ಭಾಷಣ ಅಲ್ಲ. ಮಂತ್ರಿಗಳು ಮಾತನಾಡಿದರೆ ಭಾಷಣ ಅಲ್ಲ ನಾವು ಮಾತನಾಡಿದರೆ ಭಾಷಣ ಆಗುತ್ತದೆಯೇ ? ನಿಮ್ಮ ಹಾಗೆ ನಾವು ಜನರಿಂದ ಆರಿಸಿ ಬಂದಿರತಕ್ಕವರು ಇದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು ಮಾನ್ಯ ವಿ. ಎಲ್. ಪಾಟೀಲರಿಗೆ. ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ನಮಗೂ ಇದೆ. ತಾವು ದಯವಿಟ್ಟು ಆ ರೀತಿ ಇಂಟರಸ್ಟ್ ಮಾಡಬಾರದು. ನಾವು ಜನರಿಂದ ಮತ ಪಡೆದು ಬಂದಿರುವವರು.

ಶ್ರೀ ಬಿ. ಎಸ್. ಯಡಿಯೂರಪ್ಪ.-- ಭಾಷಣ ಮಾಡಬೇಡಿ ಎಂದು ಉಪಾಧ್ಯಕ್ಷರು ಎಲ್ಲರಿಗೂ ಹೇಳಿದ್ದಾರೆ. ಆ ಪ್ರಕಾರ ನಾವೂ ಹೇಳುತ್ತಿದ್ದೇವೆ.

ಶ್ರೀ ಎಚ್. ಡಿ. ಚೌಡಯ್ಯ --1983-84 ರಲ್ಲಿ ಹೊಸದಾಗಿ ಎಷ್ಟು ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಅಥವಾ ಸಾಧ್ಯವಿಲ್ಲ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು.

ಶ್ರೀ ಜಿ. ಎಂ ಕಾನಡೆ.--18 ಪರ್ಸೆಂಟ್ ಹಣವನ್ನು ಹರಿಜನರಿಗೆ ಏನು ಕೊಡುತ್ತಿದ್ದೀರಿ, ಅದು ನಿಜವಾಗಿ ಅವರಿಗೆ ಮುಟ್ಟುತ್ತಿಲ್ಲ

ಉಪಾಧ್ಯಕ್ಷರು.--ತಾವು ವಿವರಣೆ ಮಾತ್ರ ಕೇಳಬೇಕು. ಭಾಷಣ ಮಾಡಬಾರದು.

ಶ್ರೀ ಜಿ. ಎಂ. ಕಾನಡೆ.--ಅದನ್ನೇ ಕೇಳುತ್ತಿದ್ದೇನೆ. ಸಿರಸಿ ಮುನಿಸಿಪಾಲಿಟಿಯಲ್ಲಿ ಹರಿಜನರಿಗೆ ಖರ್ಚು ಮಾಡಬೇಕಾದ ಹಣ 4,90,000 ರೂಪಾಯಿಗಳಿವೆ. ಅದನ್ನು ಇವತ್ತಿನವರೆಗೂ ಖರ್ಚು ಮಾಡಿಲ್ಲ. ಈ ತರಹ ತಪ್ಪು ಮಾಡುವ ಮುನಿಸಿಪಾಲಿಟಿಯನ್ನು ಸರ್ಕಾರದವರು ಡಿಸಾಲ್ವ್ ಮಾಡಬೇಕು. ಹರಿಜನ ಹೆಸರಿನಲ್ಲಿ 18 ಪರ್ಸೆಂಟ್ ಹಣ ಪೇಪರ್‌ನಲ್ಲಿರುತ್ತದೆ. ಈ ರೀತಿ ಆಗಬಾರದು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಮಾನ್ಯ ಮುಖ್ಯಮಂತ್ರಿಗಳು ಸುಮಾರು ಮೂರು ತಾಸು ಉತ್ತರ ಕೊಟ್ಟಿದ್ದಾರೆ. ಅವರು ಮುಖ್ಯವಾಗಿ ಎರಡು ಮೂರು ಅಂಶಗಳನ್ನು ಸ್ಪಷ್ಟಪಡಿಸಬೇಕು. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡುತ್ತೇನೆಂದು ಹೇಳಿದ್ದಾರೆ. ಅದು ನಿಜವಾಗಿಯೂ ಸ್ವಾಗತಾರ್ಹ. ಆದರೆ ವೆಲ್‌ಫೇರ್ ಮೆಷರ್ಸ್ ಎಂದರೆ ಅವೆಲ್ಲಾ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಉದಾಹರಣೆಗೆ ವೃದ್ಧಾಪ್ಯವೇತನ, ಸ್ಕಾಲರ್‌ಷಿಪ್, ಇವೆಲ್ಲಾ ಅದರಲ್ಲೇ ಬರುತ್ತದೆ. ಎಕಾನಮಿ ಎಂಬ ಹೆಸರಿನಲ್ಲಿ ಈ ಕೆಲಸಗಳು ನಿಂತುಹೋಗಬಾರದು. ದೊಡ್ಡ ದೊಡ್ಡ ಯೋಜನೆಗಳನ್ನು ನೀವು ಮಾಡಬಹುದು. ಅವೆಲ್ಲಾ ಒಪ್ಪಿಕೊಳ್ಳುತ್ತೇವೆ. ಆದರೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ವೆಲ್‌ಫೇರ್ ಮೆಷರ್ಸ್ ಕೂಡ ನಡೆಯಬೇಕಾಗುತ್ತದೆ, ಇದಕ್ಕೆ ಯಾವ ರೀತಿಯಾಗಿ ಮಾಡುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕು. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಒಂದು ಮಾತು ಹೇಳಿದ್ದಾರೆ. ಹೋದಸಾರಿ ಆ ಸರ್ಕಾರ 54 ಕೋಟಿ ರೂಪಾಯಿ ಇಟ್ಟಿದ್ದು ಕೊನೆಗೆ 10 ಕೋಟಿ ರೂಪಾಯಿ ಕೊಟ್ಟಿದೆ ಎಂದು ಹೇಳಿದ್ದಾರೆ. ಈ ವರ್ಷ ತಾವು 51 ಕೋಟಿ ರೂಪಾಯಿ ಇಟ್ಟಿದ್ದೀರಿ. ಅಂದರೆ ಇಟ್ಟಿರತಕ್ಕ ಬಜೆಟ್ಟಿನಲ್ಲಿ ಮೂರು ಕೋಟಿ ರೂಪಾಯಿ ಕಡಿಮೆಯಾಯಿತು. ಹೀಗಾದರೆ ಇದಕ್ಕೆ ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು. ಸ್ಟೈಫಂಡರಿ ಪದವೀಧರರಿಗೆ ತಾವು ಏನು ಮಾಡುತ್ತೀರಿ ? ಅವರನ್ನು ಕನ್‌ಫರ್ಮ್ ಮಾಡುತ್ತೀರೋ ಅಥವಾ ಏನು ಮಾಡುತ್ತೀರಿ ? ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಪರವಾಗಿ ಹೇಳಿದ್ದಾರೆ, ನಿರುದ್ಯೋಗಿ ಪದವೀಧರರಿಗೆ ಸಬ್ಸಿಸ್ಟೆನ್ಸ್ ಕೊಡುತ್ತೀರಾ ? ಈ ಸ್ಕೀಮನ್ನು ಮುಂದುವರೆಸುತ್ತೀರೊ ಅಥವಾ ನಿಲ್ಲಿಸುತ್ತೀರೋ ಹೇಗೆ ? ಸ್ಟೈಫಂಡರಿ ಪದವೀಧರರು ಚಳುವಳಿ ಮಾಡುತ್ತಿದ್ದಾರೆಂದು ಅವರನ್ನು ಖಾಯಂ ಮಾಡಿದರೆ ಮುಂದೆ ಬರುವ ಲಕ್ಷಾಂತರ ಪದವೀಧರರಿಗೆ ಏನು ಯೋಜನೆ ಹಾಕಿಕೊಳ್ಳುತ್ತೀರಿ ? ಹಣ ಯಾವ ರೀತಿ ಒದಗಿಸುತ್ತೀರಿ ?

ಉಪಾಧ್ಯಕ್ಷರು.—ತಾವು ಪ್ರಶ್ನೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಬಹಳ ಮುಖ್ಯವಾದುದು. ಕೆಲವು ಜನ ಚಳುವಳಿ ಮಾಡುತ್ತಾರೆಂದು ಖಾಯಂ ಮಾಡಿ ಈ ಯೋಜನೆಯನ್ನೇ ಕೈ ಬಿಡಬಾರದು. ಸ್ಟೈಫಂಡರಿಯಲ್ಲಿ ರಿಸರ್ವೇಷನ್ ಇಲ್ಲ ಯಾರು ಎನ್‌ರೋಲ್ ಮಾಡಿದರೂ ಕೆಲಸ ಕೊಡಬೇಕು ಎಂದು ನಿಯಮವಿದೆ. ಆದರೆ ಖಾಯಂ ಮಾಡುವಾಗ ಇದನ್ನೆಲ್ಲಾ ನೋಡಬೇಕಾಗಿದೆ. ಆದ್ದರಿಂದ ಈ ಯೋಜನೆ ಬಗ್ಗೆ ಏನು ಮಾಡುತ್ತೀರ ಎಂಬುದನ್ನು ಹೇಳಿ. ನಾನು ಮಾತನಾಡುವಾಗ ಹೇಳಿದ ಪದವನ್ನು ಪ್ರೊಸೀಡಿಂಗ್ಸ್‌ನಿಂದ ತೆಗೆದುಹಾಕಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಬಗ್ಗೆ ನಾನು ಕೇಳಿದ ಉದ್ದೇಶ ಇಷ್ಟೆ. ತಾವು ಒಂದು ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿ, ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ನಾನು-ಕಾಂಗ್ರೆಸ್ ಮುಖ್ಯಮಂತ್ರಿಗಳ ಸಭೆಯನ್ನು.....

ಶ್ರೀ ಪಿ. ರಾಮದೇವ್.—ಅದೆಲ್ಲಾ ಮೊದಲೇ ಹೇಳಿದರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಶ್ರೀ ರಾಮದೇವ್ ಅವರಿಗೆ ಏನಾದರೂ ಹುದ್ದೆ ಕೊಟ್ಟರೆ ನಮಗೆ ಅವರ ಕಾಟ ಕಡಿಮೆಯಾಗುತ್ತದೆ. ನಾನು ಏನು ಹೇಳುತ್ತಿದ್ದೇನೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ರಾಜಕೀಯ ದುರುದ್ದೇಶದಿಂದ ಕೂಡಿರತಕ್ಕ ಸಭೆ ಎಂದು ನಾನು ಕರೆಯುತ್ತೇನೆ. 8ನೇ ಆರ್ಥಿಕ ಆಯೋಗದ ಮುಂದೆ ಯಾವ ರೀತಿ ರೆಪ್ರಸೆಂಟೇಷನ್ ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡುವುದಕ್ಕೆ ಸಭೆ ಕರೆದಿದ್ದೆವು ಎಂದು ಹೇಳಿದ್ದೀರಿ. ಆದರೆ ಕೇವಲ ಆ ಬಗ್ಗೆ ಮಾತ್ರ ಚರ್ಚೆ ಮಾಡಿಲ್ಲ ಈಗಾಗಲೇ ಹೇಳಿದ ಹಾಗೆ ವಿದ್ಯುಚ್ಛಕ್ತಿ, ನೀರಿನ ವಿಷಯವೂ ಅದರಲ್ಲಿ ಚರ್ಚೆಯಾಗಿರಬಹುದು. ಆದರೆ ಈ ಸಭೆಯ ಉದ್ದೇಶ ಕೇಂದ್ರ ಸರ್ಕಾರದ ವಿರುದ್ಧ ಒಳಸಂಚು ಮಾಡುವುದೋ ಹೇಗೆ ? ನಾನ್-ಕಾಂಗ್ರೆಸ್ ಮುಖ್ಯಮಂತ್ರಿಗಳೆಲ್ಲಾ ಸೇರಿ ಕೇಂದ್ರ ಸರ್ಕಾರವನ್ನು ಉರುಳಿಸಬೇಕೆಂದಿದ್ದಾರೇನೋ ಎಂಬ ಸಂಶಯ ಬರುತ್ತಿದೆ. ಅದನ್ನು ತಾವು ಸ್ಪಷ್ಟಪಡಿಸಬೇಕು

ಶ್ರೀ ಎಸ್. ರಾಮಚಂದ್ರರಾವ್.—ನಾನು ನಿನ್ನೆ ಆಯವ್ಯಯ ಭಾಷಣದಲ್ಲಿ ಬಹಳ ಪ್ರಾಮುಖ್ಯವಾದ ವಿಷಯವನ್ನು ಹೇಳಿದ್ದೆ. ರಾಜ್ಯಸರ್ಕಾರ ನಡೆಸುವ 61 ಕಮರ್ಷಿಯಲ್ ಅಂಡ್ ಇಂಡಸ್ಟ್ರಿಯಲ್ ಎಸ್ಟಾಬ್ಲಿಷ್‌ಮೆಂಟನಲ್ಲಿ 210 ಕೋಟಿ ರೂಪಾಯಿಗಳು ನಷ್ಟ ಆಗುವುದನ್ನು ತಪ್ಪಿಸಬೇಕು ಎಂದು ಹೇಳಿದೆ, ಇದರ ಬಗ್ಗೆ ಒಂದು ಮಾತನ್ನೂ ತಾವು ಹೇಳಲಿಲ್ಲ ನಮ್ಮ ರಾಜ್ಯ ಸರ್ಕಾರ ನಡೆಸುತ್ತಿರುವ 61 ಕಮರ್ಷಿಯಲ್ ಮತ್ತು ಇಂಡಸ್ಟ್ರಿಯಲ್ ಎಸ್ಟಾಬ್ಲಿಷ್‌ಮೆಂಟ್‌ಗಳು ನಷ್ಟ ಹೊಂದುವುದನ್ನು ತಪ್ಪಿಸಿ ಅವುಗಳನ್ನು ಲಾಭದಾಯಕವಾಗಿ ನಡಸುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇದಕ್ಕೆಲ್ಲಾ ತಾವು ಉತ್ತರ ಕೊಡಬೇಕು.

12-30 P.M.

ಶ್ರೀ ಬೈರಪ್ಪಾಜಿ (ತುರುವೇಕೆರೆ).—ಅಧ್ಯಕ್ಷರೇ, ಕಾವೇರಿ ಜಲಾನಯನ ಪ್ರದೇಶಕ್ಕೆ 44 ಕೋಟಿ ರೂಪಾಯಿಗಳನ್ನು ಕೊಡಲಾಗಿದೆಯೆಂದು ಹೇಳಿದರು. ಈ ಒಂದು ಜಲಾಶಯದಿಂದ ತುಮಕೂರು ಭಾಗಕ್ಕೆ ಬರತಕ್ಕ ಎಡದಂಡೆ ನಾಲೆ ಬಗ್ಗೆ 3 ಕೋಟಿ ಚಿಲ್ಲರೆ ಹಣವನ್ನು ಒದಗಿಸಿದ್ದೇವೆಂದು ಹೇಳಿದರು. ಈ ಎಡದಂಡೆ ನಾಲೆಯ ಅಂದಾಜು ಸುಮಾರು 95 ಕೋಟಿ ರೂಪಾಯಿಗಳು. ಈ ಒಂದು ನಾಲೆಗೆ ಸುಮಾರು 10 ಕಿಲೋಮೀಟರಿನಷ್ಟು ಸುರಂಗ ಮಾರ್ಗ ಬರುತ್ತದೆ ; ಮತ್ತು 5 ಕಿ. ಮೀಟರ್‌ನಷ್ಟು ಕ್ರಾಸ್‌ಕಟ್ ಬರುತ್ತದೆ. ಸುಮಾರು 220 ಕಿ. ಮೀಟರ್ಸ್ ಛಾನಲ್ ಬರುತ್ತದೆ. ಇದಕ್ಕೆ 95 ಕೋಟಿ ರೂಪಾಯಿಗಳು ಬೇಕಾಗಿದ್ದು ಈ ಬಗ್ಗೆ ಈ ವರ್ಷ ಕೇವಲ 3 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಇದಕ್ಕೆ 95 ಕೋಟಿ ರೂಪಾಯಿ ಖರ್ಚು ಮಾಡಿ ತುಮಕೂರು ಮತ್ತು ನಾಗಮಂಗಲದ ಭಾಗಕ್ಕೆ ನೀರನ್ನು ಒದಗಿಸಬೇಕಾದರೆ ಸುಮಾರು 30 ವರ್ಷಗಳೇ ಬೇಕಾಗುತ್ತದೆ. ಆದ್ದರಿಂದ ಇದನ್ನು 30 ವರ್ಷಗಳ ಕಾಲದಲ್ಲಿ ಮುಗಿಸಬೇಕಾದರೆ ಎಷ್ಟು ಪಂಚವಾರ್ಷಿಕ ಯೋಜನೆಗಳು ಬೇಕಾಗುತ್ತವೆ ? ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಎಡದಂಡೆ ಕಾಲುವೆಯನ್ನು 5 ವರ್ಷಗಳಲ್ಲಿ ಹಣ ಪೂರೈಸಿ ಮುಗಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇದನ್ನು ಸುಮಾರು 5 ವರ್ಷಗಳಲ್ಲಿ ಪೂರ್ತಿಗೊಳಿಸುತ್ತೇವೆಂದು ಹಿಂದಿನ ಸರ್ಕಾರ ಹೇಳಿತ್ತು ; ತಾವೂ ಕೂಡಾ ಹೇಳಿದ್ದೀರೆಂದು ಕಾಣುತ್ತದೆ. ಆದ್ದರಿಂದ ಎಡದಂಡೆ ನಾಲೆಯನ್ನು 5 ವರ್ಷಗಳಲ್ಲಿ ಪೂರ್ತಿಗೊಳಿಸುವುದಕ್ಕೆ ತಾವು ಹಣ ಕೊಡತಕ್ಕ ಏರ್ಪಾಡನ್ನು ಮಾಡುತ್ತೀರಾ ?

ಇನ್ನು ಅನುಬಂಧ-1ರಲ್ಲಿ ರೈತರಿಗೆ ಅನೇಕ ಸೌಕರ್ಯಗಳನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ. ಮುಖ್ಯವಾಗಿ

"An incentive subsidy by Government to the extent of 5% of the value of own agricultural produce marketed by farmers through the Primary Agricultural Credit Societies if the proceeds are utilised to clear their eo-operative loans."

ಎಂದು ಹೇಳಿದ್ದೀರಿ 'ಇದು ಎಷ್ಟು ವರ್ಷಗಳ ಯೋಜನೆ ಇದೆ ಸ್ವಾಮಿ? ಇದು ಏನಾದರೂ ಕಾರ್ಯರೂಪಕ್ಕೆ ಬಂದಿದೆಯೇ ಸ್ವಾಮಿ? ಈ ಬಗ್ಗೆ ತಾವು 5 ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದೀರಿ ಯಾವ ರೈತ ಇಲ್ಲಿಯವರೆವಿಗೂ ತಾನು ಬೆಳೆದ ರಾಗಿ, ಭತ್ತ ಅಥವಾ 'ಏನೊಂದು ಪದಾರ್ಥಗಳನ್ನು ಪ್ರೈಮರಿ ಸೊಸೈಟಿಗಳಿಗೆ ತಂದು ಕೊಟ್ಟಿದ್ದಾನೆ. ಒಂದು ವೇಳೆ ತಂದು ಕೊಟ್ಟರೂ ಕೂಡಾ ಅನೇಕ ಸಂದರ್ಭಗಳಲ್ಲಿ ಸೊಸೈಟಿಯವರು ಹಣಕೊಡದಿರುವುದರಿಂದ ಧಾನ್ಯವನ್ನು ವಾಪಸ್ ತೆಗೆದುಕೊಂಡು ಹೋಗಿರುವ ನಿದರ್ಶನಗಳೂ ಇವೆ. ಇದು ಎಂದೆಂದೂ ಕಾರ್ಯಗತ ಆಗಿಲ್ಲ, ಹಾಗೂ ಕಾರ್ಯರೂಪಕ್ಕೆ ಬಂದಿಲ್ಲವಾದ್ದರಿಂದ ಈ ಬಗ್ಗೆ ಮತ್ತೆ ಏಕೆ 5 ಕೋಟಿ ರೂಪಾಯಿ ಒದಗಿಸಿದ್ದೀರೆಂದು ತಾವು ಸ್ಪಷ್ಟೀಕರಣ ನೀಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ. ಎಚ್. ಗಂಗಾಧರನ್ :—ಅಧ್ಯಕ್ಷರೇ, ಸ್ಟೈಪೆಂಡರೀ ಪಧವೀಧರರ ಸೇವೆಯನ್ನು ಮುಂದುವರಿಸಿದ್ದರ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಇವರಿಗೆ ಏನು 200 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೀರೋ ಇದನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಲು ಸಾಧ್ಯವಿಲ್ಲವೇ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಎರಡನೆಯದಾಗಿ, ರೇಷ್ಮೆ ಬಗ್ಗೆ ಹೇಳುವುದಾದರೆ ಕೈಮಗ್ಗ ಹಾಗೂ ಪವರ್ ಮಗ್ಗದ ಸಿಲ್ಕ್‌ಗೆ 2 ಪರ್ಸೆಂಟ್ ವಹಿವಾಟ ತೆರಿಗೆ ಕೊಡಬೇಕೆಂದು ಇದೆ. ಆದರೆ ತಮಿಳುನಾಡು, ಆಂಧ್ರದಿಂದ ಬರುವ ಬಟ್ಟೆಗೆ ಈ ಟ್ಯಾಕ್ಸ್ ಇಲ್ಲದಿರುವುದರಿಂದ ಆ ಬಟ್ಟೆ ಕೊಂಡು ಹೆಚ್ಚು ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಹೊರಗಿನಿಂದ ಬರುವ ಬಟ್ಟೆಗೆ ಹೆಚ್ಚು ಟ್ಯಾಕ್ಸ್ ಹಾಕಿ ನಮ್ಮ ಬಟ್ಟೆಗೆ ಟ್ಯಾಕ್ಸ್ ವಜಾ ಮಾಡಿದರೆ ಇದರಿಂದ ಆದಾಯ ಜಾಸ್ತಿಯಾಗುತ್ತದೆ. ಈ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ವೃತ್ತಿ ತೆರಿಗೆ ರದ್ದಿಯಾತಿಯನ್ನು 600 ರೂಪಾಯಿಗಳಿಂದ 1,200 ರೂಪಾಯಿಗಳವರೆಗೆ ಏರಿಸಿರುವುದು ಬಹಳ ಸಂತೋಷದ ವಿಚಾರ ಇದನ್ನು ನಾನು ಅಭಿನಂದಿಸುತ್ತೇನೆ. ಆದರೆ ಕೃಷಿ ಕಾರ್ಮಿಕರ ಬಗ್ಗೆ ಯಾವ ಒಂದೂ ಅನುಕೂಲವನ್ನೂ ಮಾಡಿಲ್ಲ. ಕೃಷಿ ಕಾರ್ಮಿಕರ ಹೆಣ್ಣುಮಕ್ಕಳ ಬಗ್ಗೆ ನಾನು ಹಿಂದಿನ ಸರ್ಕಾರ ಇದ್ದಾಗಲೂ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಸರ್ಕಾರಿ ಕಛೇರಿಗಳಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಹೆಣ್ಣುಮಕ್ಕಳಿಗೆ ಹೆರಿಗೆ ರಜದ ಜೊತೆಗೆ ಭತ್ಯ ಎಲ್ಲಾ ಸಿಗುತ್ತದೆ. ಆದರೆ ಕೃಷಿ ಕಾರ್ಮಿಕರಿಗೆ ಈ ಅನುಕೂಲ ಇಲ್ಲ. ಕೃಷಿ ಕಾರ್ಮಿಕರ ಮನೆಯಲ್ಲಿ ಇವತ್ತು ದಾಸ್ತಾನು ಇರುವುದಿಲ್ಲ. ಆ ದಿನಸ ಅವರು ಸಂಪಾದನೆ ಮಾಡಿದನ್ನು ಆ ದಿನ ಅವರು ತಿನ್ನಬೇಕಾಗುತ್ತದೆ. ಆದ್ದರಿಂದ ಹೆರಿಗೆ ಆಗತಕ್ಕ ಕೃಷಿ ಕಾರ್ಮಿಕ ಹೆಣ್ಣು ಮಕ್ಕಳಿಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಹಾಯ ಮಾಡಿದರೆ ಕೃಷಿ ಕಾರ್ಮಿಕ ಹೆಣ್ಣುಮಕ್ಕಳಿಗೆ ಸಹಾಯವಾಗುತ್ತದೆ. ನಾವು ಬಡವರ ಜೊತೆ ಇದ್ದವರು. ಬಡವರ ಸಮಸ್ಯೆ ಏನು ಎಂಬುದು ನಮಗೆ ಗೊತ್ತು. ಇವತ್ತು ಕೃಷಿಕಾರ್ಮಿಕ ಕುಟುಂಬದಲ್ಲಿ ಒಬ್ಬ ಹೆಣ್ಣು ಮಗಳಿಗೆ ಹೆರಿಗೆ ಯಾದರೆ ಅಲ್ಲಿನ ಚಿಕ್ಕ ಮಕ್ಕಳು ಹೊಟ್ಟೆಪಾಡಿಗೆ ಭಿಕ್ಷೆ ಬೇಡಲು ಹೋಗುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆ? ಇವತ್ತು ದವಸಧಾನ್ಯಗಳ ಹಾಗೂ ಆಹಾರ ಪದಾರ್ಥಗಳ ಮೇಲಿನ ಕರವನ್ನು ಕಡಿಮೆ ಮಾಡಿದ್ದೀರಿ. ಆದರೆ ಅಕ್ಕಿಯ ಬಗ್ಗೆ ಏನೂ ಮಾಡಿಲ್ಲ ಅಕ್ಕಿಯನ್ನು ಸದಾ ಸಾಮಾನ್ಯ ಜನರು ಬಳಸುತ್ತಾರೆ. ಆದ್ದರಿಂದ ಅಕ್ಕಿಯ ಮೇಲೆ ಇರುವ ದರವನ್ನು ಕಡಿಮೆ ಮಾಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೇ, ರೇಷ್ಮೆ ವ್ಯವಸಾಯ ಮಾಡತಕ್ಕ ಪ್ರದೇಶದಲ್ಲಿ ಅದರಲ್ಲೂ ರೇಷ್ಮೆ ಗೂಡನ್ನು ಬೆಳೆಯುವ ಸ್ಥಳಗಳಲ್ಲಿ ಹೆಚ್ಚು ಪ್ರದೇಶದಲ್ಲಿ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಕೆಲವು ನಿಬಂಧನೆಗಳು ಇರುತ್ತವೆ. ಆದರೂ ಅವರು ಈ ವ್ಯವಸಾಯವನ್ನು ಅವಶ್ಯವಾಗಿ ಮಾಡಬೇಕಾಗಿದೆ. ರೇಷ್ಮೆಯನ್ನು ಹೆಚ್ಚು ಬೆಳೆಯಬೇಕಾದರೆ ಅದರ ಹೊಟ್ಟೆ ಕೃಷಿಯ ಯೋಗಕ್ಷೇಮವನ್ನು ಬಹಳ ಮುತವರ್ಜಿಯಿಂದ ನೋಡಿಕೊಳ್ಳಬೇಕು. ಇದನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವಕಾಶ ಇಲ್ಲದಿರುವುದರಿಂದ ರೇಷ್ಮೆಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಆ ಪ್ರದೇಶದಲ್ಲಿ ಸ್ಥಾಪನೆ ಮಾಡಿ, ಆದರಲ್ಲಿ ರೇಷ್ಮೆ ವ್ಯವಸಾಯಗಾರರ ಮಕ್ಕಳಿಗೇ ಉದ್ಯೋಗವನ್ನು ಒದಗಿಸುವ ಒಂದು ಯೋಜನೆಯನ್ನು ಹಾಕಬೇಕು.

ಇನ್ನು ಎರಡನೆಯದಾಗಿ ಖಾಸಗೀ ಮೆಡಿಕಲ್ ಹಾಗೂ ಎಂಜಿನಿಯರ್ ಕಾಲೇಜುಗಳು ಏನಿವೆ ಇವುಗಳು ಕಾನೂನು ಪ್ರಕಾರ ರಿಜಿಸ್ಟರ್ ಆಗಿರತಕ್ಕ ಸಂಸ್ಥೆಗಳು. ಈ ಕಾಲೇಜುಗಳಲ್ಲಿ ಕಳೆದ ವರ್ಷ ಎಂದರೆ ಚುನಾವಣೆಗೆ ಮುಂಚಿತವಾಗಿ ಪ್ರತಿಯೊಂದು ಕಾಲೇಜುಗಳಲ್ಲಿ 10 ರಿಂದ 20 ಲಕ್ಷದವರೆಗೆ ಖರ್ಚು ಹಾಕಿ ಅಗ ಇದ್ದ ಸರ್ಕಾರದ ಚುನಾವಣಾ ಖರ್ಚಿಗೋಸ್ಕರ ಒದಗಿಸಿದ್ದಾರೆಂಬ ವಿಷಯವನ್ನು ಕೇಳಿದ್ದೇನೆ. ಇದು ನಿಜವೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರಣೆ ನಡೆಸಿ ಆ ಬಗ್ಗೆ ವಿಷಯವನ್ನು ಸಭೆಯ ಮುಂದೆ ಇಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಜಿ. ಸತ್ಯನಾರಾಯಣ.--ಅಧ್ಯಕ್ಷರೇ, ಮದ್ಯ ತಯಾರಿಕೆ ಸಂಸ್ಥೆಗಳ ವರಮಾನಕ್ಕೆ ತಕ್ಕಂತೆ ಲೈಸನ್ಸ್ ಶುಲ್ಕ ಕೊಡುವ ಬಗ್ಗೆ ಅನುಬಂಧ-4ರಲ್ಲಿ ಹೇಳಲಾಗಿದೆ. ಮದ್ಯ ತಯಾರಿಕೆ ಸಂಸ್ಥೆಗಳಿಗೆ ಪ್ರಸ್ತಾಪಿಸಿದ ವಾರ್ಷಿಕ ಲೈಸನ್ಸ್ ಶುಲ್ಕ 15,000 ರೂಪಾಯಿಗಳು. ಆದರೆ ಚಿಲ್ಲರೆ ಮಾರಾಟ ಲೈಸನ್ಸುಗಳಿಗೆ 18,000 ರೂಪಾಯಿಗಳನ್ನು ಹಾಕಿದ್ದಾರೆ. ಬಾರ್ ಲೈಸೆನ್ಸ್‌ಗಳಿಗೆ 20,000 ರೂಪಾಯಿ ಹಾಕಿದ್ದಾರೆ. ತಾವು ಮದ್ಯ ತಯಾರು ಮಾಡುವ ಸಂಸ್ಥೆಗಳಿಗೆ ಕಡಿಮೆ ಶುಲ್ಕ ಹಾಕಿ ಮಾರಾಟ ಮಾಡುವವರಿಗೆ ಹೆಚ್ಚು ಶುಲ್ಕ ಹಾಕಿರುವುದು ಸರಿಯಲ್ಲ. ಆದ್ದರಿಂದ ಮದ್ಯ ತಯಾರಿಕೆಮಾಡುವ ಸಂಸ್ಥೆಗಳಿಗೂ ಹೆಚ್ಚು ಶುಲ್ಕವನ್ನು ಹಾಕಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ಹೆಚ್. ಗಂಗಾಧರನ್ —ಎಕ್ಸೈಜ್ ಹರಾಜನ್ನು ತಾಲ್ಲೂಕು ಮತ್ತು ಅಂಗಡಿವಾರು ಮಾಡುವ ಬಗ್ಗೆ ವಿವರಣೆ ಕೊಡಬೇಕೆಂದು ಹೇಳುತ್ತೇನೆ. ಇದು ಸರ್ಕಾರಕ್ಕೆ ಹೆಚ್ಚು ಆದಾಯ ತರತಕ್ಕಂಥ ಒಂದು ಬಾಬು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ಮಲಪ್ರಭಾ ಯೋಜನೆಯನ್ನು 1984-85 ರೊಳಗೆ ಮುಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ? ನಿರುದ್ಯೋಗಿ ಪದವೀಧರರ ಖಾಯಂ ನೇಮಕಾತಿ ಬಗ್ಗೆ ವಿಶೇಷ ನೇಮಕಾತಿ ನಿಯಮಗಳನ್ನು ಮಾಡುತ್ತೀರಾ ?

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಬಿತ್ತನೆ ಬೀಜಗಳಿಗೂ ಮಾರಾಟ ತೆರಿಗೆಯಿಂದ ವಿನಾಯಿತಿ ಕೊಡುತ್ತೀರಾ ?

ಶ್ರೀ ಜಿ. ನಾರಾಯಣ್ ಕುಮಾರ್.—ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 15 ರಿಂದಲೇ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಿರುವುದು ಸಂತೋಷ. ಆದರೆ ಇದರ ಜಾರಿಗಾಗಿ ಹೆಚ್ಚಿನ ಹಣವನ್ನು ಆಯವ್ಯಯದಲ್ಲಿ ಇಟ್ಟಿಲ್ಲ. ಕನ್ನಡ ಭಾಷೆ ಬೆಳವಣಿಗೆಗಾಗಿ ಕನಿಷ್ಠ 25 ಕೋಟಿ ರೂಪಾಯಿಗಳನ್ನು ಎತ್ತಿಡಬೇಕೆಂದು ಸೂಚಿಸುತ್ತೇನೆ. ಇದರ ಜಾರಿಗಾಗಿ ಒಂದು ವಿಶೇಷವಾದ ಸಮಿತಿಯನ್ನು ನೇಮಕ ಮಾಡಬೇಕು. ಇನ್ನು ಮುಂದೆ ಇಂಗ್ಲೀಷ್ ಶಾಲೆಗಳಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದರೂ ನಾಯಿಕೊಡಗಳಂತೆ ಇಂಗ್ಲೀಷ್ ಶಾಲೆಗಳು ಬೆಳೆಯುತ್ತಿರುವುದಕ್ಕೆ ಕಾರಣವೇನು ? ಕನ್ನಡ ನಾಡಿಗಾಗಿ ದುಡಿದ ಕೆಂಗಲ್ ಹನುಮಂತಯ್ಯನವರು ಮತ್ತು ದೇವರಾಜ ಅರಸುರವರ ಪ್ರತಿಮೆಗಳನ್ನು ವಿಧಾನ ಸೌಧದ ಮುಂದಿಡಬೇಕು. ನಿರುದ್ಯೋಗಿ ಪದವೀಧರರ ಮೇಲೆ ಗದಾ ಪ್ರಹಾರ ಮಾಡದೇ, ಅವರ ಬೇಡಿಕೆಗಳನ್ನು ಮಾನವೀಯತೆಯಿಂದ ಪರಿಶೀಲನೆ ಮಾಡಿ ಅವರಿಗೆ ಖಾಯಂ ಉದ್ಯೋಗ ದೊರಕಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಸ್ವಾಮಿ, ಚಿತ್ರದುರ್ಗ ಜಿಲ್ಲೆ ಬರಗಾಲ ಪೀಡಿತ ಪ್ರದೇಶ. ದಾವಣಗೆರೆ ಮತ್ತು ಹರಿಹರ ತಾಲ್ಲೂಕು ಬಿಟ್ಟರೆ ಇನ್ನುಳಿದ ತಾಲ್ಲೂಕುಗಳಲ್ಲಿ ಜನಗಳಿಗೆ ಆಹಾರವಾಗಲೀ, ದನಕರುಗಳಿಗೆ ಮೇವಾಗಲೀ ದೊರೆಯುತ್ತಿಲ್ಲ. ಈ ತಾಲ್ಲೂಕುಗಳ ಪರಿಹಾರಕ್ಕಾಗಿ ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂಬ ಒತ್ತಾಯ ಬಹಳ ಹಿಂದಿನಿಂದಲೂ ಇದೆ ಈ ಆಯವ್ಯಯದಲ್ಲಿ ಅದರ ಬಗ್ಗೆ ಪ್ರಸ್ತಾಪ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಕಾಲದಲ್ಲಾದರೂ ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ನಾರಾಯಣಗೌಡ.-- ಮಾನ್ಯ ಮುಖ್ಯ ಮಂತ್ರಿಗಳು ಕೆಲವೊಂದು ವರ್ಗಗಳಿಗೆ ಅನುಕೂಲವಾಗುವಂತೆ ವೃತ್ತಿ ತೆರಿಗೆಯಲ್ಲಿ ವಿನಾಯಿತಿ ಕೊಟ್ಟಿದ್ದಾರೆ. ಪೂರಾ ವಿನಾಯಿತಿ ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ ? ಒಂದು ಹೆಕ್ಟೇರ್ ಕಾಫಿ ಬೆಳೆಗಾರರಿಗೆ ವಿನಾಯಿತಿ ಕೊಟ್ಟಿದ್ದೀರಿ ? ಆದರೆ 10 ಎಕರೆ ಕಾಫಿ ತೋಟ ಹೊಂದಿರುವವರು ಬಡವರ ಪಟ್ಟಿಯಲ್ಲಿಯೇ ಬರುತ್ತಾರೆ. ಆದ್ದರಿಂದ 10 ಎಕರೆ ವರೆವಿಗೂ ವೃತ್ತಿ ತೆರಿಗೆ ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ. ವಿ ತಿಪ್ಪಯ್ಯ — ಹರಿಜನ ಮಕ್ಕಳು ಉನ್ನತ ವ್ಯಾಸಂಗದಲ್ಲಿ ಹೆಚ್ಚು ಅಂಕಗಳನ್ನು

ಪಡೆದು ತೇರ್ಗಡೆಯಾದವರಿಗೆ ನೇರ ನೇಮಕಾತಿಯಲ್ಲಿ ನೂರು ಜನರಿಗೆ ಅವಕಾಶ ಕೊಟ್ಟಿರುವುದು ಸ್ವಾಗತಾರ್ಹ. ಇದನ್ನು 5 ಕ್ಕೆ ಏರಿಸಿ ಪಂಚಮ ಎನ್ನುವ ಹೆಸರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಹರಿಜನರ ಹಾಸ್ಟೆಲುಗಳಿಗೆ ಮತ್ತು ಜನರಲ್ ಹಾಸ್ಟೆಲುಗಳಿಗೆ ಕೊಡತಕ್ಕ ವೇತನದಲ್ಲಿ ತಾರತಮ್ಯ ಇದೆ. ಇದನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. 15--20 ವರ್ಷಗಳಿಂದ ಹಂಗಾಮಿ ಸಾಗುವಳಿ ಮಾಡಿಕೊಂಡು ಬಂದಿರುವ ಹರಿಜನ ಕುಟುಂಬಗಳಿಗೆ ಕೂಡಲೇ ಸಾಗುವಳಿ ಚೀಟಿ ಕೊಟ್ಟು ಕಾಯಂಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಚನ್ನಬಸವನ ಗೌಡ.--ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯಮಂತ್ರಿಗಳು ರಾಗಿ ಮತ್ತು ಜೋಳದ ಮೇಲಿನ ತೆರಿಗೆಯನ್ನು ಶೇಕಡಾ 4 ರಿಂದ 2ಕ್ಕೆ ಇಳಿಸಲಾಗುವುದು ಎಂದು ಹೇಳಿದ್ದಾರೆ. ಇದನ್ನು ನವಣೆ ಮತ್ತಿತರ ದ್ವಿದಳ ಧಾನ್ಯಗಳಿಗೂ ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಗ್ರ್ಯಾಂಟ್ಸ್ ಕೊಡತಕ್ಕದ್ದು ಇದೆ. ಅದೇ ರೀತಿ ಜನಪದ ಸಾಹಿತ್ಯ ಅಕಾಡಮಿಗೆ ಪ್ರೋತ್ಸಾಹ ಕೊಡಬೇಕು. ಇನ್ನು ತುಂಗಭದ್ರಾ ಬೋರ್ಡಿನಿಂದ ದುಬಾರಿ ಖರ್ಚಿದೆಯಾದ ಕಾರಣ ಅದನ್ನು ಅಬಾಲಿಷ್ ಮಾಡಬೇಕೆಂದು ಹಿಂದೆ ತೀರ್ಮಾನವಾಗಿತ್ತು. ಈಗಲಾದರೂ ಅದನ್ನು ಅಬಾಲಿಷ್ ಮಾಡುತ್ತೀರಾ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಎನ್. ಜಿ. ನಾಯಕ್ --ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳು ಬಹಳ ಹಿಂದುಳಿದ ತಾಲ್ಲೂಕುಗಳಾಗಿ ಬರಗಾಲದ ದವಡೆಯಲ್ಲಿ ಸಿಕ್ಕಿವೆ. ಆ ಭಾಗಗಳಲ್ಲಿ ನವೆಂಬರ್ ತಿಂಗಳಿನಲ್ಲಿಯೇ ಕೆಲಸ ನಿಲ್ಲಿಸಿದ್ದಾರೆ. ಸುಮಾರು 20 ಸಾವಿರ ಜನ ಮೈಗ್ರೇಷನ್ ಆಗಿದ್ದಾರೆ. ಇದುವರೆಗೂ ಅಲ್ಲಿಯ ಜನರನ್ನು ಕಡೆಗಣಿಸಿದ್ದಾರೆ. ಅದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಯ ಜನತೆಗೆ ಅದಷ್ಟು ಜಾಗ್ರತೆ ಕೆಲಸಗಳನ್ನು ಮಂಜೂರು ಮಾಡಬೇಕಾಗಿ ಪ್ರಾರ್ಥನೆ. ಇನ್ನು ಮಾನ್ಯ ಮಂತ್ರಿಗಳು ಅಪ್ಪರ್ ಭದ್ರ ವಿಷಯದ ಬಗ್ಗೆ ಏನೂ ಹೇಳಿಲ್ಲ ಹಿಂದಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಸರ್ವೆ ಮಾಡಿದ್ದರು ಅದು ನಮ್ಮ ತಾಲ್ಲೂಕಿನವರೆಗೆ ಬಂದಿದೆ ಅದರ ಬಗ್ಗೆ ಗಣನೆಗೆ ತೆಗೆದುಕೊಂಡಿಲ್ಲ ತಾವು ಉದಾರಿಗಳು ಈಗಲಾದರೂ ತಾವು ಅದರ ಬಗ್ಗೆ ಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ

ಶ್ರೀ ಕೆ. ಎಸ್. ಕಾಳಮರಿಗೌಡ.-- ಸಹಕಾರ ಸಂಘಗಳಲ್ಲಿ ಯಾರು ಸಾಲ ತೆಗೆದುಕೊಂಡಿರುತ್ತಾರೆ ಅವರು ಜೂನ್ ತಿಂಗಳ ಕೊನೆಯೊಳಗೆ ಕಟ್ಟಿದರೆ ಬಡ್ಡಿ ವಜಾ ಮಾಡುತ್ತೇವೆಂದು ತಿಳಿಸಲಾಗಿದೆ ಇವೊತ್ತು 16 ಜಿಲ್ಲೆಗಳು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಿರುವಾಗ, ಈ ಪರಿಸ್ಥಿತಿಯಲ್ಲಿ ಜೂನ್ ತಿಂಗಳ ಕೊನೆಯ ವೇಳೆಗೆ ಅಸಲು ಹಣವನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಇದರ ಬಗ್ಗೆ ಎರಡೂ ಕಡೆಯ ಸದಸ್ಯರ ವಾದವನ್ನು ತೆಗೆದುಕೊಂಡು ಈಗ ತಾವು ಕೊಟ್ಟಿರತಕ್ಕ ಅವಧಿಯನ್ನು ಒಂದು ವರ್ಷದ ವರೆಗೆ ಮುಂದುವರಿಸುತ್ತೀರಾ ?

ಶ್ರೀ ಎ. ಮುನಿಯಪ್ಪ.—ಹಿಂದಿನ ಸರ್ಕಾರ 4 ಎಕರೆಗೆ ಒಳಪಟ್ಟು ರಿಜಿಸ್ಟ್ರೇಷನ್ ಆಗದಂತೆ ಕಾನೂನು ಮಾಡಿದ್ದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ಈಗ ಒಂದು ಎಕರೆ ಇರಲಿ, ಅರ್ಧ ಎಕರೆ ಇರಲಿ ಹಿಂದಿನ ಡೇಟ್ ಹಾಕಿ ರಿಜಿಸ್ಟ್ರೇಷನ್ ಮಾಡುತ್ತಿದ್ದಾರೆ. ಹಾಗೆಯೇ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲೂ ಹಿಂದಿನ ಡೇಟ್ ಹಾಕಿಕೊಂಡು ಅನ್ಯಾಯ ಮಾಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್ --ಅಧ್ಯಕ್ಷರೇ, ಹಿಂದಿನ ಸರ್ಕಾರ ದಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಸ್ಥಾಪಿಸುವುದಾಗಿ ಹೇಳಿತ್ತು. ಅದೇ ರೀತಿ ದೇಶದ ಭವ್ಯ ಭವಿಷ್ಯಕ್ಕೋಸ್ಕರ ದುಡಿದಂತ ದಿವಂಗತ ದೇವರಾಜ ಅರಸರ ಪ್ರತಿಮೆಯನ್ನು ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಸ್ಥಾಪಿಸುವಾಗ ಅದರ ಜೊತೆಯಲ್ಲೇ ದೇವರಾಜ್ ಅರಸರ ಪ್ರತಿಮೆಯನ್ನು ವಿಧಾನ ಸೌಧದ ಮುಂಭಾಗದಲ್ಲಿ ಸ್ಥಾಪಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಎ. ಬಿ. ಪಾಟೀಲ್.--ಅಧ್ಯಕ್ಷರೆ. ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ನಾನು ತುಂಬಾ ಸ್ವಾಗತ ಮಾಡುತ್ತೇನೆ. ಹೈದರಾಬಾದ್ ಕರ್ನಾಟಕ ಬರಗಾಲ ಪೀಡಿತ ಪ್ರದೇಶ ಎಂದು ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ತಿಳಿಸಿದ್ದಾರೆ. ಇವೊತ್ತು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು ಸುತ್ತಮುತ್ತ ನೀರಿನ ತಾಪತ್ರಯ ಜಾಸ್ತಿ ಇದೆ. ಈ ಕಡೆಗೆ ಸರ್ಕಾರ ಹೆಚ್ಚಿನ ಗಮನಹರಿಸಿ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಒಬ್ಬರು ಸದಸ್ಯರು.--ಅಧ್ಯಕ್ಷರೆ, ನಾನು ಹಿಂದೆ 5-6 ವರ್ಷಗಳ ಕಾಲ ಗ್ರಾಮಪಂಚಾಯಿತಿ ಛೇರ್

ಹುನ್ ಆಗಿದೆ. ಸಹಕಾರ ಕ್ಷೇತ್ರದ ಬಗ್ಗೆ ಹೇಳಬೇಕೆಂದರೆ. ಜನರು ಇವೊತ್ತು ಮೂರು ತಿಂಗಳಲ್ಲಿ ಸಾಲ ವಾಪಸ್ಸು ಮಾಡಬೇಕೆಂದರೆ ಕಷ್ಟ ಇದೆ. ಅವರಿಗೆ ಒಂದು ವರ್ಷವಾದರೂ ಸಮಯ ಕೊಡಬೇಕು. ಇನ್ನು ಜನತಾ ಮನೆಗಳ ಬಗ್ಗೆ ಹೇಳಬೇಕೆಂದರೆ, ನೂರಕ್ಕೆ 20 ಮನೆಗಳು ಸರಿಯಾಗಿ ಇಲ್ಲದೇ ಇರಬಹುದು. ಉಳಿದ 75 ಮನೆಗಳು ಚೆನ್ನಾಗಿವೆ. ಆ 25 ಮನೆಗಳು ಕೆಡಲಿಕ್ಕೆ ಕಾರಣ ಸರ್ಕಾರ ಅಲ್ಲ. ಅಲ್ಲಿ ಯಾರು ಕೆಲಸ ಮಾಡಿಸಿರುತ್ತಾರೆ ಅವರೇ ಕಾರಣ ಆಗುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.—ಅಧ್ಯಕ್ಷರೆ, ರೋಣ, ಮುಂಡರಗಿ ಶಿರಹಟ್ಟಿ. ಭಾಗಗಳಲ್ಲಿ ಹೆಚು ಬರಗಾಲ ಇರುವುದರಿಂದ ಸರ್ಕಾರ ಆ ಭಾಗಕ್ಕೆ ಹೆಚ್ಚು ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಸಣ್ಣ ನೀರಾವರಿ ಕೆಲಸಗಳಿಗೆ ಹೆಚ್ಚು ಹಣ ಕೊಟ್ಟಿಲ್ಲ. ಮಲೆನಾಡು ಪ್ರದೇಶದಲ್ಲಿ ಸಣ್ಣ ನೀರಾವರಿ ಕೆಲಸ ಕಾರ್ಯಗಳು ಕುಂಠಿತವಾಗಿವೆ. ಇದಕ್ಕೆ ಹೆಚ್ಚಿನ ಹಣ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಒಬ್ಬ ಸದಸ್ಯರು.—ಅಧ್ಯಕ್ಷರೆ, ನಮ್ಮ ಹೈದರಾಬಾದ್ ಕರ್ನಾಟಕದ ಭಾಗ ಬಹಳ ಹಿಂದುಳಿದ ಪ್ರದೇಶವಾಗಿದೆ. ಗುಲ್ಬರ್ಗ, ಕುಷ್ಟಗಿ ಪ್ರದೇಶಗಳಲ್ಲಿ ಜನರು ಕಂಗಾಲಾಗಿದ್ದಾರೆ. ಅಪ್ಪರ್ ತುಂಗಾ ಯೋಜನೆ ಸರ್ಕಾರದ ಮುಂದೆ ಇದೆ. ಅದಕ್ಕೆ ಈ ಸಾರಿ ಬಡ್ಜೆಟ್‌ನಲ್ಲಿ ಸಾಕಷ್ಟು ಹಣ ಇಟ್ಟಿಲ್ಲ. ಈ ಬಗ್ಗೆ ಸಾಕಷ್ಟು ಹಣ ಒದಗಿಸಬೇಕೆಂದು ಕೇಳಿಕೊಂಡಿದ್ದೇವೆ. ನಾವು ಮೊದಲನೇ ಬೆಳೆ ಬೆಳೆದುಕೊಳ್ಳುತ್ತೇವೆ. ಎರಡನೇ ಬೆಳೆ ಬರುವುದಿಲ್ಲ. ಹೈದರಾಬಾದ್ ಪ್ರದೇಶ ಬಹಳ ಹಿಂದುಳಿದ ಪ್ರದೇಶ ಅಲ್ಲಿಗೆ ಬಡ್ಜೆಟ್‌ನಲ್ಲಿ ಸಾಕಷ್ಟು ಹಣ ಇಲ್ಲ. ಅಲ್ಲಿಗೆ ಸಾಕಷ್ಟು ಹಣ ಒದಗಿಸಿ ತ್ವರಿತವಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇನ್ನು ಮೂರು ಕೋಟಿ ರೂಪಾಯಿಗಳ ಕುಷ್ಟಗಿ ಯೋಜನೆ ಇದೆ, ಅದನ್ನು ತೆಗೆದುಕೊಳ್ಳಬೇಕು. ಇನ್ನು ಕೊಪ್ಪಳದಲ್ಲಿ ಒಂದು ಯೋಜನೆ ಇದೆ, ಅದನ್ನು ತೆಗೆದುಕೊಳ್ಳಬೇಕು. ನಾನು ಹೇಳಿರತಕ್ಕದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಮರೆಯಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

1.00 p m.

ಒಬ್ಬರು ಸದಸ್ಯರು.—ಸ್ವಾಮಿ, ಹೈದರಾಬಾದ್ ಕರ್ನಾಟಕದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣಕ್ಕೆ ಬಹಳ ತೊಂದರೆಯಾಗಿದೆ. ಈ ಬಡ್ಜೆಟ್‌ನಲ್ಲಿ ಶಿಕ್ಷಣಕ್ಕಾಗಿ ತಾವು ಹೆಚ್ಚಿನ ಹಣವನ್ನೊದಗಿಸಿಲ್ಲ. ಆದಕಾರಣ ಪ್ರಾಥಮಿಕ ಶಿಕ್ಷಣಕ್ಕೆ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಹಣವನ್ನೊದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಹೈದರಾಬಾದ್ ಕರ್ನಾಟಕದಲ್ಲಿ ಸುಮಾರು 20-25 ಮೈಲಿ ದೂರದವರೆಗೂ ಈ ವಿದ್ಯಾಭ್ಯಾಸಕ್ಕಾಗಿ ಮಕ್ಕಳು ಹೋಗಬೇಕಾಗಿದೆ. ಆದ್ದರಿಂದ ತಾವು ಈ ಬಗ್ಗೆ ಗಮನ ಹರಿಸಿ ಈ ತೊಂದರೆಯನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ವಿವರಣೆಯ ರೂಪದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಈಗ ಎಲ್ಲ ಮಾನ್ಯ ಸದಸ್ಯರ ಪ್ರಶ್ನೆ ಹಾಗೂ ಸೂಚನೆಗಳಿಗೆ ನಾನು ಉತ್ತರವನ್ನು ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಸದನದಲ್ಲಿ ಸಂಬಂಧಪಟ್ಟ ಖಾತೆಗಳ ಮೇಲಿನ ಬೇಡಿಕೆಗಳು ಬಂದಾಗ ಮಾನ್ಯ ಸದಸ್ಯರು ತಮ್ಮ ತಮ್ಮ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನಾಗಲಿ ಮಾಹಿತಿಯನ್ನಾಗಲಿ ಪಡೆದುಕೊಳ್ಳಬಹುದು. ಪ್ರತಿಯೊಬ್ಬ ಮಾನ್ಯ ಸದಸ್ಯರೂ ತಮ್ಮ ತಮ್ಮ ಸೂಚನೆಗಳು ಬಹಳ ಮುಖ್ಯವಾದುದೆಂದು ಹೇಳುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಚೌಡಯ್ಯನವರು ಕೇಳಿದ ಪ್ರಶ್ನೆ ನೀರಾವರಿ ಖಾತೆಗೆ ಸಂಬಂಧಪಟ್ಟದ್ದು. ಆದ್ದರಿಂದ ಈ ಖಾತೆಗೆ ಸಂಬಂಧಪಟ್ಟಂಥ ಬೇಡಿಕೆ ಸಭೆಯ ಮುಂದೆ ಬಂದಾಗ ಮಾನ್ಯ ಸದಸ್ಯರು ಎಷ್ಟು ಬೇಕಾದರೂ ಚರ್ಚೆ ಮಾಡಬಹುದು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿದಂಥ ವಿಚಾರಗಳ ಬಗ್ಗೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಈ ಹಿಂದೆಯೂ ಕೂಡ ಇದರ ಬಗ್ಗೆ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಹಿಂದಿನ ಸರ್ಕಾರ ಯಾವ ಯಾವ ಯೋಜನೆಗಳನ್ನು ಪ್ರಾರಂಭ ಮಾಡಿತ್ತೋ ಅದರಲ್ಲಿ ಯಾವುದನ್ನೂ ನಾವು ನಿಲ್ಲಿಸುವುದಿಲ್ಲ. ಅವರ ಯೋಜನೆಗಳು ಪೂರ್ತಿಯಾಗಲು ಅನುಕೂಲವಾಗುವಂತೆ ನಾನು ಅದಕ್ಕೆ ಇನ್ನೂ ಸ್ವಲ್ಪ ಹೆಚ್ಚಿನ ಗಮನ ಹರಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಖರ್ಗೆಯವರೂ ಹಾಗೂ ಇತರರು ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್‌ನ್ನು ನಿಲ್ಲಿಸಿದರೆ ಸೋರ್ಸಸ್ ಹೊರಟು ಹೋಗುತದೆ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನ್-

ಪ್ಲಾನ್ಡ್ ಎಕ್ಸ್‌ಪೆಂಡಿಚರ್‌ನಲ್ಲಿ ಅನವಶ್ಯಕವಾಗಿ ಖರ್ಚಾಗುವುದನ್ನು ನಿಲ್ಲಿಸುತ್ತೇನೆಂದು ನಾನು ಹೇಳಿದ್ದೇನೆ. ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್ ಎಲ್ಲಾ ಸರಿಯೆಂದು ನಾನು ಹೇಳುವುದಿಲ್ಲ. ಮಾನ್ಯ ಸದಸ್ಯರಾದ ಪ್ರಜಾಪತಿಯವರು ಮಾತನಾಡುತ್ತಾ ಕೃಷಿ ಕಾರ್ಮಿಕರ ವಿಚಾರ ಮತ್ತು ಹೆಂಗಸರ ವಿಚಾರದಲ್ಲಿ ಹೇಳಿದ್ದಾರೆ. ನನ್ನ ಮನಸ್ಸಿನಲ್ಲಿ ಏನು ಅಭಿಪ್ರಾಯ ಇತ್ತು ಅದನ್ನು ವ್ಯಕ್ತಪಡಿಸಿದ್ದೇನೆ. ಈಗ ಮಿನಿಮಂ ವೇಜಸ್ ಏನಿದೆ ಅದು ಮಾರ್ಪಾಡಾಗಿ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಹೆಂಗಸರ ವಿಚಾರವನ್ನೂ ಕೂಡ ಆಗ ಗಮನಿಸುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ನಾರಾಯಣ್ ಕುಮಾರ್ ಹಾಗೂ ಮತ್ತಿತರ ಕೆಲವು ಸದಸ್ಯರು ಪ್ರಸ್ತಾಪ ಮಾಡುತ್ತಾ ವೃತ್ತಿಕರ ತೆರಿಗೆಯನ್ನು ಪೂರ್ತಿಯಾಗಿ ತೆಗೆದುಹಾಕಿದ್ದರೆ ಚೆನ್ನಾಗಿತ್ತು ಎಂದು ಹೇಳಿದರು. ಅದು ಆಗುವುದಿಲ್ಲವೆಂದು ನಾನು ಹೇಳಿದ್ದೇನೆ. ಯಾವ ಯಾವ ಬಾಬಿನಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆಂದು ನೋಡಿಕೊಂಡು ಮಾನ್ಯ ಮೊಯಿಲಿಯವರು ಹೇಳಿದಂತೆ ಕೊನೆಯದಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಮೊಯ್ಲಿಯವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಹಿಂದೆ ನಾನು ಅರ್ಥ ಮಂತ್ರಿಯಾಗಿದ್ದಾಗ ನನ್ನ ಆಯವ್ಯಯ ಭಾಷಣವನ್ನು ಯಾವ ರೀತಿ ನೋಡುತ್ತಿದ್ದರೋ. ಅದೇ ರೀತಿಯಲ್ಲಿ ಇಂದಿನ ಆಯವ್ಯಯ ಪತ್ರವನ್ನೂ ಮಾನ್ಯ ಮೊಯ್ಲಿಯವರು ನೋಡಿದ್ದಿದ್ದರೆ, ಓದಿದ್ದಿದ್ದರೆ ಅವರಿಗೇ ಚೆನ್ನಾಗಿ ಗೊತ್ತಾಗುತ್ತಿತ್ತು. ಇದರಲ್ಲಿ ಬಹಳ ಸೂಕ್ಷ್ಮವಾದ ವಿಚಾರಗಳಿವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು 3-4 ವಿಷಯಗಳನ್ನು ಪ್ರಸ್ತಾಪ ಮಾಡಿದರು ಅದಕ್ಕೆ ಸಂಬಂಧಪಟ್ಟ ಖಾತೆಗಳ ಬೇಡಿಕೆಗಳು ಸದನದ ಮುಂದೆ ಚರ್ಚೆಗೆ ಬಂದಾಗ ಸಚಿವರುಗಳು ಉತ್ತರ ಕೊಡುತ್ತಾರೆ. ಆದರೆ ನಾನು ಈಗಾಗಲೇ ಹೇಳಿದಂತೆ ಎಲ್ಲ ಮಾನ್ಯ ಸದಸ್ಯರ ಪ್ರಶ್ನೆಗಳಿಗೂ ಸಧ್ಯದಲ್ಲಿ ಉತ್ತರ ಕೊಡಲು ಸಾಧ್ಯವಿಲ್ಲದಿರುವುದಕ್ಕೆ ವಿಷಾದಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಕ್ಯಾಪಿಟೇಷನ್ ಫೀ ದುಡ್ಡನ್ನು ಕೆಲವರಿಂದ ತೆಗೆದುಕೊಂಡು ಚುನಾವಣೆಗೆ ವಂಚಿತವಾಗಿ ಹಣವನ್ನು ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಆ ಲೆಕ್ಕವನ್ನು ಪರಿಶೀಲಿಸಬೇಕೆಂದು ನಾನು ಹೇಳಿದ್ದೇನೆ...

ಶ್ರೀ ರಾಮಕೃಷ್ಣ ಹೆಗಡೆ.—ಯಾರ್‍ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ಲೆಕ್ಕ ಬಂದಾಗ ಪರಿಶೀಲಿಸಲಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವು ರಿಜಿಸ್ಟರ್ಡ್ ಕಂಪನಿಗಳಲ್ಲ. ಅವು ಲಕ್ಷಾಂತರ ರೂಪಾಯಿ ಕೊಟ್ಟಿವೆ

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಈಗ 16 ಜಿಲ್ಲೆಗಳಲ್ಲಿ ಬರಗಾಲ ಇದೆಯೆಂದು ತಾವು ಹೇಳುತ್ತಿದ್ದೀರಿ. ಆ ಜಿಲ್ಲೆಗಳವರು ತಾವು ನಿಗದಿಮಾಡಿರುವ ಅವಧಿಯೊಳಗೆ ಸಾಲವನ್ನು ವಾಪಸ್ ಕೊಡುವುದಕಾಗುವುದಿಲ್ಲ. ತಾವು ಅತಿಯಾದ ಉತ್ಸಾಹದಲ್ಲಿ ಒಟ್ಟು 14ಕೋಟಿ ರೂ.ಗಳ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ...

ಶ್ರೀ ರಾಮಕೃಷ್ಣ ಹೆಗಡೆ. ಬರಗಾಲ ಈ 16 ಜಿಲ್ಲೆಗಳಲ್ಲಿದೆ ಎಂಬುದನ್ನು ರಿಸರ್ವ್ ಬ್ಯಾಂಕ್‌ನವರೂ ಒಪ್ಪುತ್ತಾರೆ. ಆ ಸಾಲವನ್ನು ಮೀಡಿಯಂ ಟರ್ಮ್ ಲೋನ್ ಆಗಿ ಕನ್‌ವರ್ಟ್ ಮಾಡುತ್ತೇವೆ. ಆದರೆ ರಿಸರ್ವ್ ಬ್ಯಾಂಕ್‌ನವರ ಅನುಮತಿ ಇಲ್ಲದೆ ನಾವು ಈ ಸಾಲವನ್ನು ಮುಂದಕ್ಕೆ ಹಾಕಿದರೆ ಮತ್ತೆ ನಮಗೆ ರಿಸರ್ವ್ ಬ್ಯಾಂಕ್‌ನಿಂದ ಹಣ ಸಿಕ್ಕುವುದಿಲ್ಲ ಆಗ ರೈತರಿಗೆ ತೊಂದರೆಯಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ..

ಶ್ರೀ ರಾಮಕೃಷ್ಣ ಹೆಗಡೆ.—ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಪ್ರಶ್ನೆ.

ಉಪಾಧ್ಯಕ್ಷರು.—ಇಲ್ಲಿಗೆ ಈ ಸಭೆಯ ಕಾರ್ಯಕಲಾಪಗಳು ಮುಗಿದು ಮತ್ತೆ 28ನೇ ತಾರೀಖು ಸೋಮವಾರ ಬೆಳಗ್ಗೆ 11 ಗಂಟೆಗೆ ಸೇರುತ್ತದೆ.

[ಸಭೆಯು ಮಧ್ಯಾಹ್ನ 1 ಘಂಟೆ 8 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಸೋಮವಾರ ಮಾರ್ಚಿ 28 1983ರ ಬೆಳಿಗ್ಗೆ 11 ಘಂಟೆಗೆ ಸೇರಲು ನಿಶ್ಚಯಿಸಿಯಾಯಿತು.]

WD 7315